ವೈದ್ಯಕೀಯ ಸಾಹಿತ್ಯ ಮಾಲೆ

ಕರ್ನಾಟಕ ಸರ್ಕಾರ

# ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮತ್ತು ತಡೆಗಟ್ಟುವಿಕೆ

ಎನ್. ವಿಶ್ವರೂಪಾಚಾರ್



ಕನ್ನಡ ಪುಸ್ತಕ ಪ್ರಾಧಿಕಾರ

ವೈದ್ಯಕೀಯ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ|| ಸಿ.ಆರ್. ಚಂದ್ರಶೇಖರ್

# ಸಾಂಕ್ರಾಮಿಕ ರೋಗಗಳು ನಿಯಂತ್ರಣ ಮತ್ತು ತಡೆಗಟ್ಟುವಿಕೆ

ಡಾ. ಎನ್. ವಿಶ್ವರೂಪಾಚಾರ್

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ,

ಬೆಂಗಳೂರು – ೫೬೦ ೦೦೨.

**SAANKRAMIKA ROGAGALU : NIYANTRANA MATTU TADEGATTUVIKE** : by Dr. N. Vishwa Roopachar, Published By ***Ashoka N. Chalawadi***, Administrative Officer, Kannada Pustaka Pradhikara, Kannada Bhavana, J.C.Road, Bengalooru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಮೊದಲ ಮುದ್ರಣ: ೨೦೧೦
ಪುಟಗಳು: xvi + ೧೧೮
ಬೆಲೆ: ₹ ೬೦-೦೦
ಪ್ರತಿಗಳು : ೧೦೦೦

First Print: 2010
Pages: xvi + 118
Price: ₹ 60-00
Copies: 1000
ISBN-81-7713-27D-9

ಪ್ರಕಾಶಕರು :
**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಕರಡು ತಿದ್ದಿದವರು : ಲೇಖಕರು

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಪೋಸ್ಟ್, ಬೆಂಗಳೂರು-೫೬೦ ೦೨೧.
ದೂ: ೦೮೦-೨೩೪೭ ೨೮೩೮

## ವೈದ್ಯಕೀಯ ಸಾಹಿತ್ಯ ಮಾಲೆ

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ॥ ಸಿ.ಆರ್.ಚಂದ್ರಶೇಖರ್**

ಸಂಚಾಲಕರು

**ಅಶೋಕ ಎನ್. ಚಲವಾದಿ**

ಆಡಳಿತಾಧಿಕಾರಿಗಳು

ಸಂಪಾದಕ ಮಂಡಳಿ

**ಡಾ॥ ನಾ.ಸೋಮೇಶ್ವರ**

**ಡಾ॥ ವಸಂತ ಕುಲಕರ್ಣಿ**

**ಡಾ॥ ಪದ್ಮಿನಿ ಪ್ರಸಾದ್**

**ಡಾ॥ ವಸುಂಧರಾ ಭೂಪತಿ**

**ಡಾ॥ ವಿಜಯಲಕ್ಷ್ಮೀ ಬಾಳೇಕುಂದ್ರಿ**

**ಡಾ॥ ಕೆ.ಪಿ. ಪುತ್ತೂರಾಯ**

# ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ಅಪರೂಪದ ಹಾಗೂ ಶಾಸ್ತ್ರಸಂಬಂಧ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ವಿವಿಧ ಮಾಲಿಕೆಯಡಿ ಬೇರೆ ಪ್ರಕಾಶಕರು ಅಷ್ಟಾಗಿ ಪ್ರಕಟಿಸದ ಪುಸ್ತಕಗಳು ಜನಸಾಮಾನ್ಯರಿಗೆ ಲಭ್ಯವಾಗಬೇಕೆಂಬ ಉದ್ದೇಶದಿಂದ ಪ್ರಕಟಿಸುತ್ತಾ ಬಂದಿದೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ಸಾಹಿತ್ಯಿಕವಾಗಿ ಪ್ರೌಢಾವಸ್ಥೆಯನ್ನು ತಲುಪಿರುವುದರಲ್ಲಿ ಸಂಶಯವಿಲ್ಲ. ಸಮಾಜ ಈ ಒಂದು ಶತಮಾನದಿಂದ ಬಹಳ ಶೀಘ್ರಗತಿಯಲ್ಲಿ ಮುಂದುರೆಯುತ್ತಿದ್ದು ಆ ವೇಗಕ್ಕೆ ತಕ್ಕಾಗಿ ಕನ್ನಡ ಭಾಷೆಯೂ ಹೊಸ ಪ್ರಯೋಗಗಳನ್ನು ಮಾಡುತ್ತಾ ಹೊಸತನ್ನು ತನ್ನಲ್ಲಿ ಅರಗಿಸಿಕೊಳ್ಳುವುದು ಅನಿವಾರ್ಯ. ವೈದ್ಯಕೀಯ, ಇಂಜಿನಿಯರಿಂಗ್, ವಿಜ್ಞಾನ ಲೋಕಗಳ ಬಗ್ಗೆ ಕನ್ನಡದಲ್ಲಿ ಸಾಕಷ್ಟು ಪುಸ್ತಕಗಳು ಹೊರಬರುತ್ತಿದ್ದರೂ ಈಗಿನ ಕಾಲ ವೇಗಕ್ಕೆ ತಕ್ಕಷ್ಟು ಕನ್ನಡದಲ್ಲಿ ಈ ವಿಭಾಗಗಳಲ್ಲಿ ಪುಸ್ತಕಗಳು ಹೊರಬರುತ್ತಿಲ್ಲ. ಬಂದಂತಹ ಪುಸ್ತಕಗಳೂ ಕೂಡಾ ಜನಸಾಮಾನ್ಯರಿಗೆ ಎಟಕುವ ದರದಲ್ಲಿ ಲಭ್ಯವಾಗುತ್ತಿಲ್ಲ. ಈ ಕೊರತೆಯನ್ನು ತುಂಬಬೇಕೆಂಬ ಸದಾಶಯದಿಂದ ಕೆಲ ಮಾಲೆಗಳಲ್ಲಿ ಪುಸ್ತಕಗಳನ್ನು ಹೊರತರುವ ಪ್ರಯತ್ನವನ್ನು ಮಾಡಿದ್ದೇವೆ.

ಈ ದಿಶೆಯಲ್ಲಿ ಪ್ರಾಧಿಕಾರವು ಹಮ್ಮಿಕೊಂಡಿರುವ ಮಹತ್ವದ ಯೋಜನೆಗಳಲ್ಲಿ ವೈದ್ಯಕೀಯ ವಿಜ್ಞಾನ ಸಾಹಿತ್ಯದ ಮಾಲೆಯೂ ಒಂದು. ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಹೆಚ್ಚು ಗ್ರಂಥಗಳು ಲಭ್ಯವಿಲ್ಲದೆ ಇರುವುದನ್ನು ಗಮನಿಸಿದ ಪ್ರಾಧಿಕಾರ ಈ ಮಾಲೆಯನ್ನು ಆರಂಭಿಸಬೇಕೆಂದು ಒಂದು ಸಂಪಾದಕ ಮಂಡಳಿಯನ್ನು ನೇಮಿಸಿತು. ಈ ಸಂಪಾದಕ ಮಂಡಳಿಯಲ್ಲಿ ಸಂಪಾದಕರಾಗಿರಲು ನಾಡಿನ ಹಿರಿಯ ವೈದ್ಯರಾದ ಡಾ॥ ಸಿ.ಆರ್.ಚಂದ್ರಶೇಖರ್ ಅವರು ಒಪ್ಪಿರುತ್ತಾರೆ. ಮಂಡಳಿಯ ಸದಸ್ಯರಾಗಿ ಹಿರಿಯ ವೈದ್ಯರುಗಳಾದ ಡಾ॥ ನಾ.ಸೋಮೇಶ್ವರ ಡಾ॥ ವಸಂತ ಕುಲಕರ್ಣಿ, ಡಾ॥ ಪದ್ಮಿನಿ ಪ್ರಸಾದ್, ಡಾ॥ ವಸುಂಧರಾ ಭೂಪತಿ, ಡಾ॥ ವಿಜಯಲಕ್ಷ್ಮೀ ಬಾಳೇಕುಂದ್ರಿ, ಡಾ॥ ಕೆ.ಪಿ. ಪುತ್ತೂರಾಯ ಅವರುಗಳು ಈ

ಕಾರ್ಯವನ್ನು ಸುಲಲಿತವಾಗಿ ನೆರವೇರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಮಾಲಿಕೆಯಲ್ಲಿ ಸಾಂಕ್ರಾಮಿಕ ರೋಗಗಳು ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೃತಿಯನ್ನು ರಚಿಸಿಕೊಡಲು ಒಪ್ಪಿ ಹಸ್ತಪ್ರತಿಯನ್ನು ನೀಡಿ ಸಹಕರಿಸಿದ ಡಾ. ಎನ್. ವಿಶ್ವರೂಪಾಚಾರ್ ಅವರಿಗೆ ಆಭಾರಿಯಾಗಿದ್ದೇವೆ.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು

## ಸಂಪಾದಕರ ಮಾತು

ಒಬ್ಬರಿಂದ ಇನ್ನೊಬ್ಬರಿಗೆ, ಅವರಿಂದ ಎಲ್ಲರಿಗೆ ಹರಡುವ ರೋಗಗಳನ್ನು ಸಾಂಕ್ರಾಮಿಕ ರೋಗಗಳೆನ್ನುತ್ತಾರೆ. ರೋಗಕಾರಕಗಳಾದ ಬ್ಯಾಕ್ಟೀರಿಯಾ, ವೈರಸ್, ಪರಾವಲಂಬಿ ಜೀವಿಗಳು, ಮನುಷ್ಯರನ್ನೇ ವಾಹಕಗಳನ್ನಾಗಿ ಮಾಡಿಕೊಳ್ಳಬಹುದು ಅಥವಾ ಪ್ರಾಣಿ, ಪಕ್ಷಿ, ಕೀಟಗಳನ್ನು ವಾಹಕಗಳನ್ನಾಗಿ ಮಾಡಿಕೊಳ್ಳಬಹುದು. ಕೆಲವು ರೋಗಾಣುಗಳು ಗಾಳಿ, ನೀರು ಆಹಾರ ಮಣ್ಣಿನ ಮೂಲಕ ಹರಡುತ್ತವೆ. ಅತಿ ಸಾಮಾನ್ಯ ಸಾಂಕ್ರಾಮಿಕ ರೋಗಗಳೆಂದರೆ ಕಾಲರಾ, ಪ್ಲೇಗ್, ಸಿಡುಬು, ಕ್ಷಯ, ಕುಷ್ಠ, ಟೈಫಾಯಿಡ್ ಜ್ವರ, ನಾಯಿಕೆಮ್ಮು, ದಡಾರ, ಫ್ಲೂ, ಡೆಂಗೂ, ಚಿಕುನ್‌ಗುನ್ಯಾ, ಪೋಲೀಯೋ, ಜಾಂಡೀಸ್, ಮಿದುಳ ಜ್ವರ, ಆಮಶಂಕೆ, ಫೈಲೇರಿಯಾ, ಮಲೇರಿಯಾ, ಸಿಫಿಲಿಸ್ ಗೊನೋರಿಯಾ, ಏಡ್ಸ್ ರೋಗ, ಹೊಟ್ಟೆಯಲ್ಲಿ ಹುಳ, ಹೇನು, ಕೂರೆ, ಕಜ್ಜಿ, ಪಟ್ಟೆ ದೊಡ್ಡದೇ.

ಹಿಂದೆ ಕಾಲರಾ, ಪ್ಲೇಗ್, ಸಿಡುಬು, ಫ್ಲೂ, ಟೈಫಾಯಿಡ್‌ಗಳು ಸಾವಿರಾರು ಜನರ ಪ್ರಾಣಗಳನ್ನು ಹರಣಮಾಡುತ್ತಿದ್ದವು. ಹಳ್ಳಿಹಳ್ಳಿಗಳೇ ನಿರ್ಜನವಾಗುತ್ತಿದ್ದವು. ಹೀಗಾಗಿ ಈ ಸಾಂಕ್ರಾಮಿಕ ರೋಗಗಳನ್ನು 'ಮಹಾಮಾರಿ ಕಾಯಿಲೆ' ಗಳೆಂದು ಕರೆಯುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಈ ಬೃಹತ್ ಪ್ರಮಾಣದ ಸಾಂಕ್ರಾಮಿಕಗಳಿಲ್ಲ. ಆದರೂ ಇತ್ತೀಚೆಗೆ ಚಿಕುನ್‌ಗುನ್ಯಾ, ಡೆಂಗ್ಯೂ, ಎಚ್‌೧ಎನ್‌೧ ಸೋಂಕು ಕ್ಷಿಪ್ರಗತಿಯಲ್ಲಿ, ಅತ್ಯಲ್ಪಗತಿಯಲ್ಲಿ, ಅತ್ಯಲ್ಪಕಾಲದಲ್ಲಿ ಪ್ರಪಂಚದಲ್ಲಿ ಹರಡಿರುವುದನ್ನು ನೋಡಿದ್ದೇವೆ. ವೇಗದ ವಾಹನಗಳು ಲಭ್ಯವಿರುವ ಈ ಕಾಲದಲ್ಲಿ ಹೆಚ್ಚು ಜನ ದೇಶದೊಳಗೆ ಮತ್ತು ದೇಶದಿಂದ ದೇಶಕ್ಕೆ ಪ್ರಯಾಣಿಸುವುದರಿಂದ ಅನೇಕ ರೋಗಗಳು ಬಹು ಬೇಗ ಹರಡುವಂತಾಗಿದೆ. ಲಕ್ಷಾಂತರ ಜನ ಸೇರುವ ಕುಂಭಮೇಳಗಳು, ರಥೋತ್ಸವಗಳು, ಧಾರ್ಮಿಕ ಚಟುವಟಿಕೆಗಳು, ಪುಣ್ಯಕ್ಷೇತ್ರಗಳು ಸಾಂಕ್ರಾಮಿಕ ರೋಗಗಳನ್ನು ಹರಡುವುದರಲ್ಲಿ ಪಾಲ್ಗೊಳ್ಳುತ್ತವೆ. ಆಗ ನಾವೆಲ್ಲ ಎಷ್ಟು ಎಚ್ಚರವಾಗಿದ್ದರೆ ಅಷ್ಟು ಒಳ್ಳೆಯದು.

ಸ್ವಚ್ಛತೆ. ನೈರ್ಮಲ್ಯತೆಯ ಅಭಾವ; ನಾವು ಸೇವಿಸುವ ನೀರು, ಗಾಳಿ, ಆಹಾರ ಮಲಿನಗೊಳ್ಳುವುದು, ರೋಗಿಯ ಸಂಪರ್ಕಕ್ಕೆ ಬರುವುದು, ರೋಗಿಯ ಎಂಜಲು, ಮೂಗಿನ ಸ್ರಾವ, ಮಲಮೂತ್ರಗಳ ಸಂಪರ್ಕ, ಮನೆಯೊಳಕ್ಕೆ ಪ್ರಾಣಿಗಳು, ಕೀಟಗಳು ಬರಲು ಬಿಡುವುದು, ನೊಣ–ಸೊಳ್ಳೆ–ಜಿರಳೆ, ಇಲಿ ಹೆಗ್ಗಣಗಳು ಹೆಚ್ಚುವಂತೆ ಮಾಡುವುದು, ನಿತ್ಯ ಸ್ನಾನ ಮಾಡದಿರುವುದು, ಉಡುಗೆ ತೊಡುಗೆಗೆಗಳನ್ನು ಸ್ವಚ್ಛವಾಗಿಡದಿರುವುದು, ಕೊಳಕು ಪರಿಸರ, ಸೋಂಕು ರೋಗಗಳು ಹರಡಿ ಅದು ಸಾಂಕ್ರಾಮಿಕ ರೋಗಗಳಾಗಲು ನಾವೇ ಕಾರಣರಾಗುತ್ತೇವೆ. ಸ್ವಚ್ಛಂದ ಲೈಂಗಿಕ ಸಂಪರ್ಕದಿಂದ ಲೈಂಗಿಕ ರೋಗಗಳು ಎಲ್ಲೆಡೆ ಹರಡುತ್ತೇವೆ. ಇವೆಲ್ಲ ತಪ್ಪಬೇಕಾದರೆ, ವೈಯಕ್ತಿಕ ಸ್ವಚ್ಛತೆ, ಮನೆ, ಬೀದಿ, ಊರು ಮತ್ತು ಪರಿಸರ ನೈರ್ಮಲ್ಯವನ್ನು ನಾವೆಲ್ಲ ಕಾಪಾಡಲೇಬೇಕು. ಸೋಂಕು ರೋಗಿಗಳನ್ನು ಪ್ರತ್ಯೇಕಿಸಿ, ಅವರಿಂದ ರೋಗ ಇತರರಿಗೆ ಹರಡದಂತೆ ಮುಂಜಾಗ್ರತೆ ವಹಿಸಬೇಕು. ಸ್ವಚ್ಛತೆಯೇ ದೈವತ್ವ ಎಂಬ ನಾಣ್ಣುಡಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಶ್ರೀ ಎನ್. ವಿಶ್ವರೂಪಾಚಾರ್‌ರವರು ವೃತ್ತಿಯಿಂದ ಆರೋಗ್ಯ ಶಿಕ್ಷಕರು. ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಭೋದಕರಾಗಿ ಸೇವೆಸಲ್ಲಿಸಿ ನಿವೃತ್ತರಾದವರು. ಆರೋಗ್ಯ ಶಿಕ್ಷಣ ಅವರ ಉಸಿರು. ಕನ್ನಡದಲ್ಲಿ ವೈದ್ಯ ಸಾಹಿತ್ಯ ಕ್ಷೇತ್ರದಲ್ಲಿ ಒಂದು ನೂರಕ್ಕೂ ಹೆಚ್ಚಿನ ಪುಸ್ತಕಗಳನ್ನೂ ಬರೆದ ಮೂವರಲ್ಲಿ ಒಬ್ಬರು (ಇನ್ನಿಬ್ಬರು : ಡಾ॥ ಪಿ.ಎಸ್. ಶಂಕರ್ ಮತ್ತು ಡಾ॥ ಸಿ.ಆರ್. ಚಂದ್ರಶೇಖರ್) ಉಪನ್ಯಾಸಗಳು, ಸಂವಾದಗಳು, ಲೇಖನಗಳು, ಪುಸ್ತಕಗಳು, ಕಾರ್ಯಾಗಾರಗಳು ಮತ್ತು ಪುಸ್ತಕ ಮಾರಾಟದ ಮೂಲಕ ಜನರಿಗೆ ಆರೋಗ್ಯ–ಅನಾರೋಗ್ಯದ ಬಗ್ಗೆ ತಿಳುವಳಿಕೆ ನೀಡಲು ಹಗಲಿರುಳು ದುಡಿಯುತ್ತಿದ್ದಾರೆ. ತಮ್ಮ ಆರ್ಥಿಕ ಮತ್ತು ಆರೋಗ್ಯ ಸಮಸ್ಯೆಗಳನ್ನು ಮೆಟ್ಟಿ ನಿಂತು ಕನ್ನಡ ವೈದ್ಯ ಸಾಹಿತ್ಯ ಲೋಕಕ್ಕೆ ತಮ್ಮ ನಿಸ್ವಾರ್ಥ ಸೇವೆಯಿಂದ ಕೊಡುಗೆಯನ್ನು ನೀಡುತ್ತಿದ್ದಾರೆ. ಅವರ ಲೇಖನಿಯಿಂದ, ಸಾಂಕ್ರಾಮಿಕ ರೋಗಗಳು ನಿಯಂತ್ರಣ ಮತ್ತು ತಡೆಗಟ್ಟುವಿಕೆ ಹತೋಟಿ ಎಂಬ ಈ ಪುಸ್ತಕವನ್ನು ರಚಿಸಿಕೊಟ್ಟಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ಮತ್ತು ಕನ್ನಡದ ಜನತೆ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ವೈದ್ಯ ವಿಜ್ಞಾನ ಸಾಹಿತ್ಯ ಕನ್ನಡ ಭಾಷೆಗೆ ಹೊಸತಲ್ಲ. ಆಧುನಿಕ ವೈದ್ಯ ವಿಜ್ಞಾನದ ಬಗ್ಗೆ ಪುಸ್ತಕಗಳು ೧೯ನೇ ಶತಮಾನದಲ್ಲೇ ಹೊರಬಂದವು. ವೈದ್ಯ

ವಿಜ್ಞಾನ ಸಾಹಿತ್ಯವನ್ನು ಜನಪ್ರಿಯಗೊಳಿಸಿದವರಲ್ಲಿ ಡಾ.ಎಂ.ಶಿವರಾಂ, ಡಾ: ಅನುಪಮಾ ನಿರಂಜನ, ಡಾ॥ ಡಿ.ಎಸ್. ಶಿವಪ್ಪ ಡಾ॥ ಡಿ.ವಿ.ರಾವ್, ಡಾ॥ ಸ.ಜ. ನಾಗಲೋಟಿಮಠ್, ಡಾ॥ ಪಿ.ಎಸ್. ಶಂಕರ್, ಡಾ॥ ಸಿ.ಆರ್. ಚಂದ್ರಶೇಖರ್, ಡಾ॥ ಎಚ್.ಡಿ.ಚಂದ್ರಪ್ಪಗೌಡ, ಡಾ॥ ಸಿ. ಅನ್ನಪೂರ್ಣಮ್ಮ ಇತ್ಯಾದಿ ಹಲವರ ಕೊಡುಗೆ ಅಪೂರ್ವವಾದದ್ದು, ಇದುವರೆಗೆ ಕನ್ನಡದಲ್ಲಿ ೨೦೦೦ಕ್ಕೂ ಹೆಚ್ಚಿನ ವೈದ್ಯ ಸಾಹಿತ್ಯ ಪುಸ್ತಕಗಳು ಪ್ರಕಟಗೊಂಡಿವೆ. ಆದರೆ ಮಾಡುಕಟ್ಟೆಯಲ್ಲಿ ಓದುಗರಿಗೆ ಲಭ್ಯವಿರುವುದು ಸುಮಾರು ೨೦೦ ಪುಸ್ತಕಗಳು ಮಾತ್ರ ವೈದ್ಯ ವಿಜ್ಞಾನದ ಬೆಳವಣಿಗೆ ನಾಗಾಲೋಟದಲ್ಲಿ ಸಾಗಿದೆ. ಅನೇಕ ಆವಿಷ್ಕಾರಗಳು, ಹೊಸ ಸಂಶೋಧನೆಗಳು, ಪರಿಣಾಮಕಾರಿ ಚಿಕಿತ್ಸೆಗಳ ಬಗ್ಗೆ ಜನರಿಗೆ ಮಾಹಿತಿ ಬೇಕಾಗುತ್ತದೆ. ಕಾಯಿಲೆಗಳ ಬಗ್ಗೆ ಅಜ್ಞಾನ, ಮೂಢನಂಬಿಕೆ, ಚಿಕಿತ್ಸೆಗಳ ಬಗ್ಗೆ ಕಂದಾಚಾರಗಳು ಅಪಾಯಕಾರಿ. ಈ ದಿಸೆಯಲ್ಲಿ ಜನಗಳಿಗೆ ವೈಜ್ಞಾನಿಕ ಮಾಹಿತಿ ನೀಡುವ ಕಾರ್ಯದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಾರಂಭಿಸಿರುವ ಈ ಮಾಲೆ ಅತ್ಯಗತ್ಯವಾದದ್ದು, ಅನುಕರಣಾರ್ಹವಾದದ್ದು. ಇದಕ್ಕಾಗಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಆಡಳಿತಾಧಿಕಾರಿಯಾದ ಶ್ರೀ ಅಶೋಕ ಎನ್.ಚಲವಾದಿ ಹಾಗೂ ಅವರ ಬಳಗದವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡಕ್ಕೆ, ವೈದ್ಯವಿಜ್ಞಾನ ಪ್ರಸಾರಕ್ಕೆ ಅವರ ಕೊಡುಗೆ ಶ್ಲಾಘನೀಯವಾದದ್ದೆಂದು ನನ್ನ ಅಭಿಪ್ರಾಯ.

ಡಾ॥ ಸಿ.ಆರ್. ಚಂದ್ರಶೇಖರ್

# ಲೇಖಕನ ಮಾತು

ಭಾರತದಲ್ಲಿ, ಜನರನ್ನು ರೋಗ ಪೀಡಿತರನ್ನಾಗಿ ಮಾಡುವಲ್ಲಿ ಸಾಂಕ್ರಾಮಿಕ ರೋಗಗಳು ಅಥವಾ ಅಂಟು ರೋಗಗಳು ಮುಖ್ಯವಾಗಿ ಕಾರಣವಾಗಿದೆ. ಆಸ್ಪತ್ರೆಗಳಲ್ಲಿ ಅಡ್ಮಿಷನ್ ಆಗುವ ರೋಗಿಗಳಲ್ಲಿ ಶೇಕಡ 60ರಷ್ಟು ಜನ ಅಂಟು ರೋಗಗಳಿಂದ ನರಳುತ್ತಿರುವುದು ಕಂಡು ಬಂದಿದೆ. ಇದರಲ್ಲಿ ಶೇಕಡ 25ರಷ್ಟು ಮಂದಿ ಸೋಂಕು ರೋಗಗಳಿಂದ ಮತ್ತು ಪರಾವಲಂಬಿ (ಪ್ಯಾರಾಸಿಟಿಕ್ ಡಿಸೀಸಸ್) ರೋಗಗಳಿಂದ ಕೂಡಿರುವವರೆಂದು ತಿಳಿದು ಬಂದಿದೆ. ಬಹಳಷ್ಟು ಈ ರೋಗಗಳನ್ನು ಸರಳ ವಿಧಾನಗಳಾದ ಪರಿಸರ ನೈರ್ಮಲ್ಯದ ಅಭಿವೃದ್ಧಿ, ಸುರಕ್ಷಿತ ನೀರಿನ ಪೂರೈಕೆ, ಮಲಮೂತ್ರಗಳ ಸೂಕ್ತ ವಿಲೇವಾರಿ, ವೈಯಕ್ತಿಕ ಶುಚಿತ್ವ, ರೋಗನಿರೋಧಕ ಚುಚ್ಚುಮದ್ದಿನಿಂದ ಮತ್ತು ಆರೋಗ್ಯ ಶಿಕ್ಷಣದಿಂದ ತಡೆಗಟ್ಟಬಹುದಾಗಿದೆ.

ಸಾಂಕ್ರಾಮಿಕ ರೋಗಗಳನ್ನು ಆರಂಭದ ಹಂತದಲ್ಲೇ ಪತ್ತೆ ಮಾಡಿದರೆ, ಸುಲಭವಾಗಿ ಚಿಕಿತ್ಸೆಯನ್ನು ಮಾಡಿಸಬಹುದು. ಅನೇಕ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಈ ರೋಗಗಳನ್ನು ಪೂರ್ಣವಾಗಿ ನಿಯಂತ್ರಣ ಮಾಡಿರುವುದಲ್ಲದೆ, ಕೆಲವನ್ನು ನಿರ್ಮೂಲವನ್ನು ಮಾಡಿರುತ್ತಾರೆ. ಅಂತಹ ಸಾಮಾನ್ಯವಾದವುಗಳೆಂದರೆ, ಅತಿಸಾರ ಭೇದಿ, ಆಮಶಂಕೆ ಮತ್ತು ಶ್ವಾಸಕೋಶದ ಸೋಂಕುಗಳು ಅಲ್ಲದೆ, ಮಲೇರಿಯಾ, ಕ್ಷಯರೋಗ, ಕಾಲರಾ, ಕುಷ್ಠರೋಗ, ದಡಾರ, ಲೈಂಗಿಕ ರೋಗಗಳು, ಜಾಂಡೀಸ್, ನಾಯಿಕೆಮ್ಮು, ಧನುರ್ವಾಯು, ಪೋಲಿಯೋ ಮೈಲೈಟಿಸ್, ಜಂತುಹುಳುಗಳ ಬಾಧೆ ಮತ್ತು ಚರ್ಮ ರೋಗ ಮೊದಲಾದುವು.

ಆದರೆ, ಭಾರತದಲ್ಲಿ ಸಾರ್ವಜನಿಕರ ಸಹಕಾರದ ಕೊರತೆಯಿಂದಾಗಿ, ಅಜ್ಞಾನದಿಂದಾಗಿ, ರಾಜಕೀಯ ಬದ್ಧತೆ ಇಲ್ಲದೆ ಇರುವುದರಿಂದಾಗಿ, ಇತ್ತೀಚೆಗೆ, ಕಾಯಕ ಸಂಸ್ಕೃತಿ (Work Culture) ಕಡಿಮೆಯಾಗಿರುವುದರಿಂದ, ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಲು/ನಿರ್ಮೂಲನಾ ಮಾಡಲು ಕಷ್ಟವಾಗುತ್ತಿದೆ. 'ಸಾಂಕ್ರಾಮಿಕ ರೋಗಗಳು' ಪುಸ್ತಕವನ್ನು, ಸಾಂಕ್ರಾಮಿಕ ರೋಗಗಳ ಪರಿಚಯ ಮಾಡಿಕೊಡುವುದಕ್ಕಾಗಿ ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿಯೇ ರಚಿಸಲಾಗಿದೆ.

ನಾನು, ಹದಿಮೂರು ವರ್ಷಗಳ ಕಾಲ ಬೆಂಗಳೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರದಲ್ಲಿ ಜನಾರೋಗ್ಯ ಬೋಧಕನಾಗಿ ಕಾರ್ಯನಿರ್ವಹಿಸಿದ್ದರ ಅನುಭವ–ಅಧ್ಯಯನದ ಆಧಾರದ ಮೇಲೆ ಈ ಕೃತಿಯನ್ನು ರಚಿಸಿರುತ್ತೇನೆ. ಸಾರ್ವಜನಿಕರಿಗೆ ಈ ಕೃತಿ ಉಪಯುಕ್ತವಾಗುತ್ತದೆಂದು ಭಾವಿಸಿದ್ದೇನೆ. ಜನರ ಆರೋಗ್ಯ ವೃದ್ಧಿಯಾಗಲಿ ಎಂಬುದೇ ನನ್ನ ಆಶಯ.

'ಸಾಂಕ್ರಾಮಿಕ ರೋಗಗಳು', ಕೃತಿಯನ್ನು ರಚಿಸಲು ಅವಕಾಶ ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಡಾ॥ ಸಿದ್ಧಲಿಂಗಯ್ಯನವರಿಗೆ ಆಡಳಿತಾಧಿಕಾರಿ ಶ್ರೀ ಅಶೋಕ ಚಲವಾದಿ ಅವರಿಗೆ ಧನ್ಯವಾದಗಳು. ಕೃತಿಯನ್ನು ರಚಿಸಲು ಮಾರ್ಗದರ್ಶನ ನೀಡಿದ ಖ್ಯಾತ ವೈದ್ಯ ಸಾಹಿತಿ ಡಾ॥ ಸಿ.ಆರ್. ಚಂದ್ರಶೇಖರ್, ಕಲಾವಿದ ಸಹೋದರ, ಶ್ರೀ ಎನ್. ಮರಿಶಾಮಾಚಾರ್ ಹಾಗೂ ಉಪಕರಿಸಿದ ಗೆಳೆಯ ಶ್ರೀ ಇ. ಕೃಷ್ಣ, ಮತ್ತು ಇ. ರಾಜೇಶ್ ಅವರಿಗೆ ಚಿರಋಣಿಯಾಗಿರುತ್ತೇನೆ.

– ಎನ್. ವಿಶ್ವರೂಪಾಚಾರ್

# ವಿಷಯ ಸೂಚಿ

| | | |
|---|---|---|
| I. | ಸಾಂಕ್ರಾಮಿಕ ರೋಗಶಾಸ್ತ್ರ ಎಂದರೇನು? | 1 |
| II. | ಸಾಂಕ್ರಾಮಿಕ ರೋಗಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾಗುವ ಪಾರಿಭಾಷಿಕ ಪದಗಳು | 8 |
| III. | ರೋಗದ ಹರಡಿಕೆ | 13 |
| IV. | ಸೋಂಕು ರೋಗಿಯ ಆರೈಕೆ | 24 |
| V. | **ಸಾಂಕ್ರಾಮಿಕ ರೋಗಗಳು** | **28** |
| (ಅ) | ಬ್ಯಾಕ್ಟೀರಿಯಾಗಳಿಂದ ಬರುವ ರೋಗಗಳು | |
| | 1) ಕಾಲರಾ | 28 |
| | 2) ಡಿಫ್ತೀರಿಯಾ | 30 |
| | 3) ಕುಷ್ಠರೋಗ | 32 |
| | 4) ನಾಯಿಕೆಮ್ಮು | 35 |
| | 5) ಪ್ಲೇಗ್ | 37 |
| | 6) ಟೆಟನಸ್ | 42 |
| | 7) ಟೈಫಾಯಿಡ್ ಜ್ವರ | 44 |
| | 8) ಕ್ಷಯರೋಗ | 47 |
| | 9) ನ್ಯುಮೋನಿಯಾ | 50 |
| (ಆ) | ವೈರಸ್‌ಗಳಿಂದ ಬರುವ ರೋಗಗಳು | |
| | 1) ಡೆಂಗ್ಯೂ | 52 |
| | 2) ಇನ್‌ಫ್ಲೂಯೆಂಜಾ | 55 |
| | 3) ವೈರಲ್ ಹೆಪಟೈಟಿಸ್ (ಜಾಂಡೀಸ್) | 56 |

4) ಸೀತಾಳೆ ಸಿಡುಬು 59

5) ದಡಾರ 61

6) ರೇಬಿಸ್ 63

7) ಪೋಲಿಯೋ ಮೈಲೈಟಿಸ್ 67

8) ಟ್ರಾಕೋಮಾ 68

9) ಮೆದುಳು ಜ್ವರ 70

10) ಮಂಪ್ಸ್ 72

11) ಚಿಕುನ್‌ಗುನ್ಯಾ 74

12) ಎಚ್1 ಎನ್1 ಜ್ವರ 76

(ಇ) ಪರಾವಲಂಬಿ ಜೀವಿಗಳಿಂದ ಬರುವ ರೋಗಗಳು

1) ಅಮೀಬಿಯಾಸಿಸ್ 80

2) ಫೈಲೇರಿಯಾ 83

3) ಮಲೇರಿಯಾ 86

4) ಅತಿಸಾರ ಭೇದಿ 90

5) ಕರುಳಿನಲ್ಲಿ ಹುಳುಗಳು (ಜಂತುಹುಳು ಬಾಧೆ) 92

6) ಹೇನು-ಕೂರೆಗಳು 98

7) ಕಜ್ಜಿ 101

(ಈ) ಲೈಂಗಿಕ ರೋಗಗಳು

1) ಗೊನೋರಿಯಾ 103

2). ಏಡ್ಸ್ ರೋಗ 104

VI. ವಿವಿಧ ಅಂಗಾಂಗವ್ಯೂಹಗಳಲ್ಲಿ ಸೋಂಕುಗಳು 107

# ೧. ಸಾಂಕ್ರಾಮಿಕ ರೋಗ ಶಾಸ್ತ್ರವೆಂದರೇನು?

ಸಾಂಕ್ರಾಮಿಕ ರೋಗಗಳನ್ನು ಇಂಗ್ಲೀಷ್‌ನಲ್ಲಿ Communicable Discease ಎಂದು ಕರೆಯುತ್ತಾರೆ.

ಸಾಂಕ್ರಾಮಿಕವಾಗಿ ಹರಡುವ ರೋಗಗಳನ್ನು ಕುರಿತು ಅಧ್ಯಯನ, ತನಿಖೆ ಮಾಡುವುದನ್ನು ಸಾಂಕ್ರಾಮಿಕ ರೋಗಶಾಸ್ತ್ರವೆಂದು ಕರೆಯುತ್ತಾರೆ. ಈ ಶಾಸ್ತ್ರದಲ್ಲಿ ಸಾಂಕ್ರಾಮಿಕ (ಅಂಟು) ರೋಗಗಳು, ಸಾಂಕ್ರಾಮಿಕವಾಗಿ ಹರಡಲು ಕಾರಣಗಳನ್ನು ತಿಳಿದುಕೊಳ್ಳಲಾಗುವುದಲ್ಲದೆ, ತಡೆಗಟ್ಟುವಿಕೆ, ನಿಯಂತ್ರಿಸುವುದರ ಬಗ್ಗೆಯೂ ಕಾರ್ಯಕ್ರಮಗಳನ್ನು ಸಮುದಾಯದ ಸಹಕಾರದೊಂದಿಗೆ, ಆರೋಗ್ಯ ಇಲಾಖೆ ಹಮ್ಮಿಕೊಳ್ಳುತ್ತದೆ.

ಸಾಂಕ್ರಾಮಿಕ ರೋಗಗಳ ಅಧ್ಯಯನದಿಂದ, ಸಾಂಕ್ರಾಮಿಕ ರೋಗಗಳನ್ನು ವೈಯಕ್ತಿಕವಾಗಿ ಮತ್ತು ಸಮುದಾಯ ಮಟ್ಟದಲ್ಲಿ ಹೇಗೆ ನಿರ್ವಹಿಸಬೇಕೆಂಬುದನ್ನು ಅರ್ಥೈಸಿಕೊಳ್ಳಲಾಗುತ್ತದೆ.

ಅಂಟು ರೋಗಗಳು ಹೇಗೆ ಉಂಟಾಗುತ್ತವೆ, ಅದು ಮಾನವ ಜನಸಂಖ್ಯೆಯಲ್ಲಿ ಹೇಗೆ ಉಂಟಾಗುತ್ತದೆ, ರೋಗಗಳು ಹೇಗೆ ಪ್ರಭಾವ ಬೀರುತ್ತವೆ ಎಂಬ ಸಂಗತಿಗಳ ಬಗ್ಗೆಯು ವಿಷದವಾಗಿ ಸಾಂಕ್ರಾಮಿಕ ರೋಗ ಶಾಸ್ತ್ರ ಶೋಧನೆ–ಪರಿಶೋಧನೆ ಮಾಡುತ್ತದೆ.


**ಅಂಟುರೋಗಗಳು (ಕಮ್ಯುನಿಕಬಲ್ ಡಿಸೀಸಸ್) ಹರಡಲು ಮುಖ್ಯ ಸಂಗತಿಗಳಾವುವು?**

ಮನುಷ್ಯನಲ್ಲಿ ರೋಗ ಹರಡಲು ಮೂರು ವಸ್ತುಗಳು ಅಗತ್ಯ. ಅವುಗಳು ಯಾವುವೆಂದರೆ,

ರೋಗಕಾರಕ ಅಥವಾ ಏಜೆಂಟ್

ಆಶ್ರಯದಾತ ಅಥವಾ ಹೋಸ್ಟ್ ಮತ್ತು ಪರಿಸರ ಅಥವಾ ಎನ್ವಿರಾನ್‌ಮೆಂಟ್. ಈ ಮೂರು ಸಂಗತಿಗಳನ್ನು ಸಾಂಕ್ರಾಮಿಕತೆಯ ತ್ರಿಕೋನ ಎಂದು ಕರೆಯಲಾಗುತ್ತದೆ.

ಇವುಗಳಲ್ಲಿ ಯಾವುದೇ ಒಂದು ಇಲ್ಲದಿದ್ದರೂ ರೋಗ ಉಂಟಾಗುವುದಿಲ್ಲ (ಚಿತ್ರ ನೋಡಿ)




**ರೋಗಕಾರಕ ಸಂಗತಿಗಳು (Agent Factors)**

ರೋಗ ಉಂಟಾಗಲು ಮೊಟ್ಟಮೊದಲು ಅಗತ್ಯವಾದದ್ದು– ರೋಗಕಾರಕ ಅಥವಾ ಡಿಸೀಸ್‌ಏಜೆಂಟ್. ರೋಗಕಾರಕವು, ಸಜೀವಿ ಅಥವಾ ನಿರ್ಜೀವಿ ಆಗಿರಬಹುದು. ರೋಗಕಾರಕಗಳನ್ನು ಐದು ಗುಂಪುಗಳನ್ನಾಗಿ ವಿಂಗಡಿಸಬಹುದು.

**(ಅ) ಜೈವಿಕ ಕಾರಕಗಳು (Biologic Agents) :** ಇವು ಸಜೀವಿ ಏಜೆಂಟ್‌ಗಳಾಗಿರುತ್ತವೆ. ಉದಾಹರಣೆಗೆ ವೈರಸ್‌ಗಳು, ಬ್ಯಾಕ್ಟಿರಿಯಾ, ಫಂಗೈ, ಪ್ರೋಟಾಜೋವಾ... ಇತ್ಯಾದಿ ಇವು ಸೋಂಕಿನ ಮೂಲದಲ್ಲಿ ಕಂಡುಬರುತ್ತವೆ. (ಉದಾ.: ಮನುಷ್ಯ, ಪ್ರಾಣಿ, ಕೀಟ, ಮಣ್ಣು)

**(ಆ) ಪೌಷ್ಟಿಕ ಕಾರಕಗಳು (Nutrient Agents) :** ಇವು ಸಸಾರಜನಕ (ಪ್ರೋಟೀನ್‌ಗಳು, ಕೊಬ್ಬುಗಳು (ಫ್ಯಾಟ್ಸ್) ಶರ್ಕರಪಿಷ್ಟಗಳು (ಕಾರ್ಬೋಹೈಡ್ರೇಟ್ಸ್) ವಿಟಮಿನ್‌ಗಳು, ಖನಿಜಗಳು ಮತ್ತು ನೀರು. ಪೌಷ್ಟಿಕ ಆಹಾರ ಅತಿಯಾದರೆ ಅಥವಾ ಕೊರತೆ ಉಂಟಾದರೆ, ಪೌಷ್ಟಿಕ ಆಹಾರದ ರೋಗಗಳಿಗೆ ದಾರಿ ಮಾಡಿಕೊಡಬಹುದು.

**(ಇ) ಭೌತಿಕ ಕಾರಕಗಳು (Physical Agents) :** ಇವು ಉಷ್ಣತೆ, ಶೀತ, ಒತ್ತಡ (ಪ್ರೆಶರ್), ರೇಡಿಯೇಷನ್, ವಿದ್ಯುತ್ ಶಕ್ತಿ.

(ಈ) ರಾಸಾಯನಿಕ ಕಾರಕಗಳು **(Chemical Agents)** : ಇವು ಲೋಹಗಳು (ಉದಾ: ಸೀಸ), ಹೊಗೆ (fumes), ಧೂಳು, ಗ್ಯಾಸ್‌ಗಳು ಇತ್ಯಾದಿ.

(ಉ) ಮೆಕ್ಯಾನಿಕಲ್ ಕಾರಕಗಳು **(Mechanical Agents)**

Chronic friction and other- mechanical forces may cause trauma, injuries and fractures. ಉಜ್ಜುವಿಕೆ ಪೆಟ್ಟು ಗಾಯಗಳು ಮತ್ತು ಮೂಳೆ ಮುರಿತಗಳು

**ಆಶ್ರಯದಾತನ (ಜೀವಿ) ಸಂಗತಿಗಳು (Host Factors)**

**ಆಶ್ರಯದಾತ (ಜೀವಿ) ಸಂಬಂಧದ ಸಂಗತಿಗಳಾವುವೆಂದರೆ:**

**(ಅ) ವಯಸ್ಸು :** ಕೆಲವು ನಿಶ್ಚಿತ ರೋಗಗಳು, ನಿಶ್ಚಿತ ಗುಂಪುಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಉದಾ.: ಬಾಲ್ಯದಲ್ಲಿ ದಡಾರ (ಮೀಸಲ್ಸ್), ಮಧ್ಯವಯಸ್ಸಿನಲ್ಲಿ ಕ್ಯಾನ್ಸರ್, ವೃದ್ಧಾಪ್ಯದಲ್ಲಿ ಅಥೆರೊಸ್ಕ್ಲೀರೋಸಿಸ್.

**(ಆ) ಲಿಂಗ :** ಕೆಲವು ರೋಗಗಳು ಸ್ತ್ರೀಯರಲ್ಲಿ ಹೆಚ್ಚಾಗಿ ಕಂಡು ಬಂದರೆ, ಮತ್ತೆ ಕೆಲವು ರೋಗಗಳು ಪುರುಷರಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

ಡಯಾಬಿಟೀಸ್ ಅಥವಾ ಸಕ್ಕರೆ ಕಾಯಿಲೆ ಹೆಚ್ಚಾಗಿ 40 ವರ್ಷದ ಮೇಲ್ಪಟ್ಟ ಸ್ತ್ರೀಯರಲ್ಲಿ ಕಂಡುಬರುತ್ತದೆ. ಮತ್ತು ಹೃದಯ ರೋಗಗಳು ಪುರುಷರಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

**(ಇ) ಅನುವಂಶೀಯತೆ :** ಹಾನಿಕಾರಕ ಜೀನ್ಸ್ (ವಂಶವಾಹಿಗಳು)ಗಳು ಶರೀರದಲ್ಲಿದ್ದಾಗ ರೋಗವನ್ನುಂಟು ಮಾಡಬಹುದು. ಉದಾ.: ಹಿಮೋಫೀಲಿಯಾ (ಕುಸುಮರೋಗ), ವರ್ಣ ಅಂಧತ್ವ (ಕಲರ್ ಬ್ಲೈಂಡ್‌ನೆಸ್) ಆಲ್ಬಿನಿಸಂ ಹುಟ್ಟಿನಿಂದಲೇ ಬಂದಂತಹ ಕೆಲವು ನ್ಯೂನತೆಗಳು. ಉದಾ.: (Cleft Palate, Harelip, Spina Bifida) ಸೀಳು ತುಟಿ, ಸೀಳು ಅಂಗಳು.

ಇವೆಲ್ಲವು ಜೆನೆಟಿಕ್ ಸಂಗತಿಗಳಾಗಿರುತ್ತವೆ. ಅಧಿಕ ರಕ್ತದೊತ್ತಡ (ಹೈಪರ್ ಟೆನ್ಷನ್), ಡಯಾಬಿಟೀಸ್, ಕೆಲವು ಮಾನಸಿಕ ಕಾಯಿಲೆಗಳು ವಂಶವಾಹಿಗಳ ದೋಷದಿಂದ ಉಂಟಾಗಬಹುದುದೆಂದು ಆಲೋಚಿಸಲಾಗಿದೆ.

**(ಈ) ಪೌಷ್ಟಿಕ ಆಹಾರ :** ಪ್ರತಿದಿನ ಪೌಷ್ಟಿಕ ಆಹಾರವನ್ನು ಸೇವಿಸದಿದ್ದಾಗ, ಕೆಲವು ಪೌಷ್ಟಿಕ ಆಹಾರದ ಕೊರತೆಯಿಂದ ರೋಗಗಳುಂಟಾಗುತ್ತವೆ. (ಉದಾ.:

ಕ್ವಾಶಿಯಾರ್ಕರ್, ಅನೀಮಿಯಾ (ರಕ್ತಹೀನತೆ), ಅತಿಯಾಗಿ ಆಹಾರವನ್ನು ಸೇವಿಸುವುದರಿಂದಲೂ ಕೆಲವು ಕಾಯಿಲೆಗಳು ಬರುತ್ತದೆ. (ಉದಾ.: ಡಯಾಬಿಟೀಸ್ (ಮಧುಮೇಹ), ಬೊಜ್ಜು (ಒಬಿಸಿಟಿ).

**(ಉ) ಉದ್ಯೋಗ :** ಕೆಲವು ಉದ್ಯೋಗಗಳನ್ನು ಮಾಡುವುದರಿಂದಲೂ ನಿಶ್ಚಿತ ಉದ್ಯೋಗದ ಕಾಯಿಲೆಗಳು ಉಂಟಾಗಬಹುದು. ಉದಾ.: ಲೆಡ್‌ಪಾಯಿಸನಿಂಗ್ (ಸೀಸದಿಂದ ವಿಷಪೂರಿತವಾಗುವುದು), ಸಿಲಿಕೋಸಿಸ್, ಅಪಘಾತಗಳು.

**(ಊ) ಕೆಲವು ಸಂಪ್ರದಾಯಗಳು ಮತ್ತು ಹವ್ಯಾಸಗಳು :** ಧೂಮಪಾನದ ಚಟದಿಂದ ಬಾಯಿ ಮತ್ತು ಶ್ವಾಸಕೋಶದ ಕ್ಯಾನ್ಸರ್ ಬರುತ್ತದೆ. ಬಯಲಿನಲ್ಲಿ ಮಲಮೂತ್ರಗಳ ವಿಸರ್ಜನೆಯಿಂದ ಭೂಮಾಲಿನ್ಯ ಉಂಟಾಗುವುದಲ್ಲದೆ ಪರಾವಲಂಬಿ ಜೀವಿಗಳಿಂದ (Intestinal Parasites)ಲೂ ರೋಗಗಳು ಹರಡುತ್ತವೆ.

**(ಋ) ಮನುಷ್ಯನ ನಡವಳಿಕೆ :** ಶಾರೀರಿಕ ವ್ಯಾಯಾಮವನ್ನು ನಿಯಮಿತವಾಗಿ ಮಾಡದಿರುವುದು, ಮದ್ಯಪಾನದ ಚಟ ಮತ್ತು ಕೆಲವು ಔಷಧಿಗಳ ಸೇವನೆಯ ವ್ಯಸನದಿಂದ ಶಾರೀರಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ.

**(ೠ) ಪರಿಸರ ಸಂಗತಿಗಳು :** ವ್ಯಕ್ತಿ ಮತ್ತು ಸಮುದಾಯ ಚೆನ್ನಾಗಿರಬೇಕಾದರೆ, ಆರೋಗ್ಯ ಪರಿಸರ ಅತ್ಯಗತ್ಯ. ವಿವರಣಾತ್ಮಕ ಉದ್ದೇಶದಿಂದ ಪರಿಸರವನ್ನು ಮೂರು ಘಟಕಗಳನ್ನಾಗಿ ವಿಂಗಿಡಸಲಾಗಿದೆ.

**ಎ) ಭೌತಿಕ ಪರಿಸರ (ಫಿಸಿಕಲ್ ಎನ್ವಿರಾನ್‌ಮೆಂಟ್) :** ಭಾರತದಲ್ಲಿ ಬಹಳಷ್ಟು ಅನಾರೋಗ್ಯ ಸಮಸ್ಯೆಗಳು ಉಂಟಾಗಲು ಕಾರಣ ಅನಾರೋಗ್ಯ ಪರಿಸರ. ಅರಿದರೆ, ಸುರಕ್ಷಿತವಲ್ಲದ ನೀರಿನ ಪೂರೈಕೆ, ಕಲುಷಿತಗೊಂಡ ಮಣ್ಣು, ವಾಸಿಸಲು ಸರಿಯ್ಯಾದ ಮನೆ ಇಲ್ಲದಿರುವುದು, ಮನುಷ್ಯನ ಮಲಮೂತ್ರಗಳು ಮತ್ತು ಘನರೂಪದ ತ್ಯಾಜ್ಯ ವಸ್ತುಗಳನ್ನು ಸರಿಯಾಗಿ ವಿಲೇವಾರಿ ಮಾಡದಿರುವುದು.

**ಬಿ) ಜೈವಿಕ ಪರಿಸರ (ಬಯಾಲಾಜಿಕಲ್ ಎನ್ವಿರಾನ್‌ಮೆಂಟ್) :** ರೋಗ ಉಂಟಾಗಲು ಜೈವಿಕ ಪರಿಸರವು ಕಾರಣವಾಗಿರಬಹುದು. ಉದಾ.: ಪ್ರಾಣಿಗಳು, ಕೀಟಗಳು, ಇಲಿ, ಹೆಗ್ಗಣಗಳು ಇತ್ಯಾದಿ.

**ಸಿ) ಸಾಮಾಜಿಕ ಪರಿಸರ (ಸೋಶಿಯಲ್ ಎನ್ವಿರಾನ್‌ಮೆಂಟ್) :**

ಸಂಪ್ರದಾಯಗಳು, ಹವ್ಯಾಸಗಳು, ಸಂಸ್ಕೃತಿ, ಶೈಕ್ಷಣಿಕ ಗುಣಮಟ್ಟ ಮೊದಲಾದವು ಪ್ರತ್ಯೇಕ್ಷವಾಗಿ ಮತ್ತು ಪರೋಕ್ಷವಾಗಿ ರೋಗ ಉಂಟಾಗಲು ಕಾರಣವಾಗಿರುತ್ತದೆ.

**ತಡೆಗಟ್ಟುವ ಹಂತಗಳು :**

ಈ ಆಧುನಿಕ ದಿನಗಳಲ್ಲಿ ತಡೆಗಟ್ಟುವ ಪರಿಕಲ್ಪನೆಯ ವ್ಯಾಪ್ತಿ ಹೆಚ್ಚಾಗಿದೆ. ತಡೆಗಟ್ಟುವುದನ್ನು ಮೂರು ಹಂತಗಳನ್ನಾಗಿ ವಿವರಿಸಬಹುದು.

1) ಪ್ರಾಥಮಿಕವಾಗಿ ತಡೆಗಟ್ಟುವಿಕೆ (ಪ್ರೈಮರಿ ಪ್ರಿವೆನ್ಷನ್)

2) ದ್ವಿತೀಯವಾಗಿ ತಡೆಗಟ್ಟುವಿಕೆ (ಸೆಕೆಂಡರಿ ಪ್ರಿವೆನ್ಷನ್)

3) ತೃತೀಯವಾಗಿ ತಡೆಗಟ್ಟುವಿಕೆ (ಟರ್ಶರಿ ಪ್ರಿವೆನ್ಷನ್)

**ಪ್ರಾಥಮಿಕವಾಗಿ ತಡೆಗಟ್ಟುವಿಕೆ :**

ಪ್ರಾಥಮಿಕವಾಗಿ ತಡೆಗಟ್ಟುವಿಕೆ ಎಂದರೆ, ರೋಗ ಉಂಟಾಗುವ ಮೊದಲೇ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು. ಪ್ರಾಥಮಿಕವಾಗಿಯೇ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಂಡರೆ, ರೋಗ ಉಂಟಾಗುವ ಸಂಭಾವ್ಯತೆಯನ್ನು ತೆಗೆದು ಹಾಕಬಹುದು. ನಿರ್ದಿಷ್ಟ ನಿರ್ವಹಣಾ ಕಾರ್ಯಕ್ರಮವೆಂದರೆ:

ಎ) ಆರೋಗ್ಯದಿಂದಿರಲು ಉತ್ತೇಜನ ನೀಡುವುದು.

ಬಿ) ನಿರ್ದಿಷ್ಟ ರಕ್ಷಣೆಯನ್ನು ನೀಡುವುದು.

**ಆರೋಗ್ಯ ಉತ್ತೇಜನ :**

ನಾವು ಅನೇಕ ರೋಗಗಳನ್ನು ತಡೆಗಟ್ಟಬಹುದು. ಅವುಗಳೆಂದರೆ, ಕಾಲರಾ, ಟೈಫಾಯಿಡ್ ಜ್ವರ, ಕ್ಷಯರೋಗ ಮತ್ತು ಪೌಷ್ಟಿಕ ಆಹಾರದ ಕೊರತೆಯ ಕಾಯಿಲೆಗಳು. ವೈಯಕ್ತಿಕವಾಗಿ ಮತ್ತು ಸಮುದಾಯದಲ್ಲಿ ಆರೋಗ್ಯದ ಮಹತ್ವದ ಬಗ್ಗೆ ಅರಿವು ಮೂಡಿಸಿ, ಆರೋಗ್ಯಾಭಿವೃದ್ಧಿ ಬಗ್ಗೆ ಉತ್ತೇಜನವನ್ನು ನೀಡುವುದರ ಮೂಲಕವೇ ಕಾಯಿಲೆಗಳನ್ನು ತಡೆಗಟ್ಟಬಹುದು. ಅಂತಹ ಕಾರ್ಯಕ್ರಮಗಳು ಯಾವುವೆಂದರೆ,

1. ಸಾಕಷ್ಟು ಪೌಷ್ಟಿಕ ಆಹಾರದ ಪೂರೈಕೆ
2. ಸುರಕ್ಷಿತ ನೀರಿನ ಪೂರೈಕೆ
3. ಮನುಷ್ಯನ ಮಲ-ಮೂತ್ರಗಳು ಹಾಗೂ ತ್ಯಾಜ್ಯ ವಸ್ತುಗಳನ್ನು ಸುರಕ್ಷಿತ ರೀತಿಯಲ್ಲಿ ವಿಲೇವಾರಿ ಮಾಡುವುದು.

4. ವೈಯಕ್ತಿಕ ಶುಚಿತ್ವ

5. ಆರೋಗ್ಯ ಶಿಕ್ಷಣ

6. ಶಾರೀರಿಕ ವ್ಯಾಯಾಮ

7. ಅವಧಿಗೊಂದಾವರ್ತಿ ಆರೋಗ್ಯ ತಪಾಸಣೆ

8. ಜನರ ಜೀವನದ ಗುಣಮಟ್ಟವನ್ನು ಅಭಿವೃದ್ಧಿಪಡಿಸುವುದು.

**ನಿರ್ದಿಷ್ಟ ರಕ್ಷಣೆ :**

ನಿರ್ದಿಷ್ಟವಾದ ರಕ್ಷಣೆಯಿಂದ, ನಿರ್ದಿಷ್ಟ ಕಾಯಿಲೆಗಳನ್ನು ನಿರ್ದಿಷ್ಟ ಕ್ರಮಗಳಿಂದ ನಾವು ತಡೆಗಟ್ಟಬಹುದು. ಉದಾಹರಣೆಗೆ ಸಕಾಲದಲ್ಲಿ ರೋಗನಿರೋಧಕ ಚುಚ್ಚುಮದ್ದುಗಳನ್ನು ಕೊಡಿಸುವುದರಿಂದ ಕ್ಷಯರೋಗ, ಡಿಫ್ತೀರಿಯಾ, ನಾಯಿಕೆಮ್ಮು, ಧನುರ್ವಾಯು (ಟೆಟನಸ್) ಪೋಲಿಯೋ ಮತ್ತು ಮೀಸಲ್ಸ್ (ದಡಾರ)ನ್ನು ತಡೆಗಟ್ಟಬಹುದು. ವಿಟಮಿನ್ 'ಎ'ಯನ್ನು ಮಕ್ಕಳಿಗೆ ಕೊಡಿಸುವುದರಿಂದ ಕ್ಸೀರಾಫ್ಥಾಲಾಮಿಯಾ ಎಂಬ ಕಣ್ಣಿನ ದೋಷ ಉಂಟಾಗುವುದನ್ನು ತಡೆಗಟ್ಟಬಹುದು.

ಪ್ರಾಥಮಿಕ ಹಂತದಿಂದಲೇ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ನಮ್ಮೆಲ್ಲರ ಗುರಿಯಾಗಬೇಕು. ಅಭಿವೃದ್ಧಿ ಹೊಂದಿರುವ ಅನೇಕ ರಾಷ್ಟ್ರಗಳು ಅನೇಕ ಸೋಂಕು ರೋಗಗಳನ್ನು ಪ್ರಾಥಮಿಕ ಹಂತದಲ್ಲೇ ನಿರ್ಮೂಲನಗೊಳಿಸಿವೆ.

**ದ್ವಿತೀಯ ಹಂತದ ತಡೆಗಟ್ಟುವಿಕೆ (ಸೆಕೆಂಡರಿ ಪ್ರಿವೆನ್ಷನ್):**

ದ್ವಿತೀಯ ಹಂತದ ತಡೆಗಟ್ಟುವಿಕೆಯಲ್ಲಿ ರೋಗ ಹರಡುವುದನ್ನು ಎಲ್ಲಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದರಿಂದ, ರೋಗದಿಂದ ಉಂಟಾಗುವ ತೊಡಕುಗಳನ್ನು ತಡೆಗಟ್ಟಬಹುದು. ನಿರ್ದಿಷ್ಟ ನಿರ್ವಹಣಾ ಕ್ರಮಗಳು ಯಾವುವೆಂದರೆ:

ಎ) ಬೇಗನೆ ರೋಗವನ್ನು ಪತ್ತೆಮಾಡುವುದು (Early Diagnosis) ರೋಗದ ಪ್ರಕರಣವನ್ನು ಪತ್ತೆಹಚ್ಚಲು ಕಾರ್ಯಕ್ರಮ ಕೈಗೊಳ್ಳುವುದು, ಅಗತ್ಯವಾದ ತಪಾಸಣೆಗಳನ್ನು ಮಾಡುವುದು.

ಬಿ) ಅಗತ್ಯವಾದ ಚಿಕಿತ್ಸೆಯನ್ನು ವ್ಯವಸ್ಥೆ ಮಾಡುವುದು.

ಎಲ್ಲ ರೋಗಗಳನ್ನು ವ್ಯಾಕ್ಸಿನ್‌ನಿಂದಲೇ ತಡೆಗಟ್ಟಲು ಸದ್ಯಕ್ಕೆ ಸಾಧ್ಯವಿಲ್ಲ. ಉದಾ.: ಕುಷ್ಠರೋಗ, ಸಿಫಿಲಿಸ್, ಮಲೇರಿಯಾ. ಆದಷ್ಟು ಬೇಗನೆ ರೋಗವನ್ನು

ಗುರ್ತಿಸಿ, ಚಿಕಿತ್ಸೆಯನ್ನು ಕೊಡಿಸುವುದರಿಂದ ಸಾಂಕ್ರಾಮಿಕವಾಗಿ ಹರಡುವುದನ್ನು ತಡೆಗಟ್ಟಲು ಸಾಧ್ಯವಾಗುತ್ತದೆ.

**ತೃತೀಯ ಹಂತದ ತಡೆಗಟ್ಟುವಿಕೆ (ಟರ್ಶರಿ ಪ್ರಿವೆನ್ಷನ್):**

ಯಾವಾಗ ರೋಗ ಆರಂಭದ ಹಂತವನ್ನು ದಾಟಿ ಪ್ರಗತಿ ಹೊಂದಿದ್ದರೂ, ಮುಂದೆ ಆಗಬಹುದಾದ ತೊಡಕುಗಳನ್ನು ಟರ್ಶರಿ ಪ್ರಿವೆನ್ಷನ್‌ನಿಂದ ತಡೆಗಟ್ಟಬಹುದು. ತೃತೀಯ ಹಂತದ ತಡೆಗಟ್ಟುವಿಕೆಯಲ್ಲಿ ಅಂಗವೈಕಲ್ಯವನ್ನು ಮಿತಗೊಳಿಸಿ, ನರಳಿಕೆಯನ್ನು ಕನಿಷ್ಟ ಮಟ್ಟದಲ್ಲಿ ಇಡಲು ಸಾಧ್ಯವಾಗುತ್ತದೆ.

**ನಿರ್ದಿಷ್ಟವಾದ ನಿರ್ವಹಣೆಯೆಂದರೆ:**

(ಎ) ಅಂಗವೈಕಲ್ಯವನ್ನು ಮಿತಗೊಳಿಸುವುದು

(ಬಿ) ಪುನರ್ವಸತಿ ಕಾರ್ಯಕ್ರಮ

# ೨. ಸಾಂಕ್ರಾಮಿಕ ರೋಗಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವ ಪಾರಿಭಾಷಿಕ ಪದಗಳು

ವ್ಯಾಖ್ಯೆಗಳು **(Definitions)**

**(1) ಇನ್‌ಫೆಕ್ಷನ್ (ಸೋಂಕು) :** ಸೋಂಕು ಕಾರಕಗಳು ಮನುಷ್ಯನ ಅಥವಾ ಪ್ರಾಣಿಗಳ ಶರೀರವನ್ನು ಪ್ರವೇಶಿಸಿ ಮತ್ತು ಅಭಿವೃದ್ಧಿ ಹೊಂದುವುದು ಅಥವಾ ದ್ವಿಗುಣಗೊಳ್ಳುವುದು.

ಸೋಂಕನ್ನು ಹೊಂದಿರುವ ವ್ಯಕ್ತಿ ಕೆಳಕಂಡವುಗಳನ್ನು ತೋರಿಸಬಹುದು.

ಎ) ಸೋಂಕಿನ ರೋಗದ ಚಿಹ್ನೆಗಳನ್ನು ಮತ್ತು ಲಕ್ಷಣಗಳನ್ನು ತೋರಿಸಬಹುದು.

ಬಿ) ಯಾವುದೇ ಚಿಹ್ನೆಗಳನ್ನು ಮತ್ತು ಲಕ್ಷಣಗಳನ್ನು ತೋರಿಸದೇ ಇರಬಹುದು (ಕ್ಯಾರಿಯರ್). ಸೋಂಕನ್ನು, ಪ್ರಯೋಗ ಶಾಲೆಯ ಪರೀಕ್ಷೆಯಿಂದ ಮಾತ್ರ ಪತ್ತೆಹಚ್ಚಬಹುದು.

**ಇನ್‌ಪೆಕ್ಷಿಯಸ್ ಏಜೆಂಟ್ (ಸೋಂಕುಕಾರಕಗಳು):**

**ರೋಗಾಣು:** ಸಾಮಾನ್ಯವಾಗಿ ಸೂಕ್ಷ್ಮ ರೋಗಾಣುಗಳು (ಮೈಕ್ರೋ ಆರ್ಗಾನಿಸಮ್) ಬ್ಯಾಕ್ಟಿರಿಯಾ, ವೈರಸ್, ಪರಾವಲಂಬಿ ಜೀವಿಗಳು, ಫಂಗಸ್. ಇವೂ ಸಹ ಸೋಂಕನ್ನು ಉತ್ಪತ್ತಿ ಮಾಡಬಹುದು ಅಥವಾ ಸೋಂಕಿನ ರೋಗವನ್ನು ಉಂಟು ಮಾಡಬಹುದು.

**ಇನ್‌ಫೆಕ್ಷಿಯಸ್ ಡಿಸೀಸ್ (ಸೋಂಕುರೋಗ):**

ಮನುಷ್ಯನಲ್ಲಿ ಅಥವಾ ಪ್ರಾಣಿಗಳಲ್ಲಿ ಸೋಂಕಿನಿಂದಾಗಿ ರೋಗ ಉಂಟಾಗಿರುವುದು

(2) ಎಪಿಡೆಮಿಕ್ (ಸಾಂಕ್ರಾಮಿಕ, ಸರ್ವತ್ರ ವ್ಯಾಪಿಸಿರುವ, ವ್ಯಾಪಕ):

(Epi=Upon; demos=People)

ಸಮುದಾಯದಲ್ಲಿ ಸಾಮಾನ್ಯ (ನಾರ್ಮಲ್) ನಿರೀಕ್ಷೆಗಿಂತಲೂ ಅತಿ ಹೆಚ್ಚಾಗಿ ರೋಗ ತಲೆದೋರಿರುವುದು ಅಥವಾ ಒಂದು ಕ್ಷಣದಲ್ಲಿ ಅನೇಕ ಜನರನ್ನು ಏಕಕಾಲದಲ್ಲಿ ಸಂಭವಿಸಿ ಬಾಧಿಸುವುದು ಅಥವಾ ಯಾವುದೇ ನಿರ್ದಿಷ್ಟ ರೋಗ ದಿಢೀರನೆ ಸ್ಫೋಟಿಸಿ ಹೆಚ್ಚು ಜನರ ಮೇಲೆ ದಾಳಿ ಮಾಡಿರುವುದು.

ಭಾರತದಲ್ಲಿ ಸಾಮಾನ್ಯವಾಗಿ ಹರಡುವ ಸಾಂಕ್ರಾಮಿಕ ರೋಗಗಳು: ಕಾಲರಾ, ಕರುಳಬೇನೆ, ದಡಾರ, ಸೀತಾಳೆ ಸಿಡುಬು (ಚಿಕನ್‌ಪಾಕ್ಸ್), ವೈರಲ್ ಹೈಪಟೈಟಸ್–ಎ (ಜಾಂಡೀಸ್), ಎಂಟ್ರೀಕ್ ಫಿವರ್ ಮತ್ತು ಸೆರೆಬ್ರೋ–ಸ್ಪೈನಲ್ ಮೆನಿನ್‌ಜೆಟಿಸ್. ಇತ್ತೀಚೆಗೆ ಕಂಡು ಹಿಡಿದಿರುವ ರೋಗ ಏಡ್ಸ್. ಇದು ವಿಶ್ವವ್ಯಾಪಿಯಾಗಿ ಹರಡಿರುವಂತಹುದು. ಕೆಲವು ನಾನ್‌ಕಮ್ಯುನಿಕಬಲ್ ಡಿಸೀಸ್ (ಅಂಟುರೋಗವಲ್ಲದವು)ಗಳೆಂದರೆ, ಕ್ಯಾನ್ಸರ್, ಕರೋನರಿ ಹೃದ್ರೋಗ, ಅಧಿಕ ರಕ್ತದೊತ್ತಡ ಮತ್ತು ಸಂಚಾರಿ ಅಪಘಾತಗಳು. ಸಾಂಕ್ರಾಮಿಕ ರೋಗಗಳು ಅಭಿವೃದ್ಧಿ ಹೊಂದಿರುವ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕಂಡುಬರುತ್ತವೆ.

(3) ಎಂಡೆಮಿಕ್ (ಸ್ಥಾನಿಕ):

(EN=in; demos=People)

ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ರೋಗ ಸ್ಥಿರವಾಗಿದ್ದರೆ ಅಥವಾ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸಾಮಾನ್ಯವಾಗಿ ಅಂಟು ರೋಗ ಎಡಬಿಡದೆ ಬರುತ್ತಿದ್ದರೆ ಅದನ್ನು ಎಂಡೆಮಿಕ್ ಅಥವಾ ಸ್ಥಾನಿಕವಾಗಿ ಕಂಡುಬರುವ ಅಂಟುರೋಗ ಎಂದು ಕರೆಯುತ್ತಾರೆ.

ಭಾರತದಲ್ಲಿ ಸಾಮಾನ್ಯವಾಗಿ ಕಂಡು ಬರುವ ಎಂಡೆಮಿಕ್ ರೋಗಗಳೆಂದರೆ ಎಂಟ್ರಿಕ್‌ಫಿವರ್ (ಕರುಳಜ್ವರ, ವಿಷಮಜ್ವರ) ಅತಿಸಾರ ಭೇದಿ ಮತ್ತು ಡೀಸೆಂಟ್ರಿ (ಆಮಶಂಕೆ, ರಕ್ತಭೇದಿ), ವೈರಲ್ ಹೆಪಟೈಟಿಸ್ (ಜಾಂಡೀಸ್), ಕುಷ್ಠರೋಗ, ಫೈಲೇರಿಯಾ, ಮಲೇರಿಯಾ, ಕ್ಷಯರೋಗ ಮೊದಲಾದವು. ಪರಿಸ್ಥಿತಿ ಅನುಕೂಲಕರವಾಗಿದ್ದರೆ ಎಂಡೆಮಿಕ್ ರೋಗಗಳು ಅಧಿಕಗೊಳ್ಳುತ್ತವೆ. ಉದಾ.: ಟೈಫಾಯಿಡ್ (ವಿಷಮ ಶೀತಜ್ವರ), ಮಲೇರಿಯಾ, ಪೋಲಿಯೊ ಮೈಲೈಟಿಸ್.

**(4) ಸ್ಪೊರಾಡಿಕ್ (Sporadic):**

ವಿರಳವಾಗಿ ಅಥವಾ ಚದುರಿದಂತೆ ರೋಗ ಸಂಭವಿಸಿದರೆ ಅದನ್ನು ಸ್ಪೊರಾಡಿಕ್ ಅಥವಾ ವಿರಳವಾಗಿ ಹರಡುವುದು ಎನ್ನುತ್ತಾರೆ. ಉದಾ.: ಪೋಲಿಯೊ ಮೈಲೈಟಿಸ್.

ಎಪಿಡೆಮಿಕ್ ಅಥವಾ ಸಾಂಕ್ರಾಮಿಕತೆಯ ಆರಂಭದ ಅಂಶ ಸ್ಪೊರಾಡಿಕ್ ಆಗಿರಬಹುದು.

**(5) ಪಾಂಡೆಮಿಕ್ (PAN=all; Demos=people) ವಿಶ್ವವ್ಯಾಪಿ**

ಸಾಂಕ್ರಾಮಿಕ ಕಾಯಿಲೆ, ದೇಶದಿಂದ ದೇಶಕ್ಕೆ ಅಥವಾ ಇಡೀ ಪ್ರಪಂಚದಲ್ಲಿ ಹರಡಿದ್ದರೆ ಅದನ್ನು ಪಾಂಡೆಮಿಕ್ ಅಥವಾ ವಿಶ್ವವ್ಯಾಪಿ ಕಾಯಿಲೆ ಎನ್ನುತ್ತಾರೆ.

ಉದಾ.: ಏಡ್ಸ್‌ನ ಸಾಂಕ್ರಾಮಿಕತೆ, ಈ ಹಿಂದೆ ವಿಶ್ವವ್ಯಾಪಿಯಾಗಿ ಹರಡಿದ್ದ ರೋಗಗಳೆಂದರೆ, ಇನ್‌ಫ್ಲೂಯೆಂಜಾ, ಕಾಲರಾ ಮತ್ತು ಪ್ಲೇಗ್.

**(6) ಜೂನೋಸಿಸ್** ರೋಗಗಳು ಅಥವಾ ಸೋಂಕುಗಳು ಸ್ವಾಭಾವಿಕವಾಗಿ ಬೆನ್ನೆಲುಬಿರುವ ಪ್ರಾಣಿಗಳು ಮತ್ತು ಮನುಷ್ಯರ ನಡುವೆ ಹರಡುತ್ತವೆ. ಉದಾ.: ರೇಬಿಸ್ (ನಾಯಿಹುಚ್ಚು), ಪ್ಲೇಗ್, ಬೊವೈನ್ ಟಿ.ಬಿ, ಆಂಥ್ರಾಕ್ಸ್.

**(7) ಕಮ್ಯುನಿಕಬಲ್ ಡಿಸೀಸ್ (ಅಂಟುರೋಗ):**

ನಿರ್ದಿಷ್ಟ ಸೋಂಕಿನ ಕಾರಕ (ಏಜೆಂಟ್)ಗಳಿಂದ ಅಥವಾ ಅದರ ವಿಷದ ಉತ್ಪನ್ನದಿಂದ ಕೆಲವು ನಿಶ್ಚಿತ ಸ್ಥಿತಿಗಳಲ್ಲಿ ರೋಗ, ವ್ಯಕ್ತಿಗತವಾಗಿ ಸಮುದಾಯದಲ್ಲಿ ಹರಡುವುದನ್ನು ಅಂಟುರೋಗ ಅಥವಾ ಕಮ್ಯುನ್‌ಕಬಲ್ ಡಿಸೀಸ್ ಎನ್ನುತ್ತಾರೆ.

**(8) ನಾನ್‌ಕಮ್ಯುನಿಕಬಲ್ ಡಿಸೀಸ್ (ಅಂಟುರೋಗವಲ್ಲದ ಕಾಯಿಲೆಗಳು):**

ಹೃದಯ ರೋಗ, ಸಕ್ಕರೆ ಕಾಯಿಲೆ, ಕ್ಯಾನ್ಸರ್, ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಹರಡುವುದಿಲ್ಲ.

**(9) ಇನ್‌ಕ್ಯುಬೇಷನ್ ಪಿರಿಯಡ್ (ರೋಗಪರಿಪಕ್ವ ಆಗುವ ಅವಧಿ):**

ರೋಗ ಕ್ರಿಮಿಗಳಿಗೆ, ಮನುಷ್ಯನ ಸಂಪರ್ಕ ಬಂದ ಮೇಲೆ, ರೋಗವು ಪ್ರಾರಂಭವಾಗುವುದು. ಆದರೂ, ಒಮ್ಮೆಲೇ ರೋಗದ ಲಕ್ಷಣಗಳು ಕಂಡು ಬರುವುದಿಲ್ಲ. ರೋಗ ಕ್ರಿಮಿಗಳು ಬೆಳೆಯಲಾರಂಭಿಸುವುವು, ಆ ಕ್ರಿಮಿಗಳು ಸಾಕಾದಷ್ಟು ಪ್ರಬಲವಾದಾಗ ರೋಗವು ಬಲಿತು ಲಕ್ಷಣಗಳು ಹೊರ ಬೀಳುವುವು. ಇದಕ್ಕೆ ಸ್ವಲ್ಪ

ಕಾಲಾವಕಾಶವು ಬೇಕು. ಸೋಂಕು ತಗುಲಿದಂದಿನಿಂದ, ರೋಗ ಬಲಿಯುವ ತನಕದ ಅವಧಿಯನ್ನು ಇನ್‌ಕ್ಯುಬೇಷನ್ ಪೀರಿಯಡ್ ಅಥವಾ ರೋಗಪರಿಪಕ್ವ ಆಗುವ ಅವಧಿ ಎನ್ನುತ್ತಾರೆ.

**(10) ಐಸೋಲೇಷನ್ (ಪ್ರತ್ಯೇಕ್ಷವಾಗಿ ರೋಗಿಯನ್ನು ಇರಿಸುವುದು):**

ಸೋಂಕಿರುವ ರೋಗದ ವ್ಯಕ್ತಿಯನ್ನು, ಇತರೆ ಆರೋಗ್ಯವಂತರಿಂದ ಪ್ರತ್ಯೇಕವಾಗಿರಿಸುವುದನ್ನು ಐಸೋಲೇಷನ್ ಎನ್ನುತ್ತಾರೆ.

**(11) ಕ್ಯಾರಿಯರ್ (ರೋಗವಾಹಕ):**

ಹೊರಗಡೆ ರೋಗಲಕ್ಷಣಗಳು ಕಾಣದೆ, ವ್ಯಕ್ತಿ ರೋಗಾಣುಗಳನ್ನು ಹೊಂದಿದ್ದರೆ ಅಥವಾ ಇತರರಿಗೆ, ಸೋಂಕು ಹರಡುವ ಸ್ಥಿತಿಯಲ್ಲಿದ್ದರೆ ಅವರನ್ನು ಕ್ಯಾರಿಯರ್ ಅಥವಾ ರೋಗವಾಹಕ ವ್ಯಕ್ತಿ ಎನ್ನುತ್ತಾರೆ.

**(12) ಫೊಮೈಟೆಸ್ (ಸೋಂಕು ಹೀರಕಗಳು):**

ಅಂಟುರೋಗಿ ಉಪಯೋಗಿಸಿದ ಬಟ್ಟೆಬರೆ, ಪಾತ್ರೆ ಇತ್ಯಾದಿ.

**(13) ಇನ್‌ಫೆಸ್ಟೇಶನ್:**

ಪರೋಪ ಜೀವಿಗಳಿಗೆ ಸ್ಥಳ ಕೊಡುವಿಕೆ, ಸಂಧಿಪದಿಗಳು ಮನುಷ್ಯನ ಶರೀರ ಅಥವಾ ಪ್ರಾಣಿಗಳು ಅಥವಾ ಬಟ್ಟೆಗಳ ಮೇಲಿರುವುದು. ಉದಾ.: ಸಂಧಿಪದಿಗಳು ಅಥವಾ ಹೆಗ್ಗಣ ಆಶ್ರಯ ಪಡೆಯುವುದು.

**(14) ಕಂಟಾಮಿನೇಷನ್ (ಕಲುಷಿತತೆ):**

ಸೋಂಕುಕಾರಕ (ಏಜೆಂಟ್) ಶರೀರದ ಮೇಲೆ ಅಥವಾ ನಿರ್ಜೀವಿ ವಸ್ತುಗಳ ಮೇಲಿರುವುದು. ಅಂತಹವುಗಳೆಂದರೆ, ಗೊಂಬೆಗಳು, ಬಟ್ಟೆಗಳು, ಉಪಕರಣಗಳು, ಆಹಾರ, ನೀರು ಇತ್ಯಾದಿ.

**(15) ಕ್ವಾರಂಟೈನ್:**

ಸೋಂಕಿಗೆ ಒಳಗಾಗಿರಬಹುದೆಂಬ ಅನುಮಾನದ ಮೇಲೆ ಪ್ರತ್ಯೇಕಿಸಿಡುವುದು.

**(16) ಪ್ಯಾಥೋಜೆನಿಕ್:**

ರೋಗ ಉಂಟು ಮಾಡುವ

(17) **ಪಾರಾಸೈಟ್:**

ಇನ್ನೊಂದು ಜೀವಿಯ ಮೇಲೆ ಇದ್ದು ಜೀವಿಸುವ ಪರೋಪಜೀವಿ.

(18) **ಹೋಸ್ಟ್ (Host):**

ಯಾರ ಮೇಲೆ ಪರೋಪಜೀವಿಗಳು ಬದುಕುತ್ತವೆಯೋ ಅಂತಹ ಪ್ರಾಣಿ ಅಥವಾ ಮನುಷ್ಯ.

(19) **ಡಿಸ್‌ಇನ್‌ಪೆಕ್ಷನ್ :**

ಹಾನಿಕಾರಕ ಸೂಕ್ಷ್ಮಜೀವಿಗಳನ್ನು (ಮಿಣಿಜೀವಿಗಳು) ನಾಶ ಮಾಡುವ ಪ್ರಕ್ರಿಯೆ.

(20) **ಡಿಸ್‌ಇನ್‌ಫೆಸ್ಟೇಶನ್ :**

ಮನುಷ್ಯನ ಮೇಲೆ ವಾಸಿಸುವ ರೋಗ ಉಂಟುಮಾಡುವ ಕೀಟ ಮುಂತಾದವುಗಳನ್ನು ನಾಶಪಡಿಸುವಿಕೆ.

(21) **ಆರ್ಥ್ರೋ ಪಾಡ್ಸ್ :**

ಕೀಟಗಳು, ಜೇಡಗಳು ಮತ್ತು ಅವುಗಳ ಸಂಬಂಧಿಗಳು ಸೇರಿದಂತೆ, ಪ್ರಾಣಿಗಳ ಒಂದು ಗುಂಪು.

(22) **ಆ್ಯಂಟೀಸೀರಮ್ :**

ನಿರ್ದಿಷ್ಟ ಕಾಯಿಲೆಗಳಿಗೆ, ತಾತ್ಕಾಲಿಕ ಪ್ರತಿ ರೋಧಕತೆ ಕೊಡುವಂತಹ ನಿರ್ದಿಷ್ಟ ಸೀರಮ್‌ಗಳು. ಉದಾಹರಣೆಗೆ ಆ್ಯಂಟೀಡಿಫ್ತೀರಿಯಾ ಸೀರಮ್.

# ೩. ರೋಗದ ಹರಡಿಕೆ (Disease Transmission)

ರೋಗ, ಸೋಂಕಿನ ಮೂಲದಿಂದ ಅನೇಕ ಮಾರ್ಗಗಳ ಮೂಲಕ ಈಡಾಗುವ ಆಶ್ರಯ ಜೀವಿಯಿಂದ ಮನುಷ್ಯನಿಗೆ ಹರಡುತ್ತದೆ. ರೋಗ ಯಾವ ರೀತಿ ಹರಡಿತು ಎಂಬುದು ತಿಳಿದುಕೊಳ್ಳುವುದರಿಂದ, ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಹಾಯಕವಾಗುತ್ತದೆ.

**1) ಸೋಂಕಿನ ಮೂಲ (Source of Infection):**

ಅನೇಕ ಪ್ರಕರಣಗಳಲ್ಲಿ ಮನುಷ್ಯನೇ ಸೋಂಕಿನ ಮೂಲವಾಗಿರುತ್ತಾನೆ. ಆತ ರೋಗವಾಹಕ ಅಥವಾ ಕ್ಯಾರಿಯರ್ ಆಗಿರಬಹುದು. ಕೆಲವೊಮ್ಮೆ, ಸೋಂಕಿನ ಮೂಲ, ಸೋಂಕಿನಿಂದ ಕೂಡಿದ ಪ್ರಾಣಿಯು ಆಗಿರಬಹುದು (ಉದಾ.: ರೇಬಿಸ್ (ನಾಯಿಹುಚ್ಚು)ನಲ್ಲಿ ನಾಯಿ)

**2) ಹರಡಿಕೆಯ ವಿಧಾನಗಳು (Modes of Transmission):**

ರೋಗ ಹರಡಿಕೆಯ ವಿಧಾನಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಬಹುದು. ಪ್ರತ್ಯಕ್ಷ (Direct), ಅಪ್ರತ್ಯಕ್ಷ (Indirect) ಎಂದು.

**1. ನೇರವಾಗಿ ಹರಡುವುದು (Direct Transmission):**

(1) ನೇರ ಸಂಪರ್ಕದಿಂದ (Direct Contact)

(2) ತುಂತುರು ಸೋಂಕು (Droplet Infection)

(3) ಸೋಂಕಿನಿಂದ ಕೂಡಿದ ಮಣ್ಣಿನ ಸಂಪರ್ಕ

(4) ಚುಚ್ಚುವಿಕೆ ಮೂಲಕ ಚರ್ಮ ಅಥವಾ ಲೋಳ್ಪರೆ ಒಳಕ್ಕೆ ಹೋಗಿರುವುದು.

(5) ಮಾಸು ಮೂಲಕ ಹರಡಿರುವುದು ಅಥವಾ ನೆಟ್ಟ ನಿಲುವಿನ ಮೂಲಕ ಹರಡಿರುವುದು (Transplacental or Vertical Transmission)

2. ಪರೋಕ್ಷವಾಗಿ ಹರಡುವುದು (Indirect Transmission):

(1) ವಾಹಕಗಳ ಮೂಲಕ ಹರಡಿಕೆ (Vehicle-borne transmission)

(2) ಸೋಂಕು, ಕೀಟಗಳ ಮೂಲಕ ಹರಡಿಕೆ (Vector-borne transmission)

(3) ಗಾಳಿ ಮೂಲಕ ಹರಡಿಕೆ (Air borne transmission)

(4) ರೋಗಿ ಬಳಸಿದ ವಸ್ತುಗಳ ಮೂಲಕ ಹರಡಿಕೆ (Fomite-borne transmission)

1. ನೇರವಾಗಿ ಹರಡುವುದು

(1) ನೇರವಾದ ಸಂಪರ್ಕದಿಂದ (Direct Contact):

ರೋಗಕಾರಕ ನೇರವಾಗಿ, ಸೋಂಕಿನ ವ್ಯಕ್ತಿಯಿಂದ ಈಡಾಗುವ ಆಶ್ರಯದಾತನಿಗೆ, ಶಾರೀರಿಕ ಸಂಪರ್ಕದ ಅವಧಿಯಲ್ಲಿ ಹರಡುತ್ತದೆ. ಅಂದರೆ, ಸ್ಪರ್ಶ, ಚುಂಬನ, ಲೈಂಗಿಕ ಸಂಪರ್ಕದಿಂದ ಸೋಂಕು ಹರಡುತ್ತದೆ. ನೇರವಾದ ಸಂಪರ್ಕದಿಂದ ಲೈಂಗಿಕ ರೋಗಗಳು, ಚರ್ಮ ರೋಗಗಳು, ಕುಷ್ಠ ರೋಗ ಮತ್ತು ಕಣ್ಣಿನ ಸೋಂಕುಗಳು ಹರಡುತ್ತವೆ.

(2) ತುಂತುರು ಮೂಲಕ ಸೋಂಕು (Droplet Infection):

ಯಾವಾಗ ವ್ಯಕ್ತಿ ಕೆಮ್ಮುತ್ತಾನೋ, ಸೀನುತ್ತಾನೋ ಅಥವಾ ಜೋರಾಗಿ ಮಾತನಾಡುತ್ತಾನೋ ಆಗ ಜೊಲ್ಲಿನ ತುಂತುರು ಮತ್ತು ಮೂಗಿನ ಸ್ರಾವಗಳು ವಾತಾವರಣದಲ್ಲಿ ಸೇರುತ್ತವೆ. ಯಾವುದೇ ವ್ಯಕ್ತಿ ಸೋಂಕಿನ ವಸ್ತುಗಳ ಸಮೀಪವಿದ್ದಾಗ ಅವುಗಳಲ್ಲಿ ಕೆಲವು ಉಸಿರಿನ ಮೂಲಕ ಶರೀರದೊಳಕ್ಕೆ ಸೇರುತ್ತವೆ. ಉದಾಹರಣೆಗೆ: ನೆಗಡಿ ಇರುವ ವ್ಯಕ್ತಿಯಿಂದ, ಇನ್‌ಫ್ಲೂಯೆಂಜಾ ಇರುವ ವ್ಯಕ್ತಿಯಿಂದ, ಕ್ಷಯರೋಗ ಹೊಂದಿರುವವನಿಂದ, ದಡಾರ, ಡಿಫ್ತಿರಿಯಾ, ಸೀತಾಳೆ ಸಿಡುಬು, ನಾಯಿಕೆಮ್ಮು, ಗದಗಟ್ಟು (ಮಂಪ್ಸ್) ಹೊಂದಿರುವ ವ್ಯಕ್ತಿ ಸೀನಿದಾಗ, ಕೆಮ್ಮಿದಾಗ ತುಂತುರು ಮೂಲಕ ರೋಗಾಣುಗಳು ಸಮೀಪವಿರುವ, ಆರೋಗ್ಯವಂತ ವ್ಯಕ್ತಿಗೆ ಹರಡಬಹುದು. ಜನಸಂದಣಿ ಇರುವ ಜಾಗಗಳಲ್ಲಿ ತುಂತುರು ಮೂಲಕ ರೋಗ ಹರಡುವ ಸಾಧ್ಯತೆಗಳು ಹೆಚ್ಚು.

(3) ಸೋಂಕಿನ ಮಣ್ಣಿನ ಸಂಪರ್ಕ (Contact with Infected Soil):

ಉದಾ.: ಧನುರ್ವಾಯು (ಟೆಟನಸ್)

(4) **ಪ್ರಾಣಿ ಕಚ್ಚಿರುವುದು:**

ಹುಚ್ಚುನಾಯಿ ಕಚ್ಚಿದರೆ ರೇಬಿಸ್ ಬರುತ್ತದೆ.

**2. ಪರೋಕ್ಷವಾಗಿ ಹರಡುವಿಕೆ (Indirect Transmission)**

(1) **ವಾಹಕಗಳ ಮೂಲಕ ಹರಡುವಿಕೆ** (Vehicle borne Transmission):

ರೋಗಕಾರಕಗಳ ಮೂಲಕ ರೋಗ ಹರಡುತ್ತದೆ. ಅವುಗಳೆಂದರೆ,

ಅ) ನೀರು

ಆ) ಆಹಾರ

ಇ) ಹಾಲು ಅಥವಾ ಹಾಲಿನ ಉತ್ಪನ್ನಗಳು

ಈ) ಐಸ್

ಉ) ಸೀರಮ್ ಅಥವಾ ಪ್ಲಾಸ್ಮಾ ಅಥವಾ ಇತರೆ ಜೈವಿಕ ಉತ್ಪನ್ನಗಳು. ಇವುಗಳಲ್ಲೆಲ್ಲಾ ರೋಗ ಹರಡುವುದರಲ್ಲಿ ಕಲುಷಿತಗೊಂಡ ನೀರು ಬಹಳ ಮುಖ್ಯವಾದದ್ದು.

**ವಾಹಕಗಳ ಮೂಲಕ ಹರಡುವ ರೋಗಗಳೆಂದರೆ,**

1) ಕಾಲರಾ

2) ಟೈಫಾಯಿಡ್ ಜ್ವರ

3) ಪೋಲಿಯೋ ಮೈಲೈಟಿಸ್

4) ವೈರಲ್ ಹೆಪಟೈಟಿಸ್ (ಜಾಂಡೀಸ್)

5) ಪರಾವಲಂಬಿ ಜೀವಿಗಳಿಂದ ಹರಡುವ ಜಂತುಹುಳು ಇತ್ಯಾದಿ.

ರೋಗಿಯು ವಿಸರ್ಜಿಸುವ ಮಲದಿಂದಾಗಿ ನೀರು, ಆಹಾರ ಮೊದಲಾದವು ಕಲುಷಿತಗೊಳ್ಳುತ್ತವೆ. ಮಲಮೂತ್ರಗಳನ್ನು ಸರಿಯಾಗಿ ವಿಲೇವಾರಿ ಮಾಡದೆ ಇರುವುದರಿಂದ, ಮಲ, ನೀರಿನ ಮೂಲಗಳಲ್ಲಿ ಸೇರ್ಪಡೆಗೊಂಡು, ನೀರನ್ನು ಕಲುಷಿತಗೊಳಿಸುವುದರಿಂದ ರೋಗಗಳು ಹರಡುತ್ತವೆ. ಆದುದರಿಂದ, ನೀರಿನ ಮೂಲಗಳ ಬಳಿ ಮಲ-ಮೂತ್ರಗಳನ್ನು ವಿಸರ್ಜನೆ ಮಾಡಬಾರದು.

ಕಲುಷಿತಗೊಂಡ ರಕ್ತದ ಮೂಲಕ ವೈರಲ್ ಹೆಪಟೈಟಿಸ್ (ಜಾಂಡೀಸ್), ಮಲೇರಿಯಾ ಹಾಗೂ ಸಿಫಿಲಿಸ್ ಕಾಯಿಲೆಗಳು ಹರಡುತ್ತವೆ.

(2) ರೋಗಿ ಉಪಯೋಗಿಸಿದ ಬಟ್ಟೆಬರೆ, ವಸ್ತುಗಳ ಮೂಲಕ ರೋಗ ಹರಡುವಿಕೆ (ಫೋಮೈಟ್ಸ್ ಮೂಲಕ):

ಅಂಟುರೋಗಿ ಉಪಯೋಗಿಸಿದ ಟವೆಲ್‌ಗಳು, ಬಟ್ಟೆ, ಕರವಸ್ತ್ರ, ಪಾತ್ರೆಗಳು, ಲೋಟಗಳು, ಚಮಚಗಳು, ಪೆನ್ನು, ಪೆನ್ಸಿಲ್‌ಗಳು, ಪುಸ್ತಕಗಳು, ಗೊಂಬೆಗಳೇ ಮೊದಲಾದವುಗಳಿಂದ ಹರಡುತ್ತದೆ. ಅಂತಹ ರೋಗಗಳೆಂದರೆ, ಅಮಿಬಿಯಾಸಿಸ್, ಬ್ಯಾಸಿಲರಿಡೀಸೆಂಟ್ರಿ (ಆಮಶಂಕೆ), ಟೈಫಾಯಿಡ್ ಜ್ವರ, ಶೀತಾಳೆ ಸಿಡುಬು, ಡಿಫ್ತೀರಿಯಾ, ವೈರಲ್ ಹೆಪಟೈಟಿಸ್ (ಜಾಂಡೀಸ್) ಮತ್ತು ಕಣ್ಣಿನ ಸೋಂಕುಗಳು.

**3) ಕ್ರಿಮಿ ಕೀಟಗಳ ಮೂಲಕ ರೋಗ ಹರಡುವಿಕೆ:**

ಸೊಳ್ಳೆಗಳು, ನೊಣಗಳು, ಚಿಗಟಗಳು, ಉಣ್ಣೆಗಳು ತಮ್ಮ ಶರೀರದಲ್ಲಿ ರೋಗಕಾರಕಗಳನ್ನು ಕೊಂಡೊಯ್ಯುತ್ತವೆ. ಉದಾ.: ಮನೆ ನೊಣ ಆಮಶಂಕೆಯ (Dysentery Organisms) ರೋಗಾಣುಗಳನ್ನು ಕೊಂಡೊಯ್ಯುತ್ತವೆ.

ಅಂಟು ರೋಗಗಳನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಸಾಮಾನ್ಯವಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು:

ರೋಗಕಾರಕ (ಏಜೆಂಟ್), ಆಶ್ರಯದಾತ (ಹೋಸ್ಟ್) ಮತ್ತು ಪರಿಸರದಲ್ಲಿ ನಡೆಯುವ ಪ್ರತಿಕ್ರಿಯೆಯ ಫಲಿತಾಂಶದಿಂದ ರೋಗ ಉಂಟಾಗುತ್ತದೆ. ರೋಗವನ್ನು ತಡೆಗಟ್ಟಲು ಪ್ರತಿಕ್ರಿಯೆ ಉಂಟಾಗುವುದಕ್ಕೆ ಅವಕಾಶವನ್ನು ಕೊಡಬಾರದು. ಒಮ್ಮೆ ರೋಗ ಆರಂಭಗೊಂಡರೆ ಆ ರೋಗ, ಮುಂದೆ ಹರಡದಂತೆ, ತಡೆಗಟ್ಟಲು ಅಗತ್ಯವಾದ ಸೂಕ್ತ ಕ್ರಮಗಳನ್ನು ತಡಮಾಡದೆ ಕೈಗೊಳ್ಳಬೇಕು.

**ಸೋಂಕು ಹರಡುವುದನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಕ್ರಮಗಳೆಂದರೆ:**

(1) ಸೋಂಕಿನ ಮೂಲವನ್ನು ನಿಯಂತ್ರಿಸುವುದು (Controlling the source of infection)

(2) ರೋಗ ಹರಡುವ ಮಾರ್ಗಗಳನ್ನು ಮುಚ್ಚುವುದು (Blocking channels of transmission)

(3) ಸೋಂಕಾಗುವವರನ್ನು ರಕ್ಷಿಸುವುದು (Protection of susceptibles)

**ಸೋಂಕಿನ ಮೂಲವನ್ನು ನಿಯಂತ್ರಿಸುವುದು:**

ಸೋಂಕಿನ ಸಾಮಾನ್ಯ ಮೂಲಗಳೆಂದರೆ, ಸೋಂಕಿನ ವ್ಯಕ್ತಿಗಳು, ರೋಗ

ವಾಹಕ (ಕ್ಯಾರಿಯರ್ಸ್)ರಾಗಿರುತ್ತಾರೆ. ಸೋಂಕಿನ ಮೂಲವನ್ನು ನಿರ್ಮೂಲನೆ ಮಾಡುವುದರಿಂದ ರೋಗ ಹರಡುವುದನ್ನು ಕಡಿಮೆ ಮಾಡಬಹುದು ಅಥವಾ ನಿಯಂತ್ರಿಸಬಹುದು ಮನುಷ್ಯನ ಸೋಂಕಿನ ಮೂಲವನ್ನು ನಿಯಂತ್ರಿಸುವ ಸಾಮಾನ್ಯ ಕ್ರಮಗಳೆಂದರೆ, ಬೇಗನೆ ರೋಗವನ್ನು ಪತ್ತೆ ಮಾಡುವುದು, ರೋಗದ ಬಗ್ಗೆ ವರದಿ ಮಾಡುವುದು (ನೋಟಿಫಿಕೇಷನ್), ಸೋಂಕು ರೋಗಿಯನ್ನು ಪ್ರತ್ಯೇಕ ಕೊಠಡಿಯಲ್ಲಿರಿಸಿ ಆರೈಕೆ ಮಾಡುವುದು, ಚಿಕಿತ್ಸೆಯನ್ನು ಏರ್ಪಡಿಸುವುದು, ಸರ್ವೇಲೆನ್ಸ್ ಮಾಡುವುದು ಮತ್ತು ಸೋಂಕು ನಾಶ ಮಾಡುವುದು (ಡಿಸ್‌ಇನ್‌ಫೆಕ್ಷನ್).

### 1. (1) ಬೇಗನೆ ರೋಗವನ್ನು ಪತ್ತೆ ಮಾಡುವುದು (Early Diagnosis):

ರೋಗದ ಪ್ರಕರಣಗಳನ್ನು ಮತ್ತು ರೋಗ ವಾಹಕರನ್ನು (ಕ್ಯಾರಿಯರ್ಸ್) ಬೇಗನೆ ಪತ್ತೆಮಾಡಿ ಚಿಕಿತ್ಸೆಯನ್ನು ವ್ಯವಸ್ಥೆ ಮಾಡುವುದರಿಂದ, ರೋಗವನ್ನು ನಿಯಂತ್ರಿಸಬಹುದು. ಪ್ರಯೋಗ ಶಾಲೆಯ ಪರೀಕ್ಷೆಗಳ ಮೂಲಕ ರೋಗದ ಖಚಿತತೆಯನ್ನು ತಿಳಿದುಕೊಳ್ಳಬಹುದು.

### (2) ನೋಟಿಫಿಕೇಷನ್ (ವರದಿ ಮಾಡುವುದು) (Notification):

ಒಮ್ಮೆ ಸೋಂಕು ರೋಗವೆಂದು ನಿರ್ಧರಿಸಿದ ನಂತರ, ಆ ಬಗ್ಗೆ ತಡ ಮಾಡದೆ, ಸ್ಥಳೀಯ ಆರೋಗ್ಯ ಪ್ರಾಧಿಕಾರಕ್ಕೆ ವರದಿ ಮಾಡುವುದು ಅತ್ಯಗತ್ಯ. ವರದಿ ಸ್ವೀಕರಿಸಿದ ಆರೋಗ್ಯಾಧಿಕಾರಿಗಳು ಅಗತ್ಯವಾದ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದಲ್ಲದೆ, ರೋಗಿಗೆ ಸೂಕ್ತ ವೈದ್ಯಕೀಯ ಆರೈಕೆಯನ್ನು ಮಾಡಬೇಕು. ಆರೋಗ್ಯದ ಬಗ್ಗೆ ಕಾಳಜಿ ಇರುವವರು, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಗೆ, ರೋಗದ ಬಗ್ಗೆ ಸಕಾಲದಲ್ಲಿ ವರದಿಯನ್ನು ಮಾಡಬೇಕು.

### (3) ರೋಗಿಯನ್ನು ಪ್ರತ್ಯೇಕವಾಗಿರಿಸುವುದು (Isolation):

ಸಾಮಾನ್ಯ ತತ್ವವೆಂದರೆ, ಸೋಂಕನ್ನು ಹೊಂದಿರುವ ರೋಗಿಯನ್ನು ಮನೆಯಲ್ಲಿ ಪ್ರತ್ಯೇಕ ಕೊಠಡಿಯಲ್ಲಿರಿಸಬೇಕು ಅಥವಾ ಆಸ್ಪತ್ರೆಗೆ ಸೇರಿಸಬೇಕು. ಪ್ರತ್ಯೇಕವಾಗಿರಿಸುವ ಉದ್ದೇಶ, ಸೋಂಕಿನ ಹರಡುವಿಕೆಯನ್ನು ಮಿತಗೊಳಿಸುವುದೇ ಆಗಿರುತ್ತದೆ. ಇಂತಹ ರೋಗದವರನ್ನು ಪ್ರತ್ಯೇಕ ಕೊಠಡಿಯಲ್ಲಿರಿಸಬೇಕು. ಅವುಗಳೆಂದರೆ, ಡಿಫ್ತೀರಿಯಾ (ಗಂಟಲು ಮಾರಿ ರೋಗ), ಕಾಲರಾ ಮತ್ತು ಸ್ಟ್ರೆಪ್ಟೋಕಾಕಲ್- ಶ್ವಾಸಕೋಶದ ರೋಗಗಳು, ಸೋಂಕಿನ ಅವಧಿಯನ್ನು ಅವಲಂಬಿಸಿ, ರೋಗಿಯನ್ನು ಪ್ರತ್ಯೇಕವಾಗಿರಿಸಲಾಗುವುದು.

(4) ಚಿಕಿತ್ಸೆ:

ಯಾವುದೇ ರೋಗವನ್ನು ನಿಯಂತ್ರಿಸಬೇಕಾದರೆ, ಸಮರ್ಪಕ ಚಿಕಿತ್ಸೆ ಅತ್ಯಗತ್ಯ. ಚಿಕಿತ್ಸೆಯನ್ನು ಕೊಡಿಸುವುದರಿಂದ, ಸೋಂಕು ಹರಡುವುದು ಕಡಿಮೆಯಾಗುತ್ತದೆ.

(5) ಸರ್ವೇಲೆನ್ಸ್ (ನಿಗಾ ಇಡುವುದು):

ಸೋಂಕು ಹರಡಿರುವುದರ ಬಗ್ಗೆ ನಿಗಾವಹಿಸಬೇಕು. ಹೊಸ ಪ್ರಕರಣಗಳ ಬಗ್ಗೆ ಸಂಬಂಧಿಸಿದ ಆರೋಗ್ಯಾಧಿಕಾರಿಗಳಿಗೆ ವರದಿ ಮಾಡಬೇಕು.

(6) ಸೋಂಕು ನಿವಾರಣೆ (Disinfection):

**ರೋಗ ಪರಿಪಕ್ವ ಆಗುವ ಅವಧಿ ಮತ್ತು ಸೋಂಕು ಹರಡುವ ಅವಧಿ**
**(Periods of Incubation and Communicability)**

| ರೋಗ ಆಗುವ ಅವಧಿ | ರೋಗ ಪರಿಪಕ್ವ ಅವಧಿ | ಸೋಂಕು ಹರಡುವ ಅವಧಿ |
|---|---|---|
| (Disease) | (Incubation Period) | (Period of Communicability) |
| ಸೀತಾಳೆ ಸಿಡುಬು (Chicken-Pox) | 2ರಿಂದ 3 ವಾರಗಳು | ದದ್ದುಗಳು ಮೊದಲು ಕಾಣಿಸಿಕೊಂಡ ಆರು ದಿನಗಳ ನಂತರ |
| ಕಾಲರಾ (Cholera) | 1ರಿಂದ 5 ದಿನಗಳು | ಸಾಮಾನ್ಯವಾಗಿ 7ರಿಂದ 14 ದಿನಗಳು |
| ಡಿಫ್ತೀರಿಯಾ (Diphtheria) | 2ರಿಂದ 5 ದಿನಗಳು | 14ರಿಂದ 28 ದಿನಗಳು |
| ಬ್ಯಾಸಿಲರಿ ಡೀಸೆಂಟರಿ ಆಮಶಂಕೆ (Bacillary Dysentery) | 1ರಿಂದ 7 ದಿನಗಳು | ಮಲದಲ್ಲಿ ರೋಗಾಣುಗಳು ಇರುವ ತನಕ |
| ಸೋಂಕಿನ ಜಾಂಡೀಸ್ (Infective Hepatitis) | 15ರಿಂದ 50 ದಿನಗಳು | ಗೊತ್ತಿಲ್ಲ |

| | | |
|---|---|---|
| ದಡಾರ | 10 ದಿನಗಳು | ಸುಮಾರು 9 ದಿನಗಳು (Measles) |
| ಗದ್ದಕಟ್ಟು, ಮಂಗಬಾವು (Mumps) | 7ರಿಂದ 14 ದಿನಗಳು | ಊತ ಕಡಿಮೆಯಾಗುವ ತನಕ |
| ನಾಯಿಕೆಮ್ಮು (Whooping Cough) | 7ರಿಂದ 14 ದಿನಗಳು | ಸುಮಾರು ಮೂರು ವಾರಗಳು |
| ಪ್ಲೇಗು (Plague) | 2ರಿಂದ 6 ದಿನಗಳು | ಬಬುನಿಕ್ ಪ್ಲೇಗ್, ಮನುಷ್ಯನಿಂದ ಮನುಷ್ಯನಿಗೆ ಹರಡುವುದಿಲ್ಲ. |
| ಪೋಲಿಯೋ ಮೈಲೈಟಿಸ್ (Polio Myelitis) | 7ರಿಂದ 14 ದಿನಗಳು ಅಥವಾ ಅದಕ್ಕಿಂತಲೂ ಹೆಚ್ಚು ದಿನ | ರೋಗದ ಮೊದಲ ಅಥವಾ ಎರಡನೇ ವಾರ |
| ಟೈಫಾಯಿಡ್ ಜ್ವರ (Typhoid Fever) | 5 ದಿನದಿಂದ 3 ವಾರಗಳು | ಮಲ ಮತ್ತು ಮೂತ್ರದಲ್ಲಿ ರೋಗಾಣು ರಹಿತವಾದಾಗ |

2. ರೋಗ ಹರಡುವ ಮಾರ್ಗಗಳನ್ನು ಮುಚ್ಚುವುದು (Blocking the Channels of Transmission)

ಅಂಟು ರೋಗ ಯಾವ ವಿಧಾನದಲ್ಲಿ ಹರಡಿದೆ ಎಂಬುದನ್ನು ಅವಲಂಬಿಸಿರುತ್ತದೆ. ರೋಗ ಹರಡುವ ಮಾರ್ಗಗಳನ್ನು ಬ್ಲಾಕ್ ಮಾಡುವುದರಿಂದ, ರೋಗ ಹರಡುವುದನ್ನು ಪರಿಶೀಲಿಸಬಹುದು.

**ತೆಗೆದುಕೊಳ್ಳಬೇಕಾದ ಮೂಲಭೂತ ಕ್ರಮಗಳು:**

(1) ವಾಹಕಗಳ ಮೂಲಕ ಹರಡುವಿಕೆ (Vehicle Transmission):

ನಾಲ್ಕು ಮುಖ್ಯವಾದ ರೋಗವಾಹಕಗಳೆಂದರೆ, ನೀರು, ಮನುಷ್ಯನ ಮಲ, ಆಹಾರ ಮತ್ತು ಹಾಲು.

ಅ) ನೀರನ್ನು ಶುದ್ಧೀಕರಿಸುವುದರಿಂದ, ನೀರನ್ನು ಕ್ಲೋರಿನೇಷನ್ ಮಾಡುವುದರಿಂದ, ನೀರಿನ ಮೂಲಕ ಹರಡುವ ರೋಗಗಳನ್ನು ತಡೆಗಟ್ಟಬಹುದು.

ಆ) ಮನುಷ್ಯನ ಮಲವನ್ನು ಸುರಕ್ಷಿತ ರೀತಿಯಲ್ಲಿ ವಿಲೇವಾರಿ ಮಾಡುವುದರಿಂದ, ಮಲದ ಮೂಲಕ ಹರಡುವ ರೋಗಗಳನ್ನು ಬ್ಲಾಕ್ ಮಾಡಬಹುದು.

ಇ) ಆಹಾರದ ಮೂಲಕ ಹರಡುವ ಸೋಂಕುಗಳನ್ನು ಆಹಾರದ ತಯಾರಿಕೆ, ವಿತರಣೆಯಲ್ಲಿ ನೈರ್ಮಲ್ಯ ನಿಯಮಗಳನ್ನು ಅನುಸರಿಸುವುದರಿಂದ ನಿಯಂತ್ರಿಸಬಹುದು.

ಆಹಾರ ಪದಾರ್ಥಗಳನ್ನು ಸೋಂಕು ಇರುವ ರೋಗಿಗಳು ಮುಟ್ಟುವುದಾಗಲಿ, ವಿತರಣೆ ಮಾಡುವುದರನ್ನಾಗಲಿ ಮಾಡದಂತೆ ಮುಂಜಾಗ್ರತೆ ವಹಿಸಬೇಕು. ವೈಯಕ್ತಿಕ ಆರೋಗ್ಯದ ಬಗ್ಗೆ ಗಮನ ಕೊಡಬೇಕು. ಆಹಾರ ತಯಾರಿಸುವಾಗ, ವಿತರಿಸುವಾಗ ಕೈಗಳನ್ನು ಶುದ್ಧವಾದ ನೀರಿನಲ್ಲಿ ಕೈಕಾಲುಗಳನ್ನು ತೊಳೆದುಕೊಳ್ಳುವುದನ್ನು ಮರೆಯಬಾರದು.

ಈ) ಹಾಲಿನ ಮೂಲಕ ಸೋಂಕು ಹರಡುವುದನ್ನು ಪಾಶ್ಚ್ಯುರೈಜೇಶನ್ ಮಾಡುವುದರ ಮೂಲಕ ಅಥವಾ ಹಾಲನ್ನು ಉಪಯೋಗಿಸುವ ಮೊದಲು ಕಾಯಿಸುವುದರಿಂದ ನಿಯಂತ್ರಿಸಬಹುದು.

### 3. ಸೋಂಕುಸಾಗಿಕ (Vector Transmission):

ಸೋಂಕು ಸಾಗಿಕ ಅಥವಾ ಕೀಟಗಳು ಸಂಧಿಪದಿ (ಆರ್ಥ್ರೋಪೋಡ್) ಗಳಾಗಿರುತ್ತವೆ. ಸಂಧಿಪದಿಗಳಲ್ಲಿರುವ ಪೋಷಕ ಜೀವಿಗಳು (ಹೋಸ್ಟ್) ರೋಗಕಾರಕಗಳನ್ನು ಹರಡುತ್ತದೆ.

ಪರಿಣಾಮಕಾರಿಯಾಗಿ ಕೀಟಗಳನ್ನು ನಿಯಂತ್ರಿಸಬೇಕಾದರೆ, ಕೀಟಗಳ ಜೀವನ ಚಕ್ರದ ಬಗ್ಗೆ ಸರಿಯಾದ ಜ್ಞಾನವಿರಬೇಕು. ಕೀಟಗಳ ನಿಯಂತ್ರಣಕ್ಕೆ ಪಾಲಿಸಬೇಕಾದ ತತ್ವಗಳು.

ಅ) ಪರಿಸರ ನಿಯಂತ್ರಣ

ಆ) ರಾಸಾಯನಿಕ ನಿಯಂತ್ರಣ

ಇ) ಜೈವಿಕ ನಿಯಂತ್ರಣ

ಈ) ಜೆನೆಟಿಕ್ ನಿಯಂತ್ರಣ

ಮೇಲ್ಕಂಡ ವಿಧಾನಗಳೇ ಅಲ್ಲದೆ, ಇದರ ಜೊತೆಗೆ ಕೀಟಗಳಿಂದ ಹರಡುವ

ರೋಗಗಳನ್ನು ತಡೆಗಟ್ಟಲು ವೈಯಕ್ತಿಕ ರಕ್ಷಣಾ ಕ್ರಮಗಳನ್ನು ಕೈಗೊಳ್ಳಬೇಕು. ಅಂದರೆ, ಸೊಳ್ಳೆ ಪರದೆಯನ್ನು ಉಪಯೋಗಿಸುವುದು, ಸೊಳ್ಳೆಗಳು ಮನೆಯೊಳಗಡೆ ಬರದಂತೆ ಕಿಟಕಿಗಳಿಗೆ ವೈರ್ ಗಾಜ್‌ಗಳನ್ನು ಅಳವಡಿಸುವುದು ಮತ್ತು ರಿಪೆಲ್‌ಯೆಂಟ್ಸ್‌ನ್ನು (Repellants) ಉಪಯೋಗಿಸುವುದು. ಕ್ರಿಮಿ ಕೀಟಗಳು ಅಥವಾ ಸೊಳ್ಳೆಗಳಿಂದ ಹರಡುವುದನ್ನು ತಡೆಗಟ್ಟಲು ಸಾರ್ವಜನಿಕರಿಗೆ ಆರೋಗ್ಯ ಶಿಕ್ಷಣ ನೀಡುವುದಲ್ಲದೆ, ಒಂದು ಅಥವಾ ಹೆಚ್ಚಿನ ವಿಧಾನಗಳ ಮೂಲಕ ಸೋಂಕು ಸಾಗಿಕ ಕೀಟಗಳನ್ನು ನಿಯಂತ್ರಿಸಬೇಕು.

(ಅ) ಪರಿಸರ ನಿಯಂತ್ರಣ:

1) ನಮ್ಮ ಸುತ್ತಮುತ್ತಲ ಪ್ರದೇಶವನ್ನು ಸ್ವಚ್ಛವಾಗಿಡುವುದು.
2) ಹಳ್ಳ–ಗುಂಡಿಗಳಲ್ಲಿ ನೀರು ನಿಂತರೆ, ಸೊಳ್ಳೆಗಳ ಬೆಳವಣಿಗೆಗೆ ಅನುಕೂಲವಾಗುವುದು. ಆದುದರಿಂದ, ಹಳ್ಳ–ಗುಂಡಿಗಳನ್ನು ಕಲ್ಲು–ಮಣ್ಣು ಹಾಕಿ ಮುಚ್ಚಬೇಕು.
3) ಒಳಚರಂಡಿ ವ್ಯವಸ್ಥೆ ಮಾಡಬೇಕು.
4) ಕೊಳವೆಗಳ ಮೂಲಕ ನೀರು ಪೂರೈಕೆಯಾಗುವಂತೆ ಜನರು ಸರ್ಕಾರವನ್ನು ಒತ್ತಾಯಿಸಬೇಕು.
5) ತ್ಯಾಜ್ಯ ವಸ್ತುಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು.

(ಆ) ರಾಸಾಯನಿಕ ನಿಯಂತ್ರಣ:

ಸೋಂಕು ಸಾಗಿಕ ಕೀಟಗಳನ್ನು ನಿಯಂತ್ರಿಸಲು ಡಿ.ಡಿ.ಟಿ.ಯನ್ನು ಸಿಂಪಡಿಸಲು ಅಥವಾ ಬೇರೆ ವಿಧಾನಗಳ ಮೂಲಕ ನಿಯಂತ್ರಿಸಲು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಬೇಕು.

(ಇ) ಜೈವಿಕ ನಿಯಂತ್ರಣ:

ನೀರಿನಲ್ಲಿರುವ ಸೊಳ್ಳೆಗಳನ್ನು ತಿನ್ನಲು ಗಾಂಬೂಸಿಯಾ ಅಥವಾ ಗುಪ್ಪಿ ಮೀನುಗಳನ್ನು ಬಿಡಬೇಕು. ಇತರೆ, ಜೈವಿಕ ನಿಯಂತ್ರಣಗಳು ಜಾರಿ ಬಂದಾಗ, ಜನರು ಅದಕ್ಕೆ ಪ್ರೋತ್ಸಾಹವನ್ನು ನೀಡಬೇಕು.

**4. ಗಾಳಿ ಮೂಲಕ ಹರಡುವ ರೋಗಗಳು (Air Borne Transmission):**

ಗಾಳಿ ಮೂಲಕ ಹರಡುವ ರೋಗಗಳನ್ನು ನಿಯಂತ್ರಿಸುವುದು ಬಹಳ ಕಷ್ಟ

1) ಜನಸಾಂದ್ರತೆಯನ್ನು ತಡೆಯಬೇಕು.

2) ಎಲ್ಲೆಂದರಲ್ಲಿ ಉಗುಳದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.

3) ಗುಡಿಸುವಾಗ ಧೂಳು ಎದ್ದೇಳದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು.

4) ಅಗತ್ಯವಿದ್ದಲ್ಲಿ ವ್ಯಾಕ್ಯೂಮ್ ಕ್ಲೀನರ್‌ನ್ನು ಉಪಯೋಗಿಸಬೇಕು.

5) ಸೀನುವಾಗ, ಕೆಮ್ಮುವಾಗ ಕರವಸ್ತ್ರವನ್ನು ಉಪಯೋಗಿಸಬೇಕು.

**5. ಸೋಂಕು ಹೀರಕಗಳಿಂದ ರೋಗ ಹರಡುವಿಕೆ (Fomite Borne Transmission):**

ಸೋಂಕು ರೋಗಿ ಉಪಯೋಗಿಸಿದ ಟವೆಲ್‌ಗಳು, ಬಟ್ಟೆಬರೆ, ಕರವಸ್ತ್ರಗಳು, ಪಾತ್ರೆಗಳು, ಲೋಟಗಳು, ಚಮಚಗಳು, ಪೆನ್ನುಗಳು, ಪೆನ್ಸಿಲ್‌ಗಳು ಮತ್ತು ಗೊಂಬೆಗಳನ್ನು ಸಮರ್ಪಕವಾಗಿ ಸೋಂಕು ನಿವಾರಣೆಯನ್ನು ಮಾಡಬೇಕು. ಇದನ್ನು ಶುದ್ಧವಾದ ನೀರಿನಿಂದ ತೊಳೆಯುವುದರಿಂದ, ಸ್ವಚ್ಛಗೊಳಿಸುವುದರಿಂದ, ಕುದಿಸುವುದರಿಂದ ಮತ್ತು ಬಿಸಿಲಿನಲ್ಲಿ ತೆರೆದಿಡುವುದರಿಂದ ಮಾಡಬಹುದು ಅಥವಾ ರಾಸಾಯನಿಕ ಸೋಂಕು ನಾಶಕಗಳನ್ನು ಉಪಯೋಗಿಸಬಹುದು.

**6. ಸೋಂಕಿಗೆ ಈಡಾಗುವವರನ್ನು ರಕ್ಷಿಸುವುದು (Protection of Susceptibles):**

ರೋಗಕ್ಕೆ ಈಡಾಗುವವರನ್ನು ರೋಗನಿರೋಧಕ ಚುಚ್ಚುಮದ್ದನ್ನು ಕೊಡಿಸುವುದರ ಮೂಲಕ ಸಂರಕ್ಷಿಸಬಹುದು. ಅಂತಹ ನಿಶ್ಚಿತ ರೋಗನಿರೋಧಕ ನೀಡುವ ರೋಗಗಳು ಯಾವುವೆಂದರೆ:

ಉದಾ.: 1) ಪೋಲಿಯೋ ಮೈಲೈಟಿಸ್

2) ಡಿಫ್ತೀರಿಯಾ (ಗಂಟಲು ಮಾರಿರೋಗ)

3) ಟೆಟನಸ್ (ಧನುರ್ವಾಯು)

4) ನಾಯಿಕೆಮ್ಮು (ವೂಪಿಂಗ್‌ಕಾಫ್)

5) ದಡಾರ (ಮೀಸಲ್ಸ್) ಮತ್ತು

6) ಕ್ಷಯರೋಗ

**7. ಆರೋಗ್ಯ ಶಿಕ್ಷಣ:**

ವೈಯಕ್ತಿಕ ಆರೋಗ್ಯ/ಶುಚಿತ್ವ ನಿಯಮಗಳನ್ನು ಪರಿಪಾಲಿಸುವುದರಿಂದ ಕೆಲವು ಕಾಯಿಲೆಗಳನ್ನು ತಡೆಗಟ್ಟಿಕೊಳ್ಳಬಹುದು. ಮುಂಜಾಗ್ರತೆ ವಹಿಸುವುದು, ರೋಗ ಹರಡುವಿಕೆ ಮತ್ತು ನಿಯಂತ್ರಣದ ಬಗ್ಗೆ ಸರಿಯಾದ ತಿಳಿವಳಿಕೆಯನ್ನು ಪಡೆಯುವುದರಿಂದ ರೋಗ ಬಾರದಂತೆ ತಡೆಗಟ್ಟಿಕೊಳ್ಳಬಹುದು.

# ೪. ಸೋಂಕು ರೋಗಿಯ ಆರೈಕೆ ಮತ್ತು ಚಿಕಿತ್ಸೆ

1. ಸೋಂಕು ಎಂದರೇನು?

ಮನುಷ್ಯನ ಶರೀರದೊಳಕ್ಕೆ ಪ್ರವೇಶಿಸಿದ ಜೈವಿಕಕಾರಕ (ಬಯಾಲಜಿಕಲ್ ಏಜೆಂಟ್)ವನ್ನು ಸೋಂಕು ಎಂದು ಕರೆಯಲಾಗುತ್ತದೆ. ಸೋಂಕಿನಿಂದ, ರೋಗ ಉಂಟಾಗಬೇಕಾದರೆ ವಿವಿಧ ಸಂಗತಿಗಳನ್ನು ಅವಲಂಬಿಸಿರುತ್ತದೆ. ಅವುಗಳೆಂದರೆ:

(1) ಸೋಂಕುಕಾರಕದ ವಿಷಮತೆ ಅಥವಾ ಉಗ್ರತೆ (Virulence of the infective agent).

(2) ಸೋಂಕುಕಾರಕದ ಪ್ರಮಾಣ (Dose of the infective agent)

(3) ಶರೀರದ ರಕ್ಷಣಾತ್ಮಕ ವಿಧಾನ (Body's defensive mechanism)

(4) ಶರೀರವನ್ನು ದುರ್ಬಲಗೊಳಿಸುವ ಕಾಯಿಲೆಗಳು ಈಗಾಗಲೇ ಇದ್ದರೆ (ಉದಾ.: ಸಕ್ಕರೆ ಕಾಯಿಲೆ, ಕ್ಯಾನ್ಸರ್, ರಕ್ತದ ಕಾಯಿಲೆಗಳಾದ ರಕ್ತಹೀನತೆ (ಅನಿಮಿಯಾ) ಲ್ಯೂಕಿಮಿಯಾ (ರಕ್ತ ಕ್ಯಾನ್ಸರ್)

(5) ದೀರ್ಘಕಾಲ ಔಷಧಿಗಳ ಸೇವನೆ. ಉದಾ.: ಸ್ಟಿರಾಯ್ಡ್‌ಗಳು (Chronic use of drugs like steroids and cytotoxic drugs.

(6) ಇತರ ಸಂಗತಿಗಳಾದ ಮದ್ಯಪಾನದ ಚಟ, ಅಪೌಷ್ಟಿಕತೆ (Other factors like chronic alchoholism, malnutrition)

**ಸೋಂಕು ಉಂಟು ಮಾಡುವ ಸಾಮಾನ್ಯ ಜೈವಿಕಕಾರಕ (ಬಯಾಲಾಜಿಕ್ ಏಜೆಂಟ್ಸ್)ಗಳು:**

(1) ಬ್ಯಾಕ್ಟೀರಿಯಾ

(2) ವೈರಸ್‌ಗಳು

(3) ಫಂಗೈ (ಬೂಷ್ಟ್)

(4) ಪರಾವಲಂಬಿ ಜೀವಿಗಳು (Protozoa)

(5) ಕರುಳು ಹುಳುಗಳು (Helminths)

(6) ಕೀಟಗಳು (ಹೇನು, ಕೂರೆ, ಚಿಗಟ ಇತ್ಯಾದಿ)

**2. ಸೋಂಕಿನ ಚಿಹ್ನೆಗಳು ಮತ್ತು ಲಕ್ಷಣಗಳು:**

ಜ್ವರ : ಶರೀರದ, ಯಾವುದೇ ಅಂಗ ಅಥವಾ ಅಂಗಾಂಗ ವ್ಯೂಹದಲ್ಲಿ ಸೋಂಕಿದ್ದರೆ ಸಾಮಾನ್ಯ ಲಕ್ಷಣವೆಂದರೆ ಜ್ವರ.

ಬಾಯಿಯ ಮೂಲಕ ಟೆಂಪರೇಚರ್ ತೆಗೆದುಕೊಂಡಾಗ ಇರುವ ನಾರ್ಮಲ್ 37 ಡಿಗ್ರಿ ಸೆಂಟಿಗ್ರೇಡ್ (98.6 ಡಿಗ್ರಿ ಎಫ್ ಮತ್ತು ಕಂಕುಳಲ್ಲಿ ತೆಗೆದುಕೊಂಡಾಗ ಇರುವಂತಹುದು 36.50 ಡಿಗ್ರಿ ಸೆಂಟಿ ಗ್ರೇಡ್ (98 ಡಿಗ್ರಿ ಎಫ್)

ಸೋಂಕಿದ್ದಾಗ ಬರುವ ಜ್ವರವಿದ್ದಾಗ ಸಾಮಾನ್ಯವಾಗಿ ಚಳಿ ಮತ್ತು ಶರೀರದಲ್ಲಿ ನಡುಕವಿರುತ್ತದೆ. ಜ್ವರವಿದ್ದಾಗ ಈ ಕೆಳಕಂಡ ಲಕ್ಷಣಗಳು ಕಂಡು ಬರಬಹುದು.

1) ಶರೀರದಲ್ಲಿ ನೋವುಗಳಿರುತ್ತವೆ.

2) ತಲೆನೋವು

3) ಸುಸ್ತು

4) ಚಟುವಟಿಕೆಯಿರುವುದಿಲ್ಲ

**ಸಾಂಕ್ರಾಮಿಕ ರೋಗಗಳ ವಿಂಗಡನೆ** (Classification of Communicable Diseases)

**(ಅ) ಬ್ಯಾಕ್ಟಿರಿಯಾಗಳಿಂದ ಬರುವ ರೋಗಗಳು:**

1) ಆಂಥ್ರಾಕ್ಸ್

2) ಕಾಲರಾ

3) ಡಿಫ್ತೀರಿಯಾ

4) ಫುಡ್‌ಪಾಯಿಸ್‌ನಿಂಗ್

5) ಕುಷ್ಠರೋಗ

6) ನಾಯಿಕೆಮ್ಮು

7) ಪ್ಲೇಗ್

8) ಟೆಟನಸ್

9) ಟೈಫಾಯಿಡ್ ಜ್ವರ

10) ಕ್ಷಯರೋಗ

(ಆ) **ವೈರಸ್‌ಗಳಿಂದ ಬರುವ ರೋಗಗಳು:**

1) ನೆಗಡಿ

2) ಡೆಂಗ್ಯೂ

3) ಇನ್‌ಫ್ಲೂಯೆಂಜಾ

4) ಸೋಂಕಿನ ಕಾಮಾಲೆ (ಎ ಮತ್ತು ಬಿ ವಿಧ)

5) ಸೀತಾಳೆ ಸಿಡುಬು (Chicken Pox)

6) ದಡಾರ (ಮೀಸಲ್ಸ್)

7) ಪೋಲಿಯೋ ಮೈಲೈಟಿಸ್

8) ರೇಬಿಸ್ (ನಾಯಿಹುಚ್ಚು)

9) ಹಳದಿಜ್ವರ

10) ಟ್ರಕೋಮಾ

11) ಏಡ್ಸ್‌ರೋಗ

(ಇ) **ಪರಾವಲಂಬಿ ಜೀವಿಗಳಿಂದ ಬರುವ ರೋಗಗಳು** (Parasitic Diseases):

1) ಅಮಿಬಿಯಾಸಿಸ್

2) ಫೈಲೇರಿಯಾ

3) ಕಾಲ ಅಜಾರ್

4) ಮಲೇರಿಯಾ

5) ಜಂತುಹುಳು ಬಾಧೆ

(ಈ) ಲೈಂಗಿಕ ರೋಗಗಳು:

1) ಸಿಫಿಲಿಸ್

2) ಗೊನೋರಿಯಾ

3) ಶಾಂಕ್ರಾಯಿಡ್

4) ಗ್ರಾನ್ಯುಲೋಮಾ ವೆನೆರಿಯಂ

# ೫. ಸಾಂಕ್ರಾಮಿಕ ರೋಗಗಳು

## (ಅ) ಬ್ಯಾಕ್ಟೀರಿಯಾಗಳಿಂದ ಬರುವ ರೋಗಗಳು


### 1. ಕಾಲರಾ

ಕಾಲರಾ, ಬಹಳ ತೀವ್ರ ರೀತಿಯಲ್ಲಿ ವೇಗವಾಗಿ ಹರಡುವ ಸೋಂಕು ರೋಗ. ಇದು 'ವಿಬ್ರಿಯೋ ಕಾಲರಾ' ಎನ್ನುವ ಸೂಕ್ಷ್ಮ ರೋಗಾಣು ಮೂಲಕ ಬರುತ್ತದೆ.

**ಸೋಂಕಿನ ಮೂಲ :** ಕಾಲರಾ ರೋಗಿ ಅಥವಾ ಕಾಲರಾ ರೋಗಾಣುಗಳನ್ನು ಹೊಂದಿರುವ ವಾಹಕ (ಕ್ಯಾರಿಯರ್) ಸೋಂಕನ್ನು ಹರಡುವ ಮೂಲವಾಗಿರುತ್ತಾರೆ.

**ಸೋಂಕಿನ ವಸ್ತುಗಳು :** ಕಾಲರಾ ರೋಗಿಯ ಭೇದಿ ಮತ್ತು ವಾಂತಿ, ಸೋಂಕು ಉಂಟು ಮಾಡುವಂತಹವುಗಳಾಗಿರುತ್ತವೆ. ರೋಗಿ ವಿಸರ್ಜಿಸುವ ಭೇದಿ ಮತ್ತು ವಾಂತಿಯಿಂದ ನೀರು, ಆಹಾರ ಪದಾರ್ಥಗಳು, ರೋಗಿ ವಿಸರ್ಜಿಸಿದ ಭೇದಿ ಮತ್ತು ವಾಂತಿಯ ಮೇಲೆ ಕೂತ ನೊಣಗಳು ರೋಗವನ್ನು ಹರಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಸೋಂಕಿನ ವ್ಯಕ್ತಿ ನೀರಿನ ಮೂಲದ ಹತ್ತಿರ
ಮಲವಿಸರ್ಜನೆ ಮಾಡುತ್ತಿರುವುದು



ಕಾಲರಾ ಎಲ್ಲ ವಯಸ್ಸಿನವರಲ್ಲೂ ಕಾಣಿಸಿಕೊಳ್ಳಬಹುದು. ಸಾಮಾಜಿಕವಾಗಿ, ಆರ್ಥಿಕವಾಗಿ ದುರ್ಬಲವಾಗಿರುವ ಗುಂಪುಗಳಲ್ಲಿ ಹಾಗೂ ವೈಯಕ್ತಿಕ ಸ್ವಚ್ಛತೆ ಮತ್ತು ಪರಿಸರ ಸ್ವಚ್ಛತೆಯನ್ನು ಕಾಪಾಡಿಕೊಳ್ಳದವರಲ್ಲಿ ಕಾಲರಾ ಕಾಣಿಸಿಕೊಳ್ಳುವ ಸಂಭವ ಹೆಚ್ಚು.

**ರೋಗ ಹೇಗೆ ಹರಡುತ್ತದೆ?**

ಮನುಷ್ಯನೇ ಕಾಲರಾ ರೋಗ ಹರಡುವಿಕೆಗೆ ಮೂಲ ಕಾರಣ. ಈ ರೋಗವನ್ನು ಹೊಂದಿರುವ ಮನುಷ್ಯನ ಮಲದ ಮೂಲಕ ರೋಗದ ಸೂಕ್ಷ್ಮ ರೋಗಾಣುಗಳು ಹೊರ ಬಿದ್ದು ಇತರರಿಗೂ ರೋಗ ಹರಡುತ್ತದೆ.

ಕಲುಷಿತಗೊಂಡ ನೀರಿನ ಮೂಲಕ ಕಾಲರಾ ಹರಡುವುದು ಸಾಮಾನ್ಯ. ಕಲುಷಿತಗೊಂಡ ನೀರು ಮತ್ತು ಆಹಾರದ ಮೂಲಕ ಜಠರವನ್ನು ಈ ರೋಗದ ರೋಗಾಣುಗಳು ಪ್ರವೇಶಿಸಿ ಸಣ್ಣ ಕರುಳನ್ನು ಹದಗೆಡಿಸಿ, ಅದರ ಕೆಲಸಗಳು ತಪ್ಪುವಂತೆ ಮಾಡುವುದರಿಂದ ವಾಂತಿ ಭೇದಿಗಳು ಶುರುವಾಗುತ್ತವೆ. 'ಅಕ್ಕಿ ತೊಳೆದ' ನೀರಿನಂತಹ ವಾಂತಿ-ಭೇದಿ ಈ ರೋಗದ ಪ್ರಮುಖ ಲಕ್ಷಣವಾಗಿರುತ್ತದೆ.

**ರೋಗಲಕ್ಷಣಗಳು :** ರೋಗದ ಲಕ್ಷಣಗಳು ಕಾಣಿಸಿಕೊಳ್ಳಬೇಕಾದರೆ ಕೆಲವು ಗಂಟೆಗಳಿಂದ ಐದು ದಿನಗಳಾದರೂ ಬೇಕಾಗಬಹುದು. ಸಾಮಾನ್ಯವಾಗಿ 1ರಿಂದ 2 ದಿನಗಳಲ್ಲಿ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಗಂಟೆಗೆ 10ರಿಂದ 12 ಸಲ ಭೇದಿ ಉಂಟಾಗುವುದು. ಭೇದಿಯನ್ನು ನಿಯಂತ್ರಿಸದಿದ್ದರೆ ರೋಗಿಯು ಮರಣ ಹೊಂದಬಹುದು. ಕೆಲವು ರೋಗಿಗಳಲ್ಲಿ ವಾಂತಿಯು ಕಾಣಿಸಿಕೊಳ್ಳುತ್ತದೆ.

ನಿಲ್ಲದ ವಾಂತಿ-ಭೇದಿಗಳಿಂದಾಗಿ, ರೋಗಿಯಲ್ಲಿ ಅತಿಯಾದ ಬಾಯಾರಿಕೆ ಉಂಟಾಗುವುದಲ್ಲದೆ, ನಾಲಗೆಯು ಒಣಗಿ, ಮೂತ್ರದ ಪ್ರಮಾಣವು ಕಡಿಮೆಯಾಗಿ ರೋಗಿಯು ಪೂರ್ಣವಾಗಿ ನಿತ್ರಾಣಗೊಳ್ಳುತ್ತಾನೆ.

ಭೇದಿಯಿಂದಾಗಿ ದೇಹದಲ್ಲಿನ ಲವಣಗಳ ಪ್ರಮಾಣವು ಕಡಿಮೆಯಾಗಿ ಕಾಲುಗಳಲ್ಲಿ ಸೆಳೆತ ಉಂಟಾಗುವುದು. ತೀವ್ರವಾದ ಸ್ಥಿತಿಯಲ್ಲಿ ರೋಗಿ, ನಿರ್ಜಲತೆಯಿಂದಾಗಿ ಕೋಮಾ ಸ್ಥಿತಿಯನ್ನು ತಲುಪಬಹುದು. ಸಕಾಲದಲ್ಲಿ ಚಿಕಿತ್ಸೆ ಸಿಗದಿದ್ದರೆ, ವಾಂತಿ ಭೇದಿಯಿಂದಾಗುವ ದ್ರವ ನಷ್ಟದಿಂದ ದೇಹದಲ್ಲಿನ ರಕ್ತದ ಪ್ರಮಾಣವು ಕಡಿಮೆಯಾಗಿ ರಕ್ತದೊತ್ತಡ ಬಹಳ ಕೆಳಗಿಳಿದು ರೋಗಿಯು ಮೂರ್ಛೆ ಹೋಗಬಲ್ಲನು.

– ಕಾಲರಾ ರೋಗಿಯ ವಾಂತಿ-ಭೇದಿಯನ್ನು ಮತ್ತು ರೋಗಿ ಉಪಯೋಗಿಸಿದ ವಸ್ತುಗಳನ್ನು ಸೋಂಕು ನಿವಾರಣೆ ಮಾಡಬೇಕು.

– ರೋಗಲಕ್ಷಣಗಳು ಕಂಡ ಕೂಡಲೇ ರೋಗಿಯನ್ನು ತಡಮಾಡದೆ ಆಸ್ಪತ್ರೆಗೆ ಸಾಗಿಸಿ ಸೂಕ್ತ ಚಿಕಿತ್ಸೆಯನ್ನು ಕೊಡಿಸಬೇಕು.


– ಪರಿಸರ ಮಾಲಿನ್ಯಗೊಳ್ಳದಂತೆ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಬೇಕು.

– ರಸ್ತೆಬದಿಯಲ್ಲಿ ಕತ್ತರಿಸಿ ಇಟ್ಟಿರುವ ಹಣ್ಣು–ಹಂಪಲುಗಳನ್ನು ತಿಂಡಿ ಪದಾರ್ಥಗಳನ್ನು ತಿನ್ನಬಾರದು.

2. ಡಿಫ್ತೀರಿಯಾ (ಗಂಟಲು ಮಾರಿ)

ಡಿಫ್ತೀರಿಯಾ ಅಥವಾ ಗಂಟಲು ಮಾರಿ, ಒಂದು ತೀವ್ರ ಸ್ವರೂಪದ ಸಾಂಕ್ರಾಮಿಕ ರೋಗ. 'ಕೊರಿನಿ ಬ್ಯಾಕ್ಟೀರಿಯಮ್ ಡಿಫ್ತಿರಿಯೆ' ಎಂಬ ಬ್ಯಾಸಿಲೈ ಈ ರೋಗಕ್ಕೆ ಕಾರಣ. ಇದು ಪೂರ್ವ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳಲ್ಲಿ ಹೆಚ್ಚಾಗಿ ಉಂಟಾಗುತ್ತದೆ. ವಿರಳವಾಗಿ ವಯಸ್ಕರಲ್ಲೂ ಉಂಟಾಗಬಹುದು.

ಗಂಟಲ ಹುಣ್ಣು





**ಹರಡುವ ವಿಧಾನ:**

ಸಾಮಾನ್ಯವಾಗಿ ಡಿಫ್ತೀರಿಯಾ ರೋಗ ತುಂತುರು ಹನಿಗಳ ಮೂಲಕ ಹರಡುತ್ತದೆ. ರೋಗಿ ಇಲ್ಲವೆ ರೋಗ ವಾಹಕಗಳು (ಕ್ಯಾರಿಯರ್ಸ್) ಸೀನಿದಾಗ, ಕೆಮ್ಮಿದಾಗ, ಮಾತನಾಡುವಾಗ, ತುಂತುರು ಮೂಲಕ ದೇಹದಿಂದ ಹೊರಬಿದ್ದು ಹೊರಗಿನ ಪರಿಸರಕ್ಕೆ ಬರುತ್ತವೆ.

ಪರಿಸರದಲ್ಲಿ ಹರಡಿರುವ ರೋಗಾಣುಗಳು ಉಸಿರಾಡುವಾಗ ದೇಹದೊಳಗಡೆ ಪ್ರವೇಶಿಸುತ್ತವೆ. ಗಾಯಗಳ ಮುಖಾಂತರವೂ ಸೋಂಕು ಹರಡಬಹುದು. ರೋಗಿ ಉಪಯೋಗಿಸಿದ ವಸ್ತುಗಳಿಂದಲೂ ರೋಗಾಣುಗಳು ಒಬ್ಬರಿಂದ ಒಬ್ಬರಿಗೆ ಹರಡಬಹುದು. ರೋಗ ಕಾಣಿಸಿಕೊಂಡ ನಂತರ, ಡಿಫ್ತೀರಿಯಾ ರೋಗಿ 14ರಿಂದ 28 ದಿನಗಳವರೆಗೆ ಸೋಂಕುಕಾರಕನಾಗಿ ಉಳಿದಿರುತ್ತಾನೆ.

**ರೋಗ ಪರಿಪಕ್ವವಾಗುವ ಅವಧಿ:**

2ರಿಂದ 5 ದಿನಗಳು.

ಲಕ್ಷಣಗಳು:

1) ಗಂಟಲ ನೋವು

2) ಗಂಟಲ ಕಿರಿಕಿರಿ

3) ನುಂಗಲು ಕಷ್ಟವಾಗುವುದು

4) ಮೈ, ಕೈ ನೋವು

5) ಜ್ವರ

6) ತಲೆನೋವು

7) ಆಲಸ್ಯತನ

(ಜ್ವರ: $101^0$F ನಿಂದ $103^0$F ವರೆಗೆ ಇರುತ್ತದೆ)

8) 24ರಿಂದ 48 ಗಂಟೆಯೊಳಗಡೆ ಬೂದು ಬಣ್ಣದ ಪೊರೆ ಟಾನ್ಸಿಲ್ ಗ್ರಂಥಿಗಳನ್ನು ಆವರಿಸುವುದು.

9) ಕತ್ತಿನ ಹಾಲ್ರಸ ಗ್ರಂಥಿಗಳು ಊದಿಕೊಂಡು ಕತ್ತು ದಪ್ಪವಾಗುತ್ತದೆ.

ಚಿಕಿತ್ಸೆಯಲ್ಲಿ ಡಿಫ್ತೀರಿಯಾ ವಿರುದ್ಧ ಸೀರಮ್‌ನ್ನು, ಆ್ಯಂಟಿಬಯೋಟಿಕ್ಸನ್ನು ಕೊಡಲಾಗುವುದು.

ಡಿಫ್ತೀರಿಯಾವನ್ನು ತಡೆಗಟ್ಟುವುದು ಮತ್ತು ನಿಯಂತ್ರಿಸುವುದು:

1) ಡಿಫ್ತೀರಿಯಾವನ್ನು ಬಹಳ ಪರಿಣಾಮಕಾರಿಯಾಗಿ ನಿಯಂತ್ರಿಸುವ ವಿಧಾನವೆಂದರೆ ರೋಗನಿರೋಧಕ ಚುಚ್ಚುಮದ್ದು ಡಿಫ್ತೀರಿಯಾ ಟಾಕ್ಸೈಡ್‌ನ್ನು ಕೊಡಿಸುವುದು. ಎಲ್ಲ ಮಕ್ಕಳಿಗೂ ಡಿ.ಪಿ.ಟಿ.ಯನ್ನು ಕೊಡಿಸಿದರೆ ಸಮುದಾಯದಲ್ಲಿ ಇದರ ಪ್ರಮಾಣ ಅತಿ ಕಡಿಮೆ ಇರುತ್ತದೆ. ವ್ಯಾಕ್ಸಿನ್, ಮೂರು ರೋಗಗಳು ಬಾರದಂತೆ ಸಂರಕ್ಷಿಸುತ್ತದೆ. ಅವುಗಳೆಂದರೆ– ಡಿಫ್ತೀರಿಯಾ, ವೂಪಿಂಗ್‌ಕಾಫ್ (ನಾಯಿಕೆಮ್ಮು) ಮತ್ತು ಟೆಟನಸ್. ಎಲ್ಲ ಮಕ್ಕಳಿಗೂ ರೋಗನಿರೋಧಕ ಚುಚ್ಚುಮದ್ದನ್ನು ಕೊಡಿಸಬೇಕು. ಅಂದರೆ, ಒಂದು ವರ್ಷದೊಳಪಟ್ಟ ಎಲ್ಲ ಮಕ್ಕಳಿಗೂ ಮೂರು ಡೋಸ್‌ನ್ನು, ಬೂಸ್ಟರ್ ಡೋಸ್ ಡಿ.ಪಿ.ಟಿ.ಯನ್ನು 18ರಿಂದ 24 ತಿಂಗಳಲ್ಲಿ ಮತ್ತು ಡಿ.ಟಿ.ಯನ್ನು 5ರಿಂದ 6 ವರ್ಷಗಳಲ್ಲಿ ಕೊಡಿಸಬೇಕು.

**ಸಮುದಾಯಕ್ಕೆ ಸಲಹೆ:**

* ಡಿಫ್ತೀರಿಯಾ ಬಹಳ ತೀವ್ರಸ್ವರೂಪದ ಮತ್ತು ಮಕ್ಕಳಲ್ಲಿ ಪ್ರಾಣಾಂತಿಕ ಕಾಯಿಲೆಯಾಗಿರುತ್ತದೆ.
* ಇದನ್ನು ಪ್ರತಿ ಮಗುವಿಗೂ ಡಿ.ಪಿ.ಟಿ. ಮತ್ತು ಡಿ.ಟಿ. ವ್ಯಾಕ್ಸಿನ್‌ನನ್ನು ಕೊಡಿಸುವುದರಿಂದ ತಡೆಗಟ್ಟಬಹುದು.
* ವ್ಯಕ್ತಿಗೆ ಡಿಫ್ತೀರಿಯಾ ಇದ್ದರೆ ಇತರರನ್ನು ದೂರದಲ್ಲಿರಿಸಬೇಕು. ವಿಶೇಷವಾಗಿ ಮಕ್ಕಳು ಡಿಫ್ತೀರಿಯಾ ರೋಗಿಯನ್ನು ಸಂಪರ್ಕಿಸಬಾರದು.

## 3. ಕುಷ್ಠರೋಗ (Leprosy)

ಕುಷ್ಠರೋಗ, ಬೇರೂರಿದ ಸೋಂಕು ರೋಗವಾಗಿರುತ್ತದೆ. ಇದು ಮೈಕೋಬ್ಯಾಕ್ಟಿರಿಯಂ ಲೆಪ್ರೆ ಎಂಬ ಸೂಕ್ಷ್ಮಾಣು ಕ್ರಿಮಿಯಿಂದ ಬರುತ್ತದೆ. ಮುಖ್ಯವಾಗಿ ಇದು ತ್ವಚೆ (ಚರ್ಮ) ಮತ್ತು ನರಗಳ ಮೇಲೆ ಪ್ರಭಾವವನ್ನುಂಟು ಮಾಡುತ್ತದೆ. ಕೆಲವೊಮ್ಮೆ ಶರೀರದ ಇತರೆ ಅಂಗಗಳಲ್ಲೂ ಇದು ಉಂಟಾಗಬಹುದು.

ರೋಗದ ಮೊದಲ ಲಕ್ಷಣಗಳು ಕಾಣಿಸಿಕೊಳ್ಳಲು, ಸರಾಸರಿ ಮೂರು ವರ್ಷಗಳಾಗಬಹುದು.

ಕುಷ್ಠರೋಗವು ಲಿಂಗ, ವಯಸ್ಸಿನ ಭೇದಭಾವ- ಅಂತರವಿಲ್ಲದೆ, ಯಾರಿಗಾದರೂ ಆಗಬಹುದು.

**ಹರಡುವ ವಿಧಾನ :**



ಕುಷ್ಠರೋಗಿಯೇ, ರೋಗದ ಮೂಲವಾಗಿರುತ್ತಾನೆ. ರೋಗವು- ಮುಖ್ಯವಾಗಿ, ನಿರಂತರವಾದ, ದೀರ್ಘಕಾಲದ ಸಂಪರ್ಕವನ್ನು ಸೋಂಕಿರುವ

ವ್ಯಕ್ತಿಯೊಡನೆ ಹೊಂದಿದ್ದಾಗ ಹರಡುತ್ತದೆ. ತುಂತುರು ಸೋಂಕು ಮತ್ತು ರೋಗಿಯ ಬಟ್ಟೆಬರೆಗಳಿಂದ ಹರಡುವುದಿಲ್ಲ.

ರೋಗ ಪರಿಪಕ್ವ ಆಗುವ ಅವಧಿ (ಇನ್‌ಕ್ಯುಬೇಷನ್ ಪೀರಿಯಡ್):

ಕುಷ್ಠರೋಗದ ಪರಿಪಕ್ವ ಆಗುವ ಅವಧಿ ಸಾಮಾನ್ಯವಾಗಿ 2ರಿಂದ 5 ವರ್ಷಗಳು.

**ಕುಷ್ಠರೋಗದ ಲಕ್ಷಣಗಳು:**

ಕುಷ್ಠರೋಗಿ ಎಂದರೆ, ತ್ವಚೆ (ಚರ್ಮ)ಯ ಮೇಲೆ ಖಚಿತವಾಗಿ ಸ್ಪರ್ಶಜ್ಞಾನವಿರದ ಮಚ್ಚೆ ಅಥವಾ ಮಚ್ಚೆಗಳು ಹಾಗೂ ಇಂತಹವರು ಪೂರ್ಣ ಪ್ರಮಾಣದ ಚಿಕಿತ್ಸೆಯನ್ನು ಪಡೆಯದೇ ಇರುವುದು.

**ಕುಷ್ಠ ರೋಗದ ಮಚ್ಚೆಗಳು :**

– ತಿಳಿ ಬಿಳಿ ಅಥವಾ ಕೆಂಪು ಇಲ್ಲವೆ ತಾಮ್ರ ಬಣ್ಣದ್ದಾಗಿರಬಹುದು, ಚಪ್ಪಟೆ ಅಥವಾ ಉಬ್ಬಿದಂತೆ ಕಾಣಬಹುದು.

– ತಿಂಡಿ (ನವೆ), ತುರಿಕೆ ಇರುವುದಿಲ್ಲ.

– ಸಾಮಾನ್ಯವಾಗಿ ಯಾವ ನೋವು ಆಗದು.

– ಶಾಖ, ಸ್ಪರ್ಶ ಅಥವಾ ನೋವಿನ ಸಂವೇದನೆ ಅರಿವು ಆಗದು.

– ಮಚ್ಚೆ, ಶರೀರದ ಮೇಲೆ ಎಲ್ಲಾದರೂ ಕಾಣಬಹುದು.

**ಕುಷ್ಠರೋಗದ ಲಕ್ಷಣಗಳಲ್ಲಿ :**

ಕೆಂಪಾದ ಅಥವಾ ತ್ವಚೆ (ಚರ್ಮ)ಯ ಬಣ್ಣದ ಗಂಟುಗಳು ಇಲ್ಲವೆ ಸ್ಪರ್ಶ ಜ್ಞಾನವಿರುವ ನಯವಾದ, ಹೊಳೆಯುವ ಮತ್ತು ಉಬ್ಬಿದ ತ್ವಚೆ (ಚರ್ಮ)ಯೂ ಸೇರಿದೆ.


**ಯಾವುದು ಕುಷ್ಠ ರೋಗದ ಲಕ್ಷಣಗಳಲ್ಲ?**

**ತ್ವಚೆ (ಚರ್ಮ)ಯ ಮಚ್ಚೆಗಳು...**

* ಹುಟ್ಟಿನಿಂದಲೇ ಇದ್ದಲ್ಲಿ (ಅಂದರೆ ಜನ್ಮ ಚಿಹ್ನೆ)

* ತಿಂಡಿ (ನವೆ), ತುರಿಕೆ ಆಗುತ್ತಿದ್ದಲ್ಲಿ

* ಪೂರ್ತಿ ಬಿಳಿ, ಕಪ್ಪು ಅಥವಾ ದಟ್ಟ ಕೆಂಪು ಬಣ್ಣದಾಗಿದ್ದಲ್ಲಿ
* ತ್ವಚೆ (ಚರ್ಮ), ಚೆಕ್ಕೆ–ಪೊರೆಯಾಗಿದ್ದಲ್ಲಿ
* ಹಠಾತ್ತನೆ ಕಾಣಿಸಿಕೊಂಡು ಮರೆಯಾದಲ್ಲಿ ಅಥವಾ ತೀವ್ರವಾಗಿ ಹರಡಿದಲ್ಲಿ




6-ಕ್ಕಿಂತ ಹೆಚ್ಚು ಮಚ್ಚೆ ಕಲೆಗಳಿದ್ದು, ಒಂದಕ್ಕಿಂತ ಹೆಚ್ಚು ನರಗಳಿಗೆ ಸೋಂಕು ತಗಲಿದಲ್ಲಿ ಅದು

**ಕುಷ್ಠರೋಗವನ್ನು ಹೇಗೆ ನಿರ್ಮೂಲನಾಗೊಳಿಸಬಹುದು?**

* ಕುಷ್ಠರೋಗವೆಂದು, ವೈದ್ಯರು ಪರೀಕ್ಷಿಸಿ, ಖಚಿತಪಡಿಸಿದ ನಂತರ ಬಹು ಔಷಧಿ ಚಿಕಿತ್ಸೆ (MDT: Multi Drug Treatment)ಯನ್ನು, ವೈದ್ಯರು ತಿಳಿಸುವ ತನಕ ಕ್ರಮವಾಗಿ ತೆಗೆದುಕೊಳ್ಳಬೇಕು.
* ಚಿಕಿತ್ಸಾ ಕ್ರಮವನ್ನು ಬಿಡದೆ ಪೂರ್ಣಗೊಳಿಸಲು ರೋಗಿಗಳಿಗೆ ಉತ್ತೇಜನವನ್ನು ಕೊಡಬೇಕು.
* ಬಹು ಔಷಧಿಗಳಿಂದ ಕುಷ್ಠರೋಗ ಹರಡುವುದನ್ನು ತಡೆಗಟ್ಟಬಹುದು.



* ಕುಷ್ಠರೋಗವೆಂದು ಖಚಿತಗೊಂಡ ನಂತರ, ಪ್ರಾರಂಭ ಹಂತದಲ್ಲೇ ಚಿಕಿತ್ಸೆಯನ್ನು ಪಡೆದರೆ ಅಂಗವಿಕಲತೆ ತಲೆದೋರುವುದನ್ನು ತಪ್ಪಿಸಬಹುದು.
* ಅಂಗವಿಕಲತೆ, ಅಸಾಮರ್ಥ್ಯ ಹೊಂದಿದ ರೋಗಿಗಳೂ ಸಹ ಚಿಕಿತ್ಸೆಯ ಕ್ರಮವನ್ನು ಅನುಸರಿಸಿ ಪೂರ್ಣಗೊಳಿಸಿದಲ್ಲಿ ಗುಣವನ್ನು ಹೊಂದುತ್ತಾರೆ.
* ಕುಷ್ಠರೋಗಕ್ಕೆ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಉಚಿತ ಚಿಕಿತ್ಸಾ ಸೌಲಭ್ಯಗಳು ಲಭ್ಯವಿದೆ.

**ಸಾರ್ವಜನಿಕರು ಈ ಕೆಳಕಂಡ ಅಂಶಗಳನ್ನು ತಿಳಿದಿರಬೇಕು:**

* ಕುಷ್ಠರೋಗ ಇತರೆ ರೋಗದಂತೆಯೇ ಒಂದು ರೋಗವಾಗಿರುತ್ತದೆ.
* ಕುಷ್ಠರೋಗ ದೇವರ ಶಾಪವಲ್ಲ. ಪಾಪಕರ್ಮ ಫಲವಲ್ಲ.
* ಕುಷ್ಠರೋಗ ವಂಶಪಾರಂಪರ್ಯವಾಗಿ ಬರುವುದಿಲ್ಲ.
* ಕುಷ್ಠರೋಗ ಹುಟ್ಟುತ್ತಲೇ ಬರುವುದಿಲ್ಲ.
* ಯಾವುದೇ ಆಹಾರ ಪದಾರ್ಥವನ್ನು ಸೇವಿಸುವುದರಿಂದ ಕುಷ್ಠರೋಗ ಬರುವುದಿಲ್ಲ.
* ಕುಷ್ಠರೋಗ ಗುಣವಾಗಬಲ್ಲದು.
* ಶೇಕಡ 25ರಷ್ಟು ಪ್ರಕರಣಗಳಲ್ಲಿ ಮಾತ್ರ ಕುಷ್ಠರೋಗ, ಸೋಂಕು ರೋಗವಾಗಿರುತ್ತದೆ.
* ಕುಷ್ಠರೋಗಿಗಳಿಗೆ ಅನುಕಂಪ ಮತ್ತು ದಯೆಯ ಅಗತ್ಯವಿರುತ್ತದೆ. ಗೌರವವಾಗಿ ಬದುಕಲು ಅವಕಾಶ ಮಾಡಿಕೊಡಬೇಕು.

### 3. ನಾಯಿಕೆಮ್ಮು (ವೂಪಿಂಗ್‌ಕಾಫ್) (ಪಟ್ಯುಸಿಸ್)

ನಾಯಿಕೆಮ್ಮು, ತೀವ್ರವಾದ ಬ್ಯಾಕ್ಟೀರಿಯಾಗಳಿಂದ ಬರುವ ರೋಗ. ಇದರಲ್ಲಿ ಗಂಟಲು ಮತ್ತು ಬ್ರಾಂಕೈ ಒಳಗೊಳ್ಳುತ್ತದೆ. ಇದು ಬಹಳ ಸೋಂಕಿನ ರೋಗ ಮತ್ತು ತುಂತುರು ಸೋಂಕಿನ ಮೂಲಕ (Droplet Infection) ಹರಡುತ್ತದೆ ಅಥವಾ ಸೋಂಕಿನ ವ್ಯಕ್ತಿ ಸ್ರವಿಸಿದ ವಸ್ತುಗಳು ಕಲುಷಿತಗೊಂಡು ನಾಯಿಕೆಮ್ಮು ಹರಡುತ್ತದೆ.

ನಾಯಿಕೆಮ್ಮನ್ನು ವೂಪಿಂಗ್‌ಕಾಫ್ ಅಥವಾ ಪಟ್ಯುಸಿಸ್ ಎಂತಲೂ

ಕರೆಯುತ್ತಾರೆ. ಇದು ಬಾಲ್ಯದಲ್ಲಿ ಬರುವ ರೋಗವಾಗಿರುತ್ತದೆ ಮತ್ತು ಸಾಮಾನ್ಯವಾಗಿ ಸಾಂಕ್ರಾಮಿಕವಾಗಿ ಹರಡುತ್ತದೆ.



ಇದು ಶೀತ ಮತ್ತು ಜ್ವರದೊಂದಿಗೆ ಆರಂಭವಾಗುತ್ತದೆ. ಅಲ್ಲದೆ, ಮೂಗಿನಲ್ಲಿ ಸುರಿತ ಮತ್ತು ಕೆಮ್ಮು ಸಹ ಇರುತ್ತದೆ. ಮೊದಲು ಮಗುವಿನಲ್ಲಿ ಕೆರಳಿಕೆಯ ಕೆಮ್ಮಿರುತ್ತದೆ. ಆರಂಭದಲ್ಲಿ ರಾತ್ರಿ ಹೊತ್ತು ಮಾತ್ರ ಕಾಡುವ ಕೆಮ್ಮು ಬರಬರುತ್ತಾ ಹಗಲುರಾತ್ರಿಗಳೆನ್ನದೆ, ಬಿಟ್ಟೂ ಬಿಡದೇ ಬರುತ್ತದೆ. ಕೆಮ್ಮು ದಿನೇ ದಿನೇ ಜಾಸ್ತಿಯಾಗುತ್ತದೆ. ಕೆಮ್ಮುವಾಗಲೆಲ್ಲಾ ಮಗುವಿನ ಮುಖ ಕೆಂಪಗಾಗಿ, ಕಣ್ಣುಗುಡ್ಡೆಗಳು ಉಬ್ಬಿದಂತೆ ಕಾಣುತ್ತವೆ. ಉಸಿರಿಗಾಗಿ, ಮಗು, ನಾಯಿಯಂತೆ ನಾಲಿಗೆಯನ್ನು ಹೊರಚಾಚಿ ಒದ್ದಾಡುತ್ತದೆ. ಆದುದರಿಂದಲೇ, ಈ ರೋಗಕ್ಕೆ 'ನಾಯಿಕೆಮ್ಮು' ಎಂದು ಕರೆಯುತ್ತಾರೆ. ಕೆಮ್ಮಿದಾಗಲೆಲ್ಲಾ 'ಕೂಗುಸಿರು' (ವೂಪು) ಬರುತ್ತದೆ. ಕೆಮ್ಮಿ ಸುಸ್ತಾದ ಮಗು ಬೆವರಿರುತ್ತದೆ. ಅಲ್ಲದೆ, ತಿಂದ ಆಹಾರವನ್ನೆಲ್ಲಾ ವಾಂತಿ ಮಾಡುತ್ತದೆ.

ವೂಪಿಂಗ್‌ಕಾಫ್, ಶಿಶುಗಳಲ್ಲಿ ಬಹಳ ಅಪಾಯಕಾರಿಯಾದದ್ದು. ವಿಶೇಷವಾಗಿ 6 ತಿಂಗಳ ಮಕ್ಕಳಲ್ಲಿ ನಾಯಿಕೆಮ್ಮು ಹೆಚ್ಚು ತೊಡಕನ್ನುಂಟುಮಾಡುತ್ತದೆ. ಸಾಮಾನ್ಯವಾಗಿ ಶಿಶುಗಳಲ್ಲಿ Whoop (ವೂಪ್) ಎಂಬ ಶಬ್ದವಿರುವುದಿಲ್ಲ.

**ನಾಯಿಕೆಮ್ಮಿನಿಂದ ಉಂಟಾಗುವ ತೊಡಕುಗಳು:**

ನಾಯಿಕೆಮ್ಮನ್ನು ಹೊಂದಿರುವ ಮಕ್ಕಳಲ್ಲಿ, ಬ್ರಾಂಕೋ ನ್ಯುಮೋನಿಯಾ, ಕ್ಷಯರೋಗ, ಅಪೌಷ್ಠಿಕತೆ, ಮೂಗಿನಲ್ಲಿ ರಕ್ತಸ್ರಾವ ಅಥವಾ ಕಂಜೆಕ್ಟಿವ್, ನಾಲಿಗೆಯಲ್ಲಿ ಹುಣ್ಣು ಅಥವಾ ಹರ್ನಿಯಾ ಅಭಿವೃದ್ಧಿಗೊಳ್ಳುತ್ತದೆ.

ಈ ರೋಗದ ಪರಿಪಕ್ವ ಆಗುವ ಅವಧಿ (ಇಂಕ್ಯುಬೇಷನ್ ಪೀರಿಯಡ್): 7ರಿಂದ 14 ದಿನಗಳು.

**ತಡೆಗಟ್ಟುವುದು:**

ಟ್ರಿಪಲ್ ಆಂಟಿಜನ್ (ಡಿ.ಪಿ.ಟಿ) ಇಂಜೆಕ್ಷನ್‌ಗಳನ್ನು ಶಿಶುಜನನವಾದ ಮೇಲೆ $1^1/_2$, $2^1/_2$, $3^1/_2$ ತಿಂಗಳಲ್ಲಿ ಕೊಡಿಸಬೇಕು.

## 4. ಪ್ಲೇಗ್ ರೋಗ

ಪ್ಲೇಗ್, ತೀವ್ರ ಸೋಂಕಿನ ರೋಗವಾಗಿದೆ. ಇದು ಯರ್ಸಿನಿಯಾ ಪೆಸ್ಟಿಸ್ ಎಂಬ ಏಕಾಣು ಜೀವಿ ರೋಗಾಣುವಿನಿಂದ ಬರುತ್ತದೆ (ಪ್ಲೇಗ್ ಬ್ಯಾಸಿಲಸ್).


ಪ್ಲೇಗ್ ರೋಗವು ಮುಖ್ಯವಾಗಿ ಇಲಿಗಳಿಗೆ ಬರುವ ರೋಗವಾಗಿದ್ದು, ಮನುಷ್ಯನಿಗೆ ಇಲಿ ಚಿಗಟಗಳಿಂದ ಹರಡುವ ಸಾಧ್ಯತೆಯಿದೆ. 'ಪ್ಲೇಗ್' ಬಹಳ ಶೀಘ್ರವಾಗಿ ಹರಡುವಂತಹ ಸಾಂಕ್ರಾಮಿಕ ರೋಗವಾಗಿರುವುದರಿಂದ ಮುಂಜಾಗ್ರತೆ ತೆಗೆದುಕೊಳ್ಳಬೇಕಾದ್ದು ಅತ್ಯಂತ ಅವಶ್ಯಕ.

**ರೋಗ ಹರಡುವ ವಿಧಾನ:**

ಇಲಿಯ ಚಿಗಟಗಳು (ಫ್ಲೀ) ಪ್ಲೇಗ್‌ನಿಂದ ನರಳುವ ಇಲಿಗಳ ರಕ್ತ ಹೀರಿದಾಗ, ಸೋಂಕುಗೊಂಡ ರೋಗಾಣುಗಳು ಚಿಗಟಗಳ ದೇಹವನ್ನು ಸೇರುತ್ತವೆ. ಇವುಗಳು ಇತರೆ ಇಲಿಗಳಿಗೆ ಕಚ್ಚಿದಾಗ ಈ ರೋಗವು ಇಲಿಗಳಿಗೆ ಹರಡುತ್ತದೆ. ಪ್ಲೇಗ್ ರೋಗಾಣು ಸೋಂಕು ಇರುವ ಇಲಿಯ ಚಿಗಟವು ಅನಿರೀಕ್ಷಿತವಾಗಿ ಮನುಷ್ಯನನ್ನು ಕಚ್ಚಿದಾಗ ಈ ರೋಗ ಉಂಟಾಗುತ್ತದೆ. ಅಲ್ಲದೆ, ಶ್ವಾಸಕೋಶದ ಪ್ಲೇಗ್‌ನಿಂದ ನರಳುವವರ ಕಫ, ಎಂಜಲಿನಲ್ಲಿ ಈ ರೋಗಾಣುಗಳು ಇರುವುದರಿಂದ, ಆ ವ್ಯಕ್ತಿ ಕೆಮ್ಮಿದಾಗ, ಸೀನಿದಾಗ, ಉಸಿರಾಟದ ಮೂಲಕವು ಪ್ಲೇಗ್ ರೋಗ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ.

ರೋಗ ಪರಿಪಕ್ವ ಆಗುವ ಅವಧಿ (ಇಂಕ್ಯುಬೇಷನ್ ಪೀರಿಯಡ್):

# ಪ್ಲೇಗ್ ರೋಗದ ಬಗ್ಗೆ ಮಾಹಿತಿ




ಪ್ಲೇಗ್ ಹರಡುವ ವಿಧಾನಗಳು

ಕಾರ್ಟ್‌ಮನ್ ಮತ್ತು ಇತರರ
ಲೇಖನ 1966

ಪ್ಲೇಗ್‌ನ ಇಂಕ್ಯುಬೇಷನ್ ಪೀರಿಯಡ್ ಸಾಮಾನ್ಯವಾಗಿ 4ರಿಂದ 6 ದಿನಗಳು.

**ಪ್ಲೇಗ್ ರೋಗದಲ್ಲಿ ಮುಖ್ಯವಾಗಿ ಎಷ್ಟು ವಿಧಗಳಿವೆ?**

**ಪ್ಲೇಗ್ ರೋಗದಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ. ಅವುಗಳೆಂದರೆ:**

1) ತೊಡೆವಾಳ ಅಥವಾ ಗಡ್ಡೆ ಪ್ಲೇಗ್ (ಬ್ಯುಬಾನಿಕ್ ಪ್ಲೇಗ್)

2) ಶ್ವಾಸಕೋಶ ಉರಿಯೂತ (ಪುಪ್ಪುಸ)ದ ಪ್ಲೇಗ್ (ನ್ಯೂಮೋನಿಕ್ ಪ್ಲೇಗ್)

3) ನೆತ್ತರ ನಂಜು ಪ್ಲೇಗ್ (ಸೆಪ್ಟಿಸೀಮಿಯಾ ಪ್ಲೇಗ್)

**ತೊಡೆವಾಳ ಅಥವಾ ಗಡ್ಡೆ ಪ್ಲೇಗ್ (ಬ್ಯುಬಾನಿಕ್ ಪ್ಲೇಗ್):**

**ಇದರ ರೋಗಲಕ್ಷಣಗಳು:**

(ಅ) ಇದ್ದಕ್ಕಿದ್ದಂತೆ ರೋಗಿಗೆ ಅಧಿಕ ಜ್ವರ, ಚಳಿ, ತಲೆನೋವು, ಬೆನ್ನುನೋವು, ಕಣ್ಣುಗಳು ಕೆಂಪಾಗುವಿಕೆ ಹಾಗೂ ನಿಶ್ಶಕ್ತಿ.

(ಆ) ಎರಡು ಅಥವಾ ಮೂರು ದಿನಗಳಲ್ಲಿ ರೋಗಿಗೆ ದುಗ್ಧ ರಸ ಗ್ರಂಥಿಗಳು ಊದಿಕೊಂಡು ಗಡ್ಡೆಗಳಾಗುತ್ತವೆ. ಇದು ದೇಹದ ಯಾವ ಭಾಗದಲ್ಲಿದ್ದರೂ ಕಾಣಿಸಬಹುದು. ಸಾಮಾನ್ಯವಾಗಿ ತೊಡೆಸಂದಿ, ಕೆಲವೊಮ್ಮೆ ಕಂಕುಳಲ್ಲಿ, ಕುತ್ತಿಗೆಯ ದುಗ್ಧರಸ ಗ್ರಂಥಿಗಳಲ್ಲಿ ಊತ ಕಾಣಿಸಿಕೊಂಡು, ಈ ಗಡ್ಡೆಗಳಲ್ಲಿ ವಿಪರೀತ ನೋವು ಉಂಟಾಗುತ್ತದೆ.

(ಇ) ತೊದಲು ಮಾತು, ತಲೆಸುತ್ತು ಹಾಗೂ ಆಲಸ್ಯದಿಂದಾಗಿ ರೋಗಿ ಮಂಕಾಗುತ್ತಾನೆ.

(ಈ) ಸಾಮಾನ್ಯವಾಗಿ ಹತ್ತು ದಿನಗಳ ನಂತರ ಜ್ವರ ಕಡಿಮೆಯಾಗುತ್ತದೆ ಮತ್ತು ಪ್ಲೇಗ್ ಗಡ್ಡೆ ಒಡೆಯುತ್ತದೆ.

ಮೇಲ್ಕಂಡ ರೋಗಲಕ್ಷಣಗಳು ಕಂಡು ಬಂದ 6ರಿಂದ 12 ಗಂಟೆಗಳ ಅವಧಿಯಲ್ಲಿ ರೋಗಿಗೆ ಸೂಕ್ತ ಚಿಕಿತ್ಸೆಯನ್ನು ಕೊಡಿಸದಿದ್ದರೆ, ಅದು ಶ್ವಾಸಕೋಶ ಉರಿಯೂತದ ಪ್ಲೇಗ್ (ನ್ಯೂಮೋನಿಕ್ ಪ್ಲೇಗ್) ಆಗಿ, ರೋಗಿಯ ಸ್ಥಿತಿ ಉಲ್ಬಣಗೊಳ್ಳುತ್ತದೆ. ಅಲ್ಲದೆ, ಒಬ್ಬರಿಂದ ಒಬ್ಬರಿಗೆ ರೋಗ ಹರಡಬಹುದು ಮತ್ತು ರೋಗಿ ಮರಣವನ್ನು ಹೊಂದಬಹುದು.

**ಶ್ವಾಸಕೋಶ (ಪುಪ್ಪುಸ) ಉರಿಯೂತದ ಪ್ಲೇಗ್ (ನ್ಯೂಮೋನಿಕ್ ಪ್ಲೇಗ್):**

ಶ್ವಾಸಕೋಶ ಉರಿಯೂತದ ಪ್ಲೇಗ್, ಪ್ರಾಥಮಿಕವಾಗಿ ಬರುವುದಿಲ್ಲ. ಗಡ್ಡೆ ಪ್ಲೇಗ್ ಅಥವಾ ನೆತ್ತರ ನಂಜು ಪ್ಲೇಗ್ (ಸೆಪ್ಟಿಸೀಮಿಯಾ) ನಂತರದ ದುಷ್ಪರಿಣಾಮವಾಗಿ ಕಾಣಿಸಿಕೊಳ್ಳುತ್ತದೆ. ಇದು ಬಹಳ ಅಪಾಯಕಾರಿ ಸೋಂಕು ರೋಗವಾಗಿರುತ್ತದೆ.

ರೋಗಿಯು ಕೆಮ್ಮಿದಾಗ, ಸೀನಿದಾಗ, ಕಫ, ಎಂಜಲು ಇತ್ಯಾದಿಗಳಿಂದ ಇತರರಿಗೆ ಬೇಗ ಹರಡುತ್ತದೆ.

**ಈ ರೋಗದ ಪರಿಪಕ್ವ ಅವಧಿ (ಇಂಕ್ಯುಬೇಷನ್ ಪೀರಿಯಡ್):**

2ರಿಂದ 4 ದಿನಗಳು.

**ಇದರ ರೋಗಲಕ್ಷಣಗಳು:**

(1) ರೋಗಿಯಲ್ಲಿ ಇದ್ದಕ್ಕಿದ್ದಂತೆ ಚಳಿ ಉಂಟಾಗಿ, ವಿಪರೀತ ಜ್ವರ, ಮೈ, ಕೈ ನೋವು, ತಲೆನೋವು, ಎದೆನೋವು ಕಾಣಿಸಿಕೊಳ್ಳುತ್ತದೆ.

(2) ರೋಗಿಯಲ್ಲಿ ಕೆಮ್ಮು ಕಾಣಿಸಿಕೊಳ್ಳುತ್ತದೆ, ವಿಪರೀತ ಕಫ ಬರುತ್ತದೆ ಹಾಗೂ ಆ ಕಫ ನೀರಾಗಿಯೂ ಮತ್ತು ರಕ್ತ ಮಿಶ್ರಿತವಾಗಿರುತ್ತದೆ.

(3) ತೀವ್ರ ಅಸ್ವಸ್ಥವಾಗುವುದಲ್ಲದೆ, ಉಸಿರಾಡಲು ಕಷ್ಟವಾಗುತ್ತದೆ, ದೇಹ ನೀಲಿ ಬಣ್ಣಕ್ಕೆ ತಿರುಗುತ್ತದೆ.

ಸರಿಯಾದ ಚಿಕಿತ್ಸೆ ಕೊಡಿಸದಿದ್ದರೆ, ರೋಗಿ 3ರಿಂದ 4 ದಿನಗಳಲ್ಲಿ ಮರಣ ಹೊಂದುತ್ತಾನೆ.

**ನೆತ್ತರ ನಂಜು ಪ್ಲೇಗ್ (ಸೆಪ್ಟಿಸೀಮಿಯಾ ಪ್ಲೇಗ್):**

ಇದು ತುಂಬಾ ಅಪರೂಪವಾಗಿ ಕಾಣಿಸಿಕೊಳ್ಳುತ್ತದೆ. ಇದರಲ್ಲಿ ವಿಷಮತೆ ಹೆಚ್ಚಾಗಿರುತ್ತದೆ. ಗಡ್ಡೆಗಳು ದೇಹದ ಯಾವ ಭಾಗದಲ್ಲೂ ಕಾಣಿಸಿಕೊಳ್ಳುವುದಿಲ್ಲ.

**ನೆತ್ತರ ನಂಜು ಪ್ಲೇಗ್‌ನ ರೋಗಲಕ್ಷಣಗಳು:**

1) ಮೈಚರ್ಮದಲ್ಲಿ ಸಣ್ಣ ಸಣ್ಣದಾಗಿ ರಕ್ತಸ್ರಾವ ಉಂಟಾಗುತ್ತದೆ.

2) ರೋಗಿ ತುಂಬಾ ಅಸ್ವಸ್ಥನಾಗಿರುತ್ತಾನೆ.

3) ರೋಗಿಯಲ್ಲಿ ಮೂತ್ರದ ಉತ್ಪತ್ತಿ ಕಡಿಮೆಯಾಗುತ್ತದೆ.

ರೋಗಿಗೆ ಸಕಾಲದಲ್ಲಿ ಚಿಕಿತ್ಸೆಯನ್ನು ಕೊಡಿಸದಿದ್ದರೆ ರೋಗಿ ಮರಣ ಹೊಂದುತ್ತಾನೆ.

**ಈ ರೋಗದ ಪರಿಪಕ್ವ ಅವಧಿ:**

2ರಿಂದ 6 ದಿನಗಳು.

**ರೋಗವನ್ನು ಹೇಗೆ ಕಂಡು ಹಿಡಿಯುತ್ತಾರೆ?**

ಪ್ಲೇಗ್ ರೋಗದ ಖಚಿತತೆಗೆ ಪ್ರಯೋಗ ಶಾಲೆಯಲ್ಲಿ ರೋಗಿಯ ರಕ್ತ, ಕಫ ಮತ್ತು ಪ್ಲೇಗ್ ಗಡ್ಡೆಯ ಕೀವುಗಳನ್ನು ಪರೀಕ್ಷಿಸುತ್ತಾರೆ.


**ಸಾರ್ವಜನಿಕರು ಅನುಸರಿಸಬೇಕಾದ ಮುಂಜಾಗ್ರತೆಯ ಕ್ರಮಗಳು:**

1) ಮನೆಯ ಒಳಗೆ ಮತ್ತು ಸುತ್ತಮುತ್ತಲ ಪ್ರದೇಶವನ್ನು ಚೊಕ್ಕಟವಾಗಿಡಬೇಕು.
2) ತ್ಯಾಜ್ಯ ವಸ್ತುಗಳನ್ನು ಶೇಖರಿಸಿ, ಆರೋಗ್ಯಕರ ರೀತಿಯಲ್ಲಿ ವಿಲೇವಾರಿ ಮಾಡಬೇಕು.
3) ಸತ್ತ ಇಲಿಗಳ ಮೇಲೆ ಸೀಮೆಎಣ್ಣೆ ಸುರಿದು ಸುಡಬೇಕು.
4) ಆಹಾರ ಪದಾರ್ಥಗಳನ್ನು ಇಲಿಗಳಿಗೆ ಸಿಗದಂತೆ ಸೂಕ್ತ ಸ್ಥಳದಲ್ಲಿಡಬೇಕು.
5) ಆಹಾರ ಶೇಖರಣಾ (ಗೋಡನ್) ಸ್ಥಳಗಳಲ್ಲಿ ಇಲಿ-ಹೆಗ್ಗಣಗಳು ಪ್ರವೇಶಿಸದಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.
6) ನೆಲದ ಮೇಲೆ ಮಲಗುವ ಬದಲಾಗಿ ಮಂಚ ಅಥವಾ ಕಟ್ಟೆಯ ಮೇಲೆ ಮಲಗುವುದರಿಂದ, ಇಲಿ ಚಿಗಟಗಳಿಂದ ತಪ್ಪಿಸಿಕೊಳ್ಳಬಹುದು. ಮಲಗುವಾಗ, ಹಾಸಿಗೆ-ಹೊದಿಕೆಗಳನ್ನು ಚೆನ್ನಾಗಿ ಕೊಡವಿ, ಹಾಸಿಕೊಂಡು ಮಲಗಬೇಕು.
7) ಪ್ಲೇಗ್ ಎಂದು ಕಂಡು ಬಂದ ಕೂಡಲೇ, ವೈದ್ಯಾಧಿಕಾರಿಗಳಿಗೆ ಅಥವಾ ಆರೋಗ್ಯ ಸಿಬ್ಬಂದಿಗೆ ತಿಳಿಸಬೇಕು.

ಪ್ಲೇಗ್ ರೋಗ, ಸೂಕ್ತ ಚಿಕಿತ್ಸೆಯಿಂದ ಪೂರ್ಣ ಗುಣವಾಗುವ ರೋಗವಾಗಿರುತ್ತದೆ.

6. ಟೆಟನಸ್ (ಧನುರ್ವಾಯು)

ಟೆಟನಸ್ ಅಥವಾ ಧನುರ್ವಾಯು ತೀವ್ರವಾದ ರೋಗ. ಇದು ಟೆಟನಸ್ ಬ್ಯಾಸಿಲಸ್ (ಕ್ಲಾಸ್ಟ್ರಿಡಿಯಂ ಟೆಟಾನಿ) ವಿಷದಿಂದ (ಟಾಕ್ಸಿನ್) ಉಂಟಾಗುತ್ತದೆ. ಟೆಟನಸ್ ಬ್ಯಾಸಿಲಸ್ ಪ್ರಾಣಿಗಳ ಕರುಳಿನಲ್ಲಿ ವಾಸಿಸುತ್ತದೆ. ಅದು ಮಣ್ಣಿನಲ್ಲಿರುತ್ತದೆ. ವಿಶೇಷವಾಗಿ ಮಣ್ಣಿನಲ್ಲಿರುವ ಕುದುರೆಯ ಲದ್ದಿ ಅಥವಾ ದನಗಳ ಸಗಣಿಯಲ್ಲಿ ಟೆಟನಸ್ ಬ್ಯಾಸಿಲಸ್ ಇರುತ್ತವೆ. ಅಂತಹ ಕಲುಷಿತಗೊಂಡ ಮಣ್ಣಿನ ಪ್ರದೇಶದಲ್ಲಿ ಗಾಯವಾದಾಗ, ಟೆಟನಸ್ ಬ್ಯಾಸಿಲೈ ಗಾಯದ ಮೂಲಕ ಶರೀರವನ್ನು ಪ್ರವೇಶಿಸಿ,




ಟಾಕ್ಸಿನ್ ಅಥವಾ ವಿಷವನ್ನು ಉತ್ಪತ್ತಿ ಮಾಡುತ್ತದೆ. ಟೆಟನಸ್ ಕ್ರಿಮಿಗಳು ಮತ್ತೊಂದು ಮಾರ್ಗದಲ್ಲಿ ಪ್ರವೇಶಿಸುವುದು ಪ್ರಾಣಿಗಳು ಕಚ್ಚಿದಾಗ ಅಥವಾ ಕೊಳಕಾದ ಉಪಕರಣಗಳಿಂದ ಗಾಯಗಳು ಆದಾಗ. ಹುಳುಕು ಹಲ್ಲು ಆದಾಗ ಅಥವಾ ಕಿವಿಯಲ್ಲಿ ಸೋರುತ್ತಿರುವಾಗ ಟೆಟನಸ್ ಕ್ರಿಮಿಗಳು ಸೋಂಕನ್ನುಂಟುಮಾಡಬಲ್ಲದು.

ಕೊಳಕು ಉಪಕರಣಗಳಿಂದ ನವಜಾತ ಶಿಶುವಿನ ಹೊಕ್ಕುಳಬಳ್ಳಿಯನ್ನು ಕತ್ತರಿಸಿದಾಗ ಅಥವಾ ಸಗಣಿಯನ್ನು ಮೆತ್ತಿದಾಗ ಅಥವಾ ಕೊಳಕು ವಸ್ತುವಿನಿಂದ ಡ್ರೆಸ್ಸಿಂಗ್ ಮಾಡಿದಾಗ ಟೆಟನಸ್ ಉಂಟಾಗುತ್ತದೆ.

ಟೆಟನಸ್ ವಿಷ, ನರಗಳ ವ್ಯೂಹದ ಮೇಲೂ ಪರಿಣಾಮವನ್ನುಂಟುಮಾಡುತ್ತದೆ.

**ಟೆಟನಸ್ ರೋಗದ ಚಿಹ್ನೆಗಳು ಮತ್ತು ಲಕ್ಷಣಗಳು ಈ ಕೆಳಕಂಡಂತಿರುತ್ತದೆ:**

* ನೋವಿನಿಂದ ಕೂಡಿದ ಮಾಂಸಖಂಡಗಳು. ವಿಶೇಷವಾಗಿ ಇದನ್ನು ದವಡೆಯ ಮಾಂಸಖಂಡ (ಸ್ನಾಯುಗಳು)ಗಳಲ್ಲಿ ಕಾಣಬಹುದು. ಇದರಿಂದಾಗಿ ರೋಗಿ ಬಾಯನ್ನು ತೆರೆಯಲಾಗುವುದಿಲ್ಲ.
* ಶಿಶುಗಳಲ್ಲಿ ಆರಂಭದ ಚಿಹ್ನೆಯೆಂದರೆ ಚೀಪುವುದನ್ನು ತಿರಸ್ಕರಿಸುತ್ತದೆ.

ಅಲ್ಲದೆ ಬಾಯನ್ನು ತೆರೆಯಲಾಗುವುದಿಲ್ಲ ಮತ್ತು ಮಲವನ್ನು ಕಡಿಮೆ ಸಾರಿ ವಿಸರ್ಜಿಸುತ್ತದೆ.

* ಅನಂತರ, ಸೆಡೆತ ಬೆನ್ನಿನ ಭಾಗದ ಸ್ನಾಯುಗಳಿಗೆ ಮತ್ತು ಎದೆಭಾಗಕ್ಕೆ ಹರಡುತ್ತದೆ. ಸೆಳೆವು ಬಂದಾಗ ರೋಗಿಯ ಬೆನ್ನಿನ ಭಾಗ ಬಿಲ್ಲಿನಂತೆ ಬಾಗುತ್ತದೆ. ಸೆಳೆವು ಬಂದಾಗ ರೋಗಿ ಪ್ರಜ್ಞಾಸ್ಥಿತಿಯಲ್ಲೇ ಇರುತ್ತಾನೆ. ತತ್‌ಕ್ಷಣ ಉಂಟಾಗುವ ಗದ್ದಲ/ಶಬ್ದ ಅಥವಾ ಪ್ರಖರವಾದ ಬೆಳಕಿನಿಂದಾಗಿ ರೋಗಿಯಲ್ಲಿ ಸೆಳೆವು ಬರುತ್ತದೆ.

* ಜ್ವರ ಮತ್ತು ಅತಿಯಾದ ಬೆವರು ಉಂಟಾಗುತ್ತದೆ.

ನೀವು, ಈ ಚಿಹ್ನೆಗಳನ್ನು ಮಗುವಿನಲ್ಲಿ ಕಂಡಾಗ ತಡಮಾಡದೆ, ಮಗುವನ್ನು ಆಸ್ಪತ್ರೆಗೆ ಕರೆದೊಯ್ದು ಡಾಕ್ಟರಿಗೆ ತೋರಿಸಬೇಕು.

**ಟೆಟನಸ್‌ನ್ನು ಈ ಕೆಳಕಂಡ ಕ್ರಮಗಳಿಂದ ತಡೆಗಟ್ಟಬಹುದು:**

1) ಆರು ವಾರದಿಂದ ಒಂದು ವರ್ಷದೊಳಪಟ್ಟ ಎಲ್ಲ ಮಕ್ಕಳಿಗೂ ರೋಗನಿರೋಧಕ ಚುಚ್ಚುಮದ್ದನ್ನು ಕೊಡಿಸಬೇಕು (ಡಿ.ಪಿ.ಟಿ) ಬೂಸ್ಟರ್ ಡೋಸ್‌ನ್ನು 16ರಿಂದ 24 ತಿಂಗಳಲ್ಲಿ ಕೊಡಿಸಬೇಕು. ಶಾಲೆಗೆ ಸೇರಿಸುವಾಗ ಅಂದರೆ 5ನೇ ವರ್ಷದಲ್ಲಿ ಡಿ.ಟಿ. (ಡಿಫ್ತಿರಿಯಾ, ಟೆಟನಸ್ ರೋಗ ನಿರೋಧಕ ಚುಚ್ಚುಮದ್ದು) ಮತ್ತು ಟಿ.ಟಿ.ಯನ್ನು (ಟೆಟನಸ್ ಟಾಕ್ಸೈಡ್) 10ನೇ ವರ್ಷದಲ್ಲಿ ಮತ್ತು 16ನೇ ವರ್ಷದಲ್ಲಿ ಕೊಡಿಸಬೇಕು.

2) ಎಲ್ಲ ಗರ್ಭಿಣಿ ಹೆಂಗಸರಿಗೂ ಟಿ.ಟಿ. ರೋಗನಿರೋಧಕ ಚುಚ್ಚುಮದ್ದನ್ನು ಕೊಡಿಸುವುದು. ಇದರಿಂದಾಗಿ, ನವಜಾತ ಶಿಶುಗಳಲ್ಲಿ ಟೆಟನಸ್ ಉಂಟಾಗದಂತೆ ಸಂರಕ್ಷಿಸುತ್ತದೆ.

3) ಆಳವಾದ ಗಾಯಗಳಾದಾಗ ಅಥವಾ ಕೊಳಕಿನಿಂದಾಗಿ ಗಾಯಗಳಾದಾಗ, ರೋಗನಿರೋಧಕ (ಟಿ.ಟಿ) ಚುಚ್ಚುಮದ್ದನ್ನು ತೆಗೆದುಕೊಳ್ಳುವುದು.

4) ಎಲ್ಲ ಗಾಯಗಳನ್ನು ಕ್ಲೀನಾಗಿಡುವುದು.

5) ತುಕ್ಕು ಹಿಡಿದ, ಕೊಳಕಾದ ಚೂಪಾದ ಉಪಕರಣಗಳನ್ನು ಬ್ಲೇಡ್, ಚಾಕು, ಕತ್ತರಿ ಉಪಯೋಗಿಸದಿರುವುದು.

7. ಟೈಫಾಯಿಡ್ ಜ್ವರ (ವಿಷಮ ಶೀತಜ್ವರ)

ಟೈಫಾಯಿಡ್, ತೀವ್ರಸ್ವರೂಪದ ಅಂಟುರೋಗ. ಇದು ಬರಲು ಕಾರಣ ಒಂದು ಬ್ಯಾಕ್ಟೀರಿಯಾ ಕಾರಣ. ಅದರ ಹೆಸರು ಸಾಲ್ಮೊನೆಲ್ಲಾ ಟೈಫಿ ಎಂದು. ಬ್ಯಾಕ್ಟೀರಿಯಾದ ಸಮೀಪದ ಸಂಬಂಧದ ಸಾಲ್ಮೊನೆಲ್ಲಾ ಪ್ಯಾರಾಟೈಫಿ ರೋಗಾಣುವಿನಿಂದ ಬರುವ ರೋಗಕ್ಕೆ ಪ್ಯಾರಾಟೈಫಾಯಿಡ್ ಜ್ವರ ಎಂದು ಕರೆಯುವರು. ಟೈಫಾಯಿಡ್ ಹಾಗೂ ಪ್ಯಾರಾಟೈಫಾಯಿಡ್ ರೋಗ ಹೊಂದನ್ನೊಂದು ಹೋಲುತ್ತದೆ. ಈ ರೋಗವನ್ನು ಎಂಟೆರಿಕ್ ಜ್ವರ (ಕರುಳು ಉರಿ) ಎಂತಲೂ ಕರೆಯುತ್ತಾರೆ.

**ರೋಗ ಹರಡುವ ವಿಧಾನ:**

ಟೈಫಾಯಿಡ್ ರೋಗಾಣುಗಳು, ರೋಗಿಯ ಮಲ ಮೂತ್ರಗಳಲ್ಲಿ ವಿಸರ್ಜನೆಗೊಳ್ಳುತ್ತವೆ. ಅಲ್ಲದೆ, ರೋಗವಾಹಕರು ಅಥವಾ ಕ್ಯಾರಿಯರ್ಸ್‌ನಿಂದಲೂ, ಅವರ ಮಲಮೂತ್ರಗಳ ಮೂಲಕವು ರೋಗಾಣುಗಳು ವಿಸರ್ಜನೆಗೊಳ್ಳುತ್ತವೆ. (ರೋಗವಾಹಕರು ಅಥವಾ ಕ್ಯಾರಿಯರ್ಸ್ ಎಂದರೆ ರೋಗಾಣುಗಳನ್ನು ಶರೀರದಲ್ಲಿ ಉಳ್ಳವರು. ಆದರೆ, ಅವರಿಗೆ ಯಾವ ತೊಂದರೆಯೂ ಇರುವುದಿಲ್ಲ. ರೋಗಾಣುಗಳನ್ನು ವಿಸರ್ಜಿಸುತ್ತಿರುತ್ತಾರೆ.) ರೋಗಾಣುಗಳನ್ನು ಹೊಂದಿರುವ ವಾಹಕರು ಈ ಮೊದಲು ರೋಗದಿಂದ ಬಳಲಿರಬಹುದು ಅಥವಾ ಬಳಲದೆಯೂ ಇರಬಹುದು.

ಎಲ್ಲೆಂದರಲ್ಲಿ ಮಲಮೂತ್ರಗಳನ್ನು ವಿಸರ್ಜಿಸುವುದರಿಂದ, ಮಲಮೂತ್ರಗಳ ಮೂಲಕ ವಿಸರ್ಜನೆಗೊಂಡ ರೋಗಾಣುಗಳು ಭೂಮಿಯನ್ನು ಕಲುಷಿತಗೊಳಿಸುತ್ತವೆ. ರೋಗವು ಮುಖ್ಯವಾಗಿ ಕಲುಷಿತಗೊಂಡ ಆಹಾರ, ನೀರು, ಹಾಲು ಮತ್ತು ಹಾಲಿನ ಉತ್ಪನ್ನಗಳ ಮೂಲಕ ಹರಡುತ್ತದೆ ಮತ್ತು ಶುದ್ಧವಾದ ನೀರಿನಿಂದ ತೊಳೆಯದ ತರಕಾರಿಗಳನ್ನು ಸೇವಿಸುವುದರಿಂದಲೂ ರೋಗ ಹರಡುತ್ತದೆ.

ವೈಯಕ್ತಿಕ ಸ್ವಚ್ಛತೆ ಇಲ್ಲದೆ ಇದ್ದರೆ ರೋಗ ಹರಡುವ ಸಂಭವ ಹೆಚ್ಚು. ನೊಣಗಳೂ ಸಹ ರೋಗ ಹರಡುವಿಕೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ನೊಣ, ರೋಗಿ ವಿಸರ್ಜಿಸಿದ ಮಲಮೂತ್ರಗಳ ಮೇಲೆ ಕುಳಿತು, ತನ್ನ ಕಾಲುಗಳಿಗೆ ಹಾಗೂ ರೆಕ್ಕೆಗಳ ಮೇಲೆ ರೋಗಾಣುಗಳನ್ನು ಅಂಟಿಸಿಕೊಂಡು ರೋಗವನ್ನು ಪ್ರಸಾರ ಮಾಡುವುವು. ಅಲ್ಲದೆ, ರಸ್ತೆ ಪಕ್ಕದಲ್ಲಿ ಮಾರಾಟ ಮಾಡುವ ತಿಂಡಿ–

ತಿನಿಸು, ಹೆಚ್ಚಿಟ್ಟಿರುವ ಹಣ್ಣುಹಂಪಲುಗಳ ಮೇಲೆ ನೊಣಗಳು ಕೂತು ಸಹ ರೋಗವನ್ನು ಹರಡಬಲ್ಲವು.

ಮಲವಿಸರ್ಜನೆಯನ್ನು ನೀರಿನ ಮೂಲಗಳ ಬಳಿ ಅಂದರೆ, ಕೆರೆ-ಕುಂಟೆ ಹೊಳೆನದಿಯ ಬಳಿ ಮಾಡಿದರೆ, ಟೈಫಾಯಿಡ್ ಸುಲಭವಾಗಿ ಹರಡುತ್ತದೆ.

ಟೈಫಾಯಿಡ್ ರೋಗ ನೇರವಾದ ಸಂಪರ್ಕದ ಮೂಲಕವೂ ಹರಡಬಲ್ಲದು. ಅಂದರೆ, ರೋಗಿ ಉಪಯೋಗಿಸಿದ ಸೋಂಕುಳ್ಳ ಹಾಸಿಗೆ, ಹೊದಿಕೆ, ಟವೆಲ್‌ಗಳೇ ಮೊದಲಾದವುಗಳಿಂದ ಹರಡಬಹುದು.

**ರೋಗ ಪರಿಪಕ್ವ ಆಗುವ ಅವಧಿ (ಇಂಕ್ಯುಬೇಷನ್ ಪಿರಿಯಡ್):**

ಇದು ಸಾಮಾನ್ಯವಾಗಿ 10ರಿಂದ 15 ದಿನಗಳು.

**ರೋಗಲಕ್ಷಣಗಳು:**

ಜ್ವರ ಸತತವಾಗಿರುತ್ತದೆ. ಜ್ವರವು ಇದ್ದಕ್ಕಿದ್ದಂತೆ ಬರುವುದು. ಅಲ್ಲದೆ, ಜ್ವರವು ದಿನೇ ದಿನೇ ಹೆಚ್ಚುತ್ತಾ ಹೋಗುವುದು. ಬೆಳಿಗ್ಗೆಗಿಂತಲೂ ಸಂಜೆಯ ವೇಳೆ ಜ್ವರ ಹೆಚ್ಚಾಗಿರುವುದು. ಕೆಲವೇ ದಿನಗಳಲ್ಲಿ ಜ್ವರದ ತೀಕ್ಷ್ಣತೆ $104^0$ಎಫ್ ನಿಂದ $105^0$ ಎಫ್ ತಲುಪುವುದು. ಜ್ವರವು ಮೂರು ವಾರಗಳವರೆಗೂ ಮುಂದುವರೆಯುವುದು. ಸರಿಯಾದ ಚಿಕಿತ್ಸೆಯನ್ನು ಕೊಡಿಸದಿದ್ದರೆ ಜ್ವರ ನಿವಾರಣೆಯಾಗುವುದಿಲ್ಲ.

ಜ್ವರದ ಜೊತೆಗೆ, ರೋಗಿಯಲ್ಲಿ ನಿಶ್ಶಕ್ತಿ, ಮೈಕೈ ನೋವು, ತಲೆನೋವು ಮತ್ತು ಮಲಬದ್ಧತೆಯಿರುತ್ತದೆ. ನಾಡಿಬಡಿತ ನಿಧಾನಗೊಂಡಿರುತ್ತದೆ ಮತ್ತು ಮೊದಲನೆ ವಾರದಲ್ಲಿ ಕೆಲವೊಮ್ಮೆ ರೋಗಿಯ ಎದೆ, ಬೆನ್ನಿನ ಮೇಲೆ ಚಿಕ್ಕ ಚಿಕ್ಕ ಬಿಳಿ ಬಣ್ಣದ ಚುಕ್ಕೆಗಳನ್ನು ಕಾಣಬಹುದು.

ಅ) ಟೈಫಾಯಿಡ್ ರೋಗಿಗೆ ಸಕಾಲದಲ್ಲಿ ಸೂಕ್ತ ಚಿಕಿತ್ಸೆಯನ್ನು ಕೊಡಿಸದಿದ್ದರೆ, ಎರಡನೇ ವಾರದಲ್ಲಿ ಭೇದಿ ಕಾಣಿಸಿಕೊಳ್ಳಬಹುದು ಅಲ್ಲದೆ, ಹೊಟ್ಟೆಯ ನೋವು ಇರಬಹುದು.

ಆ) ಮಲವಿಸರ್ಜನೆ ಹಾಗೂ ವಾಯು, ಗುದದಿಂದ ವಿಸರ್ಜಿಸಲ್ಪಡದೆ ಇದ್ದರೆ, ಉದರ ಪೊರೆ ಉರಿತ ಬಂದಿದೆ ಎಂದರ್ಥ.

ಜ್ವರ ಸತತವಾಗಿ ಐದರಿಂದ ಏಳು ದಿನಗಳವರೆಗೂ ಮುಂದುವರೆದರೆ, ಸಾಮಾನ್ಯ ಚಿಕಿತ್ಸೆಗೆ ಜ್ವರ ಕಡಿಮೆಯಾಗದಿದ್ದರೆ, ಟೈಫಾಯಿಡ್ ಎಂದು ಸಂದೇಹ

ಪಟ್ಟು, ವೈದ್ಯರಿಂದ ತಪಾಸಣೆ ಮಾಡಿಸಬೇಕು ಹಾಗೂ ವೈಡಾಲ್ ಎಂಬ ರಕ್ತಪರೀಕ್ಷೆಯನ್ನು ಮಾಡಿಸಬೇಕು.

**ರೋಗಿಯ ಆರೈಕೆ:**

1) ರೋಗಿ, ಸಂಪೂರ್ಣವಾದ ವಿಶ್ರಾಂತಿಯನ್ನು ಪಡೆಯಬೇಕು. ಅಂದರೆ, 10ರಿಂದ 15 ದಿನಗಳವರೆಗೂ ವಿಶ್ರಾಂತಿ ತೆಗೆದುಕೊಳ್ಳಬೇಕು. ಚಿಕಿತ್ಸೆಯಿಂದ ಜ್ವರ ಕಡಿಮೆಯಾಗುತ್ತದೆ.

2) ರೋಗಿಯ ಸಣ್ಣ ಕರುಳಿನಲ್ಲಿ ಹುಣ್ಣಾಗಿರುವುದರಿಂದ, ರೋಗಿಗೆ ಮೃದು ಆಹಾರವನ್ನು ಮಾತ್ರ ಕೊಡಬೇಕು.

3) ಎಣ್ಣೆಯಲ್ಲಿ ಕರಿದ ತಿಂಡಿ ತಿನಿಸನ್ನು ಕೊಡಬಾರದು.

4) ಹೆಚ್ಚಾಗಿ ಮಸಾಲೆ, ಮೆಣಸಿನಕಾಯಿಯನ್ನು ತಿನ್ನಬಾರದು.

5) ಜೀರ್ಣವಾಗಲು ಕಷ್ಟವಾಗುವ ಚಪಾತಿ, ಮಾಂಸ, ಕೋಳಿ ತಿನ್ನಬಾರದು.

(ವಿ.ಸೂ.: ರೋಗಿಗೆ ಸರಿಯಾದ ಚಿಕಿತ್ಸೆಯನ್ನು ಕೊಡಿಸದಿದ್ದರೆ ಟೈಫಾಯಿಡ್ ಮರುಕಳಿಸುವ ಸಾಧ್ಯತೆಗಳು ಹೆಚ್ಚು.)

6) ರೋಗಿಗೆ ಕುದಿಸಿ, ಆರಿಸಿದ ನೀರನ್ನು ಯಥೇಚ್ಛವಾಗಿ ಕೊಡುತ್ತಿರಬೇಕು.

7) ಹಣ್ಣುಗಳ ರಸವನ್ನು ಕೊಡಬೇಕು. ವಿಶೇವಾಗಿ ಮೂಸಂಬಿ ಜ್ಯೂಸ್‌ನ್ನು ಹೆಚ್ಚಾಗಿ ಕೊಡಬೇಕು.

8) ಟೈಫಾಯಿಡ್ ರೋಗಿಗಳು ಮಲವಿಸರ್ಜನೆ ಮತ್ತು ಮೂತ್ರವಿಸರ್ಜನೆ ಮಾಡಿದ ನಂತರ ಕೈಗಳನ್ನು ಮೈ ಸೋಪಿನಿಂದ ಚೆನ್ನಾಗಿ ತೊಳೆದುಕೊಳ್ಳಬೇಕು. ತಾವು ತಿಂದು ಉಳಿಸಿದ ತಿಂಡಿ ತಿನಿಸನ್ನು ಇತರರಿಗೆ ತಿನ್ನಲು ಕೊಡಬಾರದು.

ಪ್ಯಾರಾಟೈಫಾಯಿಡ್ ಜ್ವರದಲ್ಲೂ ಇದೇ ಕ್ರಮವನ್ನು ಅನುಸರಿಸಬೇಕು.

**ತಡೆಗಟ್ಟುವಿಕೆ ಮತ್ತು ನಿಯಂತ್ರಣ:**

1) ಟೈಫಾಯಿಡ್ ರೋಗಿಯ ಹೊದಿಕೆಗಳನ್ನು, ಟವೆಲ್ ಮೊದಲಾದುವನ್ನು ಬಿಸಿ ನೀರಿನಿಂದ ಒಗೆದು, ಬಿಸಿಲಲ್ಲಿ ಒಣಗಿಸಬೇಕು.

2) ರೋಗಿಯ ಆರೈಕೆಯನ್ನು ಮಾಡುವವರು ಡೆಟಾಲ್ ಹಾಕಿದ ನೀರಿನಿಂದ

ಕೈ ತೊಳೆದುಕೊಳ್ಳಬೇಕು.

3) ರೋಗಿಯ ಮಲಮೂತ್ರಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸಬೇಕು.

4) ರೋಗಿ ಮತ್ತು ರೋಗಿಯ ಸಂಪರ್ಕವನ್ನು ಹೊಂದಿರುವವರು ಆಹಾರ ಪದಾರ್ಥಗಳನ್ನು ವಿತರಿಸಬಾರದು.

5) ಹೋಟೆಲ್‌ಗಳಲ್ಲಿ ಆಹಾರ ಪದಾರ್ಥಗಳನ್ನು ವಿತರಿಸುವವರನ್ನು, ಅಡುಗೆ ತಯಾರಿಸುವವರನ್ನು, ಉದ್ಯೋಗಕ್ಕೆ ನೇಮಿಸಿಕೊಳ್ಳುವ ಮೊದಲೇ, ವೈದ್ಯರಿಂದ ತಪಾಸಣೆಗೊಳಗಾಗಬೇಕು.


6) ಕ್ಲೋರಿನೇಷನ್ ಮಾಡಿದ ನೀರನ್ನೇ ಎಲ್ಲರು ಕುಡಿಯಲು ಉಪಯೋಗಿಸಬೇಕು.

7) ಜಲಮೂಲಗಳ ಸಮೀಪ ಮಲಮೂತ್ರಗಳನ್ನು ವಿಸರ್ಜಿಸಬಾರದು.

8) ಹಣ್ಣು ಹಂಪಲುಗಳನ್ನು ಶುದ್ಧವಾದ ನೀರಿನಲ್ಲಿ ತೊಳೆಯದೆ ಉಪಯೋಗಿಸಬಾರದು.

### 7. ಕ್ಷಯರೋಗ (Tuberculosis)

ಕ್ಷಯ ಒಂದು ಸೋಂಕು ರೋಗ. ಇದು ಟ್ಯೂಬರ್‌ಕಲ್ ಬಾಸಿಲ್ಲೈ(ಮೈಕೊ ಬ್ಯಾಕ್ಟಿರಿಯಂ ಟ್ಯೂಬರ್ ಕ್ಯುಲೋಸಿಸ್) ಎಂಬ ರೋಗಾಣುವಿನಿಂದ ಬರುತ್ತದೆ. ಈ ರೋಗ ಪ್ರಾಥಮಿಕವಾಗಿ ಶ್ವಾಸಕೋಶಗಳಲ್ಲಿ ಉಂಟಾಗುತ್ತದೆ ಅಥವಾ ಶ್ವಾಸಕೋಶಗಳ ಕ್ಷಯರೋಗವನ್ನುಂಟು ಮಾಡುತ್ತದೆ.





ಕ್ಷಯರೋಗ ಇರುವ ಮನುಷ್ಯನಿಂದ ಆರೋಗ್ಯವಂತನಾಗಿರುವ ಮನುಷ್ಯನಿಗೆ ಇದು ಹರಡುತ್ತದೆ. ಚಿಕಿತ್ಸೆಯನ್ನು ತೆಗೆದುಕೊಳ್ಳದ ಕ್ಷಯರೋಗಿಗಳು ಕೆಮ್ಮುವಾಗ,

ಸೀನುವಾಗ, ಗಾಳಿಯ ಮೂಲಕ ಕ್ಷಯರೋಗದ ಕ್ರಿಮಿಗಳು ಆರೋಗ್ಯವಂತನ ದೇಹವನ್ನು ಸೇರುತ್ತವೆ. ಕ್ಷಯರೋಗವು ಮುಖ್ಯವಾಗಿ ಶ್ವಾಸಕೋಶದಲ್ಲಿ ಸೋಂಕನ್ನುಂಟು ಮಾಡುತ್ತದೆ. ಆದರೂ ದೇಹದ ಇತರೆ ಭಾಗಗಳಿಗೂ ಕ್ಷಯರೋಗ ಹರಡಬಹುದು.

### ಕ್ಷಯರೋಗದ ವರ್ಗೀಕರಣ:

ಕ್ಷಯರೋಗ

| ಶ್ವಾಸಕೋಶದ ಕ್ಷಯರೋಗ | ಶ್ವಾಸಕೋಶೇತರ ಕ್ಷಯರೋಗ | |
|---|---|---|
| | | – ಗ್ರಂಥಿಗಳು |
| ಕಫದಲ್ಲಿ ಕ್ಷಯದ ಕ್ರಿಮಿಗಳನ್ನುಳ್ಳ ರೋಗಿಗಳು | ಕಫದಲ್ಲಿ ಕ್ಷಯದ ಕ್ರಿಮಿಗಳಿಲ್ಲದ ರೋಗಿಗಳು | – ಮೂಳೆಗಳು ಮತ್ತು ಕೀಲುಗಳು |
| | | – ಜನನೇಂದ್ರಿಯ |
| | | – ನರಮಂಡಲ (ಮೆನಂಜೈಟಿಸ್) |
| | | – ಕರುಳು |

### ಕ್ಷಯ ರೋಗದ ಲಕ್ಷಣಗಳು:

* ಸತತವಾಗಿ ಮೂರು ವಾರಗಳು ಮತ್ತು ಅದಕ್ಕೂ ಮೇಲ್ಪಟ್ಟು ಕೆಮ್ಮು ಇರುವಂತಹವರು.
* ಜ್ವರ ಅದರಲ್ಲೂ ಸಂಜೆ ವೇಳೆ ಹೆಚ್ಚಾಗಿರುವುದು.
* ಎದೆಯಲ್ಲಿ ನೋವು
* ಶರೀರದ ತೂಕ ಕಡಿಮೆಯಾಗಿರುವುದು
* ಹಸಿವು ಆಗದಿರುವುದು.
* ಕಫದಲ್ಲಿ ರಕ್ತ ಬೀಳುವುದು.

### ಕ್ಷಯರೋಗವನ್ನು ಹೇಗೆ ಕಂಡು ಹಿಡಿಯುತ್ತಾರೆ?

* ಕ್ಷಯರೋಗದ ಕ್ರಿಮಿಗಳನ್ನು ಕಫದ ಪರೀಕ್ಷೆಯ ಮೂಲಕ

ಮೈಕ್ರೋಸ್ಕೋಪಿಯಲ್ಲಿ ನೋಡುವುದರಿಂದ ಶ್ವಾಸಕೋಶದ ಕ್ಷಯವನ್ನು ಸುಲಭವಾಗಿ ಕಂಡು ಹಿಡಿಯಬಹುದು.

* 24 ಗಂಟೆಗಳ ಕಾಲ ಸಂಗ್ರಹಿಸಿದ ಕಫವನ್ನು ಬೇರೆ ಬೇರೆಯಾಗಿ ಪಡೆದು ಪರೀಕ್ಷೆಯನ್ನು ಮಾಡುವುದರಿಂದ ಕರಾರುವಾಕ್ಕಾಗಿ ಕ್ಷಯರೋಗವನ್ನು ಕಂಡು ಹಿಡಿಯಬಹುದು.

* ಕೆಲವೊಮ್ಮೆ ಕಫದ ಪರೀಕ್ಷೆಯ ಜೊತೆಗೆ, ಎದೆಯ ಎಕ್ಸ್‌ರೇಯನ್ನು ತೆಗೆಸಬೇಕಾಗುತ್ತದೆ.

**ಕೆಲವು ಸಂಗತಿಗಳು:**

- ಕ್ಷಯರೋಗ ಯಾವುದೇ ವಯಸ್ಸಿನಲ್ಲಾದರೂ ಬರಬಹುದು.
- ಸ್ತ್ರೀಯರಿಗಿಂತಲೂ ಪುರುಷರಲ್ಲಿ ಕ್ಷಯರೋಗ ಕಾಣಿಸಿಕೊಳ್ಳುವುದು ಹೆಚ್ಚು.
- ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳೆರಡರಲ್ಲೂ ರೋಗ ಸಮಾನವಾಗಿರುತ್ತದೆ.
- ಕ್ಷಯರೋಗ, ನ್ಯೂನ ಪೋಷಣೆ ಇರುವವರಲ್ಲಿ ಕಂಡುಬರುವುದು ಹೆಚ್ಚು.

**ಬಿ.ಸಿ.ಜಿ. ವ್ಯಾಕ್ಸಿನೇಷನ್:**

ಕ್ಷಯರೋಗವನ್ನು ನಿಯಂತ್ರಿಸಬೇಕಾದರೆ ಎಲ್ಲ ನವಜಾತ ಶಿಶುಗಳಿಗೂ ಬಿ.ಜಿ.ಸಿ. ಚುಚ್ಚುಮದ್ದನ್ನು ತಪ್ಪದೆ ಕೊಡಿಸಬೇಕು.

**ನಿಮಗೆ ತಿಳಿದಿರಲಿ:**

* ಕ್ಷಯರೋಗವನ್ನು ನೂತನ ಚಿಕಿತ್ಸಾ (ಡಾಟ್- ಡೈರೆಕ್ಟ್ ಅಬ್ಸರ್‌ವೇಷನ್ ಟ್ರೀಟ್‌ಮೆಂಟ್) ವಿಧಾನಗಳಿಂದ ಮತ್ತು ಪೂರ್ಣವಾದ ಚಿಕಿತ್ಸೆಯಿಂದ ಸಂಪೂರ್ಣವಾಗಿ ಗುಣಪಡಿಸಬಹುದು.

* ನಿಗದಿಪಡಿಸಿದಂತೆ ಔಷಧಿಗಳನ್ನು ಪೂರ್ಣ ಅವಧಿಯವರೆಗೆ, ಮಧ್ಯದಲ್ಲಿ ಬಿಡದೆ ಸೇವಿಸುವುದು ಅತ್ಯಗತ್ಯ. ಇಲ್ಲದಿದ್ದರೆ, ಅತ್ಯಂತ ತೀವ್ರ ಹಂತದ ರೀತಿಯ ಕ್ಷಯರೋಗವು ಉಂಟಾಗುತ್ತದೆ.

* ರೋಗಿಯ ಸ್ಥಿತಿಯನ್ನು ತಿಳಿಯಲು, ಕಫದ ಮರು ಪರೀಕ್ಷೆಗಳು ಅತ್ಯವಶ್ಯಕ.

* ಯಾವುದೇ ವ್ಯಕ್ತಿ ಮೂರು ವಾರಗಳು ಮತ್ತು ಮೇಲ್ಪಟ್ಟು ಕೆಮ್ಮುತ್ತಿದ್ದರೆ ಅಂತಹವರನ್ನು ವೈದ್ಯರ ಹತ್ತಿರ ಕರೆದೊಯ್ದು ಮೂರು ಬಾರಿ ಕಫವನ್ನು ಪರೀಕ್ಷಿಸಬೇಕು.

* ಎಲ್ಲ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕ್ಷಯರೋಗದ ಪರೀಕ್ಷೆ ಮತ್ತು ಚಿಕಿತ್ಸೆ ಉಚಿತವಾಗಿ ದೊರೆಯುತ್ತದೆ.

## 9. ನ್ಯುಮೊನಿಯಾ

ನ್ಯುಮೊನಿಯಾ ಶ್ವಾಸಕೋಶದ ಉರಿಯೂತದ ಕಾಯಿಲೆ. ಶ್ವಾಸಕೋಶಗಳಿಗೆ ಉರಿಯೂತ ತಗಲಿದಾಗ ಅವುಗಳಲ್ಲಿ ಉರಿಯೂತದ ದ್ರವ ಸಂಗ್ರಹಗೊಂಡು ಆ ಭಾಗ ಬಿರುಸಾಗುತ್ತದೆ. ಅದನ್ನೇ ನ್ಯುಮೊನಿಯಾ ಎನ್ನುತ್ತಾರೆ. ಉರಿಯೂತಕ್ಕೊಳಗಾದ ಭಾಗದಲ್ಲಿ ಕೆಂಪು ಹಾಗೂ ಬಿಳಿ ರಕ್ತಕಣಗಳು ಮತ್ತು ಉರಿಯೂತದ ದ್ರವ ಶೇಖರಣೆಯಾಗುತ್ತದೆ. ಇದರಿಂದ ಉರಿಯೂತಕ್ಕೆ ಒಳಗಾದ ಶ್ವಾಸಕೋಶದ ಭಾಗ ಗಾಳಿ ಕಳೆದುಕೊಂಡು ಗಟ್ಟಿಯಾಗುತ್ತದೆ. ಈ ಉರಿಯೂತ ಹಲವು ಹತ್ತು ಕಾರಣಗಳಿಂದ ಉಂಟಾಗಬಹುದು. ನ್ಯುಮೊನಿಯಾ ಯಾವುದಾದರೊಂದು ಶ್ವಾಸಕೋಶಕ್ಕೆ ತಗುಲಬಹುದು. ಒಂದು ಶ್ವಾಸಕೋಶದ ಯಾವುದಾದರೊಂದು ಹಾಲೆಗೆ ಅಥವಾ ಭಾಗಕ್ಕೆ ತಗಲಬಹುದು.

**ನ್ಯುಮೊನಿಯಾದ ಲಕ್ಷಣಗಳು :**

ಕೆಮ್ಮು

ಎದೆನೋವು

ಜ್ವರ ಮತ್ತು

ಉಸಿರಾಡಲು ಕಷ್ಟ.

**ರೋಗನಿರ್ಧಾರ (ಡಯಾಗ್ನೋಸ್ಟಿಕ್):**

ಎದೆಯ ಎಕ್ಸ್‌ರೇ ತೆಗೆಯಲಾಗುವುದು ಮತ್ತು ಕಫವನ್ನು ಪರೀಕ್ಷೆ ಮಾಡಲಾಗುವುದು. ನ್ಯುಮೊನಿಯಾಕ್ಕೆ ಏನು ಕಾರಣ ಎಂಬುದನ್ನು ಅವಲಂಬಿಸಿ ವೈದ್ಯರು ಚಿಕಿತ್ಸೆಯನ್ನು ಕೊಡುತ್ತಾರೆ.

ನ್ಯುಮೊನಿಯಾ ಸೋಂಕು ಬ್ಯಾಕ್ಟೀರಿಯಾ, ವೈರಸ್‌ಗಳು, ಫಂಗೈ ಅಥವಾ ಶಾರೀರಿಕ ಗಾಯದಿಂದಲೂ ಉಂಟಾಗಬಹುದು. ಅಲ್ಲದೆ, ಶ್ವಾಸಕೋಶಗಳಿಗೆ ರಾಸಾಯನಿಕ ಅಥವಾ ಶಾರೀರಿಕ ಗಾಯದಿಂದಲೂ ಉಂಟಾಗಬಹುದು. ಬ್ಯಾಕ್ಟೀರಿಯಾಗಳಿಂದ ಆದ ನ್ಯುಮೊನಿಯಾವನ್ನು ಆ್ಯಂಟಿಬಯೋಟಿಕ್ಸ್ ಕೊಟ್ಟು ಚಿಕಿತ್ಸೆ ಮಾಡಲಾಗುವುದು.

ನ್ಯುಮೊನಿಯಾ ಒಂದು ಸಾಮಾನ್ಯವಾದ ಕಾಯಿಲೆಯಾಗಿರುತ್ತದೆ. ಇದು ಎಲ್ಲ ವಯೋಮಾನದವರಲ್ಲೂ ಉಂಟಾಗುತ್ತದೆ. ವೃದ್ಧರು ಮತ್ತು ದೀರ್ಘಕಾಲ ಅನಾರೋಗ್ಯದಿಂದಿರುವವರು ನ್ಯುಮೊನಿಯ ಕಾಯಿಲೆಯಿಂದ ನರಳಿ ಸಾವನ್ನಪ್ಪಲು ನ್ಯುಮೊನಿಯಾ ಕಾಯಿಲೆ ಸಹ ಹೆಚ್ಚು ಕಾರಣವಾಗಿರುತ್ತದೆ.

**ಸೋಂಕು ನ್ಯುಮೊನಿಯಾದ ಮುಖ್ಯ ಲಕ್ಷಣಗಳು :**

ಬ್ಯಾಕ್ಟೀರಿಯಾ ನ್ಯುಮೊನಿಯಾವನ್ನುಂಟು ಮಾಡುವುದು ಸಾಮಾನ್ಯ ಸಂಗತಿ. ಸೋಂಕಿನಿಂದ ಕೂಡಿದ ನ್ಯುಮೊನಿಯಾವನ್ನು ಹೊಂದಿರುವ ಜನರಲ್ಲಿ ಕೆಮ್ಮಿನಿಂದಾಗಿ ಹಸಿರು ಅಥವಾ ಹಳದಿ ಕಫ ಉತ್ಪತ್ತಿಯಾಗುತ್ತದೆ. ಮತ್ತು ಅತಿಯಾದ ಜ್ವರ ಮತ್ತು ಚಳಿಯಿರುತ್ತದೆ.

ಉಸಿರಾಡಲು ಕಷ್ಟವಾಗುತ್ತದೆ. ಎದೆನೋವು ಸಹ ಇರುತ್ತದೆ. ನ್ಯುಮೊನಿಯಾವನ್ನು ಹೊಂದಿರುವವರ ಕಫದಲ್ಲಿ ರಕ್ತವು ಕಾಣಿಸಿಕೊಳ್ಳಬಹುದು. ತಲೆನೋವಿನ ಅನುಭವವು ಇರುತ್ತದೆ. ಹೆಚ್ಚು ಬೆವರು ಉತ್ಪತ್ತಿಯಾಗುತ್ತದೆ. ಇತರೆ ಸಂಭವನೀಯ ಲಕ್ಷಣಗಳೆಂದರೆ, ಹಸಿವು ಇಲ್ಲದೆ ಇರುವುದು. ಆಯಾಸ, ಮೈ ಚರ್ಮ ನೀಲಿಗೊಳ್ಳುವುದು, ವಾಕರಿಕೆ, ವಾಂತಿ, ಮನಸ್ಸಿನ ಸ್ಥಿತಿಯಲ್ಲಿ ಬದಲಾವಣೆ ಮತ್ತು ಕೀಲುಗಳ ನೋವು ಅಥವಾ ಸ್ನಾಯು ನೋವು ಸಹ ಇರುತ್ತದೆ.

ಅನೇಕ ಉಪಜಾತಿಯ ರೋಗಾಣುಗಳು ನ್ಯುಮೊನಿಯಾವನ್ನುಂಟು ಮಾಡಬಲ್ಲವು. ನ್ಯುಮೊಕಾಕ್ಕೈ, ಸ್ಟೆಫೈಲೊಕಾಕ್ಕೈ, ಸ್ಟ್ರೆಪ್ಟೊಕಾಕ್ಕೈ, ಕ್ಲೆಬ್‌ಸಿಯೆಲ್ಲಾ ಮೊದಲಾದ ಉಪಜಾತಿಯ ಬ್ಯಾಕ್ಟೀರಿಯಾಗಳು ನ್ಯುಮೊನಿಯಾವನ್ನುಂಟುಮಾಡಬಲ್ಲವು. ಕ್ಷಯದ ರೋಗಾಣು ಸಹ ನ್ಯುಮೊನಿಯಾವನ್ನುಂಟು ಮಾಡಲಬಲ್ಲದು.

ಸ್ಟೆಫೆಲೊಕಕ್ಕೈ ಬ್ಯಾಕ್ಟೀರಿಯಾ ಮಕ್ಕಳಲ್ಲಿ ನ್ಯುಮೊನಿಯಾವನ್ನುಂಟು ಮಾಡುತ್ತದೆ. ಮಕ್ಕಳಲ್ಲಿ ನ್ಯುಮೊನಿಯಾ ತೀವ್ರ ಸ್ವರೂಪವನ್ನು ಪಡೆಯುತ್ತದೆ. ಸಕಾಲದಲ್ಲಿ ಚಿಕಿತ್ಸೆಯನ್ನು ಕೊಡಿಸದಿದ್ದರೆ ಪ್ರಾಣಕ್ಕೆ ಮಾರಕವಾಗಬಲ್ಲದು.

**ವೈರಸ್‌ಗಳಿಂದ ನ್ಯುಮೋನಿಯಾ :**

ವೈರಸ್‌ಗಳಿಂದ ಉಂಟಾಗುವ ನ್ಯುಮೋನಿಯಾ ಮಕ್ಕಳು ಮತ್ತು ವಯಸ್ಕರಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಮಂದಗತಿಯ ರೋಗವಾಗಿರುವುದರಿಂದ ಅಂತಹ ಕೆಟ್ಟ ಪರಿಣಾಮಗಳೇನು ಉಂಟಾಗುವುದಿಲ್ಲ.

**ರಾಸಾಯನಿಕ ನ್ಯುಮೋನಿಯಾ :**

ಕೆಮಿಕಲ್ ನ್ಯುಮೋನಿಯಾ ರಾಸಾಯನಿಕ ವಿಷವಸ್ತುಗಳಿಂದ ಉಂಟಾಗುತ್ತದೆ. ಅಂತಹವುಗಳೆಂದರೆ, ಕೀಟನಾಶಕಗಳು. ಇದು ಉಸಿರಾಡುವುದರ ಮೂಲಕ ಅಥವಾ ಚರ್ಮದ ಸಂಪರ್ಕದ ಮೂಲಕ, ಶರೀರವನ್ನು ಪ್ರವೇಶಿಸುತ್ತದೆ.

ಸೀಮೆಎಣ್ಣೆ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಕುಡಿದ ಸಂದರ್ಭದಲ್ಲಿ, ನ್ಯುಮೋನಿಯಾ ಕಾಣಿಸಿಕೊಳ್ಳುವುದುಂಟು. ಪ್ರಜ್ಞೆತಪ್ಪಿದ ಇಲ್ಲವೆ, ಅರೆಪ್ರಜ್ಞಾವಸ್ಥೆಯ ರೋಗಿಗಳಲ್ಲಿ ವಾಂತಿ ಮಾಡುವಾಗ ಜಠರ ರಸ ಆಕಸ್ಮಿಕವಾಗಿ ಶ್ವಾಸಕೋಶದ ಒಳ ಸೇರಿ ನ್ಯುಮೋನಿಯವನ್ನುಂಟು ಮಾಡಬಹುದು.

**ಧೂಳಿನ ನ್ಯುಮೋನಿಯಾ :**

ಅತಿಯಾದ ಧೂಳಿರುವ ಜಾಗದಲ್ಲಿ ವಾಸಿಸುವುದರಿಂದ ಹಾಗೂ ಅತಿಯಾದ ಧೂಳು ಶ್ವಾಸಕೋಶವನ್ನು ಸೇರುವುದರಿಂದಲೂ ನ್ಯುಮೋನಿಯಾ ಉಂಟಾಗಬಹುದು.

**ಕ್ಯಾನ್ಸರ್ ರೋಗದಲ್ಲಿ ನ್ಯುಮೋನಿಯಾ :**

ಶ್ವಾಸಕೋಶದ ಕ್ಯಾನ್ಸರ್, ನ್ಯುಮೋನಿಯಾ ರೂಪದಲ್ಲಿ ಕಾಣಿಸಿಕೊಳ್ಳಬಹುದು.

**ಕೀವಿನ ನ್ಯುಮೋನಿಯಾ :**

ನ್ಯುಮೋನಿಯಾ ಕೀವನ್ನು ಉತ್ಪತ್ತಿ ಮಾಡುವ ರೋಗಾಣುಗಳಿಂದ ಉಂಟಾಗುತ್ತದೆ. ಇದರಲ್ಲಿ ಕೀವು ಹೆಚ್ಚಾಗಿ ಉತ್ಪತ್ತಿಯಾಗುತ್ತದೆ. ಇದು ಮಕ್ಕಳಲ್ಲಿ ಮತ್ತು ವೃದ್ಧರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

## (ಆ) ವೈರಸ್‌ಗಳಿಂದ ಬರುವ ರೋಗಗಳು

### 1. ಡೆಂಗ್ಯೂ ಜ್ವರ

ಡೆಂಗು ಜ್ವರವು ಮಾರಕವಾದ ರೋಗ. ಇದು ಬರಲು ಒಂದು ವೈರಸ್ ಜೀವಿ ಕಾರಣ. 'ಈಡಿಸ್ ಈಜಿಪ್ಟೈ' ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಇದು

ಹರಡುತ್ತದೆ. ಸಾಮಾನ್ಯ ಜನರು ಡೆಂಗ್ಯೂ ಜ್ವರವನ್ನು ಮೂಳೆ ಮುರಿಯುವ ಜ್ವರ ಎಂದು ಕರೆಯುತ್ತಾರೆ.

ಈಡಿಸ್ ಈಜಿಪ್ಟೈ ಸೊಳ್ಳೆಗಳು, ಮನುಷ್ಯರನ್ನು ಹಗಲು ಹೊತ್ತಿನಲ್ಲೇ ಕಚ್ಚುವುವು. ಭಾರತದಲ್ಲಿ ಈ ರೋಗದ ಸಾಂಕ್ರಾಮಿಕತೆ ಮಳೆಗಾಲದಲ್ಲಿ ಹಾಗೂ ಅನಂತರ ಕಾಣಿಸುತ್ತದೆ. ಅಂದರೆ, ಜುಲೈನಿಂದ ಅಕ್ಟೋಬರ್ ತಿಂಗಳವರೆಗೆ ಇರುವುದು.

ಡೆಂಗ್ಯೂ ಜ್ವರದಿಂದ ನರಳುತ್ತಿರುವ ರೋಗಿಯ ರಕ್ತದಲ್ಲಿ ರೋಗ ಉಂಟುಮಾಡುವ ವೈರಸ್ ಜೀವಿ ಇರುತ್ತದೆ. ಡೆಂಗ್ಯೂ ಜ್ವರದ ರೋಗಿಯನ್ನು ಕಚ್ಚಿ ರಕ್ತ ಹೀರುವಾಗ ಡೆಂಗ್ಯೂ ವೈರಸ್ ಶರೀರದಲ್ಲಿ ವೈರಸ್ ಜೀವಿ ಬೆಳೆಯುವುದು. ಕೆಲವು ದಿನಗಳ ನಂತರ, ಸೊಳ್ಳೆಯ ಶರೀರದಲ್ಲಿ ಸಾಕಷ್ಟು ವೈರಸ್‌ಗಳು ತುಂಬಿರುತ್ತವೆ. ಇಂತಹ ಸೊಳ್ಳೆ ಆರೋಗ್ಯವಂತರನ್ನು ಕಚ್ಚಿದಾಗ, ತನ್ನಲ್ಲಿಯ ವೈರಾಣುಗಳನ್ನು ಅವರ ಶರೀರಕ್ಕೆ ಬಿಡುತ್ತದೆ. ಸೊಳ್ಳೆಯಿಂದ ಕಚ್ಚಿಸಿಕೊಂಡ ವ್ಯಕ್ತಿಗಳು ಡೆಂಗ್ಯೂ ಜ್ವರದಿಂದ ನರಳುತ್ತಾರೆ.

**ರೋಗ ಪರಿಪಕ್ವ ಆಗುವ ಅವಧಿ (ಇಂಕ್ಯುಬೇಷನ್ ಪೀರಿಯಡ್):**

ರೋಗಪರಿಪಕ್ವ ಅವಧಿ 5ರಿಂದ 9 ದಿನಗಳು.

ಡೆಂಗ್ಯೂ ಜ್ವರದಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ.

1) ಡೆಂಗ್ಯೂ ಜ್ವರ

2) ಡೆಂಗ್ಯೂ ರಕ್ತಸ್ರಾವ

3) ಡೆಂಗ್ಯೂ ಶಾಕ್ ಸಿಂಡ್ರೋಮ್

**ರೋಗಲಕ್ಷಣಗಳು:**

1) ಇದ್ದಕ್ಕಿದ್ದಂತೆ ತೀವ್ರವಾದ ಜ್ವರ ಕಾಣಿಸಿಕೊಳ್ಳುವುದು.

2) ತೀವ್ರತರವಾದ ತಲೆನೋವು. ಹೆಚ್ಚಾಗಿ ಹಣೆಯ ಮುಂಭಾಗದಲ್ಲಿ ಕಾಣಿಸುವುದು.

3) ಕಣ್ಣಿನ ಹಿಂಭಾಗದ ನೋವು, ಕಣ್ಣಿನ ಚಲನೆಯಿಂದ ಹೆಚ್ಚಾಗುತ್ತದೆ.

4) ಮಾಂಸಖಂಡಗಳು ಮತ್ತು ಕೀಲುಗಳಲ್ಲಿ ತೀವ್ರವಾದ ನೋವಿರುತ್ತದೆ. ಕೀಲು ನೋವಿನಿಂದಾಗಿ, ರೋಗಿ ಚಲಿಸಲು ಸಹ ಅಶಕ್ತನಾಗಿರುತ್ತಾನೆ.

5) ವಾಕರಿಕೆ ಮತ್ತು ವಾಂತಿ.

ಮೇಲ್ಕಂಡ ಡೆಂಗ್ಯೂ ಜ್ವರದ ರೋಗಲಕ್ಷಣಗಳ ಜೊತೆಗೆ, ಕೆಳಕಂಡ ಯಾವುದಾದರೂ ಲಕ್ಷಣಗಳು ಕಂಡು ಬರುತ್ತದೆ.

1) ತೀವ್ರತರವಾದ ಮತ್ತು ಒಂದೇ ಸಮನೆ ಹೊಟ್ಟೆ ನೋವು.

2) ಬಾಯಿ, ಮೂಗು ಮತ್ತು ಒಸಡುಗಳಿಂದ ರಕ್ತಸ್ರಾವ ಹಾಗೂ ಚರ್ಮದ ಮೇಲೆ ಅಲ್ಲಲ್ಲಿ ರಕ್ತಸ್ರಾವದ ಗುರುತುಗಳು.

3) ರಕ್ತಸಹಿತ ಅಥವಾ ರಕ್ತ ಇಲ್ಲದೆಯೇ ಪದೇ ಪದೇ ವಾಂತಿಯಾಗುವುದು.

4) ಕಪ್ಪು ಮಲದ ವಿಸರ್ಜನೆ.

5) ವಿಪರೀತ ಬಾಯಾರಿಕೆ (ಬಾಯಿ ಒಣಗಿರುವುದು)

6) ತಣ್ಣನೆಯ ಬಿಳಚಿಕೊಂಡ ಚರ್ಮ.

7) ಚಡಪಡಿಸುವಿಕೆ ಅಥವಾ ಜ್ಞಾನ ತಪ್ಪುವುದು.

8) ನಾಡಿಬಡಿತ ಮತ್ತು ರಕ್ತದೊತ್ತಡದ ಕುಸಿತ.

9) ನಿಶ್ಯಕ್ತಿ.

**ಸೊಳ್ಳೆಗಳ ಉತ್ಪತ್ತಿಯ ತಾಣಗಳು:**

ಈಡಿಸ್ ಸೊಳ್ಳೆಗಳು ಹೆಚ್ಚಾಗಿ ಮನೆಯಲ್ಲಿರುವ ನೀರು ಸಂಗ್ರಹಿಸುವ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಬಕೆಟ್‌ಗಳು, ಹೂವಿನ ಕುಂಡಗಳಲ್ಲಿ ಬೆಳೆಯುತ್ತವೆ. ಅಲ್ಲದೆ, ಮನೆಯ ಸುತ್ತಮುತ್ತ ಬಿದ್ದಿರುವ ಪಿಂಗಾಣಿ ವಸ್ತುಗಳು, ಹೆಂಚುಗಳು, ಒಡೆದ ಬಾಟಲಿಗಳು, ಬಯಲಿನಲ್ಲಿ ಬಿಸಾಡಿರುವ ಟೈರ್‌ಗಳು, ಎಳನೀರಿನ ಚಿಪ್ಪುಗಳಲ್ಲಿ ಮತ್ತು ಇತರೆ ನೀರು ಶೇಖರಗೊಳ್ಳುವ ಜಾಗಗಳಲ್ಲಿ ಉತ್ಪತ್ತಿಯಾಗುತ್ತದೆ.

**ಡೆಂಗ್ಯೂ ಜ್ವರದ ನಿಯಂತ್ರಣ ಕ್ರಮಗಳು:**

1) ಮನೆಯೊಳಗೆ ಮತ್ತು ಮೇಲ್ಭಾವಣೆಯ ನೀರಿನ ತೊಟ್ಟಿಗಳಲ್ಲಿ ತಪ್ಪದೆ ವಾರಕ್ಕೊಮ್ಮೆ ನೀರನ್ನು ಖಾಲಿ ಮಾಡಿ, ಉಜ್ಜಿ, ಒಣಗಿಸಿ ಮತ್ತೆ ಭರ್ತಿ ಮಾಡಿ ಭದ್ರವಾಗಿ ಮುಚ್ಚಳವನ್ನು ಮುಚ್ಚಿರಿ.

2) ಮನೆಯ ಒಳಗೆ ಮತ್ತು ಮನೆಯ ಸುತ್ತಮುತ್ತ ಯಾವುದೇ ಕಾರಣಕ್ಕೂ ನೀರು ನಿಲ್ಲದಂತೆ ಎಚ್ಚರ ವಹಿಸಿರಿ.

3) ಡೆಂಗ್ಯೂ ಸೊಳ್ಳೆಗಳು ಹಗಲು ಹೊತ್ತಿನಲ್ಲಿ ಕಚ್ಚುವುದರಿಂದ ಕೈಕಾಲು ಮುಚ್ಚುವಂತಹ ಉಡುಪನ್ನು ತೊಡಿರಿ.

4) ಒಡೆದ ಬಾಟಲುಗಳಲ್ಲಿ, ಟಿನ್‌ಗಳಲ್ಲಿ, ಟೈರು ಮುಂತಾದವುಗಳಲ್ಲಿ ನೀರು ಸಂಗ್ರಹವಾಗದಂತೆ ಗಮನಹರಿಸಿರಿ.

5) ಏರ್‌ಕೂಲರ್‌ಗಳಲ್ಲಿ ನೀರನ್ನು ಆಗಾಗ್ಗೆ ಬದಲಾಯಿಸುತ್ತಿರಿ.

6) ಏರ್‌ಕೂಲರ್ ಕೆಟ್ಟಾಗ, ಉಪಯೋಗಿಸದೇ ಇದ್ದಾಗ ಏರ್‌ಕೂಲರ್‌ನ ನೀರನ್ನು ಖಾಲಿ ಮಾಡಬೇಕು.

7) ಬೆಂಕಿ ಆರಿಸಲು ಉಪಯೋಗಿಸುವ ಬಕೆಟ್‌ಗಳಲ್ಲಿರುವ ನೀರನ್ನು ವಾರಕ್ಕೊಮ್ಮೆ ಖಾಲಿ ಮಾಡಿ, ಅನಂತರ ಭರ್ತಿ ಮಾಡುವುದು.

8) ಯಾವಾಗಲೂ ಮೈತುಂಬಾ ಬಟ್ಟೆಯನ್ನು ಧರಿಸಬೇಕು.

9) ಹಗಲು ಹೊತ್ತಿನಲ್ಲಿ ಮಕ್ಕಳು ನಿದ್ದೆ ಮಾಡುತ್ತಿರುವಾಗ ಮತ್ತು ವಯಸ್ಸಾದವರು ವಿಶ್ರಾಂತಿಯನ್ನು ಪಡೆಯುತ್ತಿರುವಾಗ ತಪ್ಪದೆ ಸೊಳ್ಳೆ ಪರದೆಯನ್ನು ಉಪಯೋಗಿಸಬೇಕು.

10) ಕಿಟಕಿ ಬಾಗಿಲುಗಳಿಗೆ ಸೊಳ್ಳೆ ನಿಯಂತ್ರಣ ಜಾಲರಿಗಳನ್ನು ಅಳವಡಿಸಬೇಕು.

11) ಡೆಂಗ್ಯೂ ಜ್ವರದಿಂದ ನರಳುವ ರೋಗಿಗಳೂ ಸಹ ಸೊಳ್ಳೆ ಪರದೆಯನ್ನು ಉಪಯೋಗಿಸಬೇಕು.

12) ಡೆಂಗ್ಯೂ ಜ್ವರದ ರೋಗಿಯನ್ನು ಕನಿಷ್ಠ ಐದು ದಿನಗಳವರೆಗಾದರೂ ಪ್ರತ್ಯೇಕ ರೂಮಿನಲ್ಲಿರಿಸಬೇಕು.

13) ನೆರೆಹೊರೆಯಲ್ಲಿ ಡೆಂಗ್ಯೂ ಜ್ವರದ ರೋಗಿ ಕಂಡುಬಂದರೆ ಆರೋಗ್ಯ ಇಲಾಖೆಯವರಿಗೆ ತಿಳಿಸಬೇಕು.

**2 ಇನ್‌ಫ್ಲೂಯೆಂಜಾ**

ಸಾಮಾನ್ಯವಾಗಿ ಇದನ್ನು ಫ್ಲೂ ಎಂದು ಕರೆಯುತ್ತಾರೆ. ಇದು ತೀವ್ರತರಹದ ಸೋಂಕು ರೋಗ. ಇನ್‌ಫ್ಲೂಯೆಂಜಾ ನಿರ್ದಿಷ್ಟ ತೀವ್ರತರಹದ ಶ್ವಾಸಕೋಶದ ಸೋಂಕಾಗಿರುತ್ತದೆ. ಈ ರೋಗಕ್ಕೆ ಕಾರಣ ಕಣ್ಣಿಗೆ ಅಗೋಚರವಾದ ವೈರಸ್‌ಗಳು.

ಇವನ್ನು ಇನ್‌ಫ್ಲೂಯೆಂಜಾ ಎ ಮತ್ತು ಬಿ; ಪ್ಯಾರಾ ಇನ್‌ಫ್ಲೂಯೆಂಜಾ 1, 2, 3; ಮೊದಲಾದುವೆಂದು ಕರೆಯಲಾಗುತ್ತದೆ. ಈ ರೋಗ ವಿಶ್ವವ್ಯಾಪಿಯಾಗಿ ಹರಡಿದೆ. ಇದು ಒಮ್ಮೊಮ್ಮೆ ಸಾಂಕ್ರಾಮಿಕವಾಗಿ ಮತ್ತು ಕೆಲವೊಮ್ಮೆ ಪ್ರಪಂಚದಾದ್ಯಂತ (ಪಾಂಡೆಮಿಕ್) ಹರಡುತ್ತದೆ. ಕೊನೆಯದಾಗಿ, ವಿಶ್ವವ್ಯಾಪಿಯಾಗಿ 1968–70ರಲ್ಲಿ ಹಾಂಗ್‌ಕಾಂಗ್ ಇನ್‌ಫ್ಲೂಯೆಂಜಾ ಹರಡಿತ್ತು. ಇನ್‌ಫ್ಲೂಯೆಂಜಾ, ಸಾಂಕ್ರಾಮಿಕತೆಯ ಸ್ವಭಾವವೆಂದರೆ, ಇದ್ದಕ್ಕಿದ್ದಂತೆ ಮತ್ತು ಬಹಳ ಕ್ಷಿಪ್ರಗತಿಯಲ್ಲಿ ಹರಡುವುದು. ಇನ್‌ಫ್ಲೂಯೆಂಜಾ, ಎಲ್ಲ ವಯೋಮಾನದವರಲ್ಲೂ ಕಾಣಿಸಿಕೊಳ್ಳಬಲ್ಲದು.

ಇದರ ರೋಗ ಪರಿಪಕ್ವ ಅವಧಿ (ಇಂಕ್ಯುಬೇಷನ್ ಪೀರಿಯಡ್) ಬಹಳ ಅಲ್ಪಕಾಲಾವಧಿ– 24ರಿಂದ 72 ಗಂಟೆಗಳು. ಅದರಿಂದಾಗಿ ರೋಗ ಬಹಳ ವೇಗವಾಗಿ ಹರಡುತ್ತದೆ.

ಇನ್‌ಫ್ಲೂಯೆಂಜಾ, ಮುಖ್ಯವಾಗಿ ವ್ಯಕ್ತಿಯಿಂದ ವ್ಯಕ್ತಿಗೆ ತುಂತುರು ಸೋಂಕಿನ (ಡ್ರಾಪ್‌ಲೆಟ್ ಇನ್‌ಫೆಕ್ಷನ್)Droplet Infection ಮೂಲಕ ಹರಡುತ್ತದೆ. ಅತಿಯಾದ ಜನಸಾಂದ್ರತೆ ರೋಗ ಹರಡಲು ಸಹಾಯಕವಾಗುತ್ತದೆ.

**ರೋಗಲಕ್ಷಣಗಳು:**

ರೋಗದ ಲಕ್ಷಣಗಳು ಸಾಮಾನ್ಯವಾಗಿ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುತ್ತವೆ. ಆ ಲಕ್ಷಣಗಳೆಂದರೆ, ಜ್ವರ, ನಡುಕ, ಕೆಮ್ಮು, ನಿಶ್ಶಕ್ತಿ, ತಲೆನೋವು ಮತ್ತು ಬೆನ್ನಿನ ಭಾಗದಲ್ಲಿ ಮತ್ತು ಕೈಕಾಲುಗಳಲ್ಲಿ ತೀವ್ರವಾದ ನೋವು ಉಂಟಾಗುತ್ತದೆ.

ತೊಡಕುಗಳು ಉಂಟಾಗದಿದ್ದರೆ ರೋಗಿಯು 3ರಿಂದ 5 ದಿನಗಳಲ್ಲಿ ಚೇತರಿಸಿಕೊಳ್ಳುತ್ತಾನೆ. ಸಾಮಾನ್ಯವಾದ ತೊಡಕು, ಇನ್‌ಫ್ಲೂಯೆಂಜಾಯಿಂದ ನ್ಯೂಮೋನಿಯಾ ಉಂಟಾಗುತ್ತದೆ.

– ರೋಗಿಗೆ ಪೂರ್ಣ ವಿಶ್ರಾಂತಿಯನ್ನು ನೀಡಬೇಕು.

– ಬರಿಯ ದ್ರವ ಆಹಾರಗಳನ್ನಷ್ಟೇ ಕೊಡಬೇಕು.

– ತಲೆನೋವು, ಮೈಕೈ ನೋವುಗಳನ್ನು ಕಡಿಮೆ ಮಾಡಲು ವೈದ್ಯರ ಸಲಹೆ ಮೇರೆಗೆ ನೋವು ನಿವಾರಕಗಳನ್ನು ರೋಗಿಗೆ ಕೊಡಬೇಕು.

**3. ವೈರಲ್ ಹೆಪಟೈಟಿಸ್ (ಯಕೃತ್ ಉರಿಯೂತ ಕಾಮಾಲೆ)**

• ವೈರಲ್ ಹೆಪಟೈಟಿಸ್, ಒಂದು ಸಾಂಕ್ರಾಮಿಕ ರೋಗ. ಇದನ್ನು ಜಾಂಡೀಸ್ ಎಂತಲೂ ಕರೆಯುತ್ತಾರೆ. ಇದು ವೈರಸ್‌ನಿಂದ ಬರುತ್ತದೆ. ವೈರಸ್ ಜೀವಿ ಯಕೃತ್

ಅಥವಾ ಲಿವರ್‌ನಲ್ಲಿ ಸೇರಿ ಉರಿಯೂತ ಉಂಟು ಮಾಡುತ್ತದೆ. ಇದರಿಂದ, ರಕ್ತದಲ್ಲಿ ಪಿತ್ತ (bile) ಸೇರಿ ಹಳದಿ ಬಣ್ಣ ಬರುತ್ತದೆ. ಇದನ್ನೇ ಕಾಮಾಲೆ ಅಥವಾ ಜಾಂಡೀಸ್ ಎಂದು ಕರೆಯುವರು. ಅಲ್ಲದೆ, ವೈರಲ್ ಹೆಪಟೈಟಿಸ್ ಎಂತಲೂ ಕರೆಯುತ್ತಾರೆ.

ಕಾಮಾಲೆ ಅಥವಾ ಜಾಂಡೀಸ್, ಕಲುಷಿತಗೊಂಡ ಆಹಾರ ಅಥವಾ ನೀರಿನಿಂದ ಹರಡುತ್ತದೆ. ರೋಗಿಯು ವಿಸರ್ಜಿಸುವ ಮಲದ ಮೂಲಕ ವೈರಸ್‌ಗಳು ಹೊರ ಬೀಳುತ್ತವೆ. ಅದರಿಂದ, ನೀರು ಮತ್ತು ಆಹಾರ ಕಲುಷಿತಗೊಂಡು, ಸಾಂಕ್ರಾಮಿಕವಾಗಿ ಹರಡುತ್ತದೆ.

ರೋಗ, ನೇರವಾದ ಸಂಪರ್ಕದಿಂದಲೂ ಹರಡುತ್ತದೆ. ಆದುದರಿಂದ, ಒಂದೇ ಮನೆಯಲ್ಲಿ ವಾಸಿಸುವವರಲ್ಲಿ ಹೆಚ್ಚಿನ ರಿಸ್ಕ್ (ಗಂಡಾಂತರ) ಉಂಟಾಗುತ್ತದೆ. ವೈಯಕ್ತಿಕ ಶುಚಿತ್ವವನ್ನು ಪರಿಪಾಲಿಸದವರು ಜಾಂಡೀಸ್ ರೋಗಕ್ಕೊಳಗಾಗುವ ಸಂಭವ ಹೆಚ್ಚು.

**ರೋಗ ಪರಿಪಕ್ವ ಆಗುವ ಅವಧಿ:**

ಜಾಂಡೀಸ್‌ನ ರೋಗ ಪರಿಪಕ್ವ ಆಗುವ ಅವಧಿ ಸಾಮಾನ್ಯವಾಗಿ 20ರಿಂದ 35 ದಿನಗಳು.

ವೈರಲ್ ಹೆಪಟೈಟಿಸ್‌ನಲ್ಲಿ ಹಲವು ಪ್ರಕಾರಗಳಿವೆ. ಅವುಗಳೆಂದರೆ:

ಹೆಪಟೈಟಿಸ್ – A

ಹೆಪಟೈಟಿಸ್ – B

ಹೆಪಟೈಟಿಸ್ – C

ಹೆಪಟೈಟಿಸ್ – D

ಹೆಪಟೈಟಿಸ್ – E

–ಇವುಗಳಲ್ಲಿ ಹೆಪಟೈಟಿಸ್– A ಮತ್ತು ಹೆಪಟೈಟಿಸ್ E ರೋಗಗಳು ಬೇಗನೆ ಸಾಂಕ್ರಾಮಿಕವಾಗಿ ಹರಡುತ್ತವೆ.

ಇನ್ನುಳಿದ ರೋಗಗಳಾದ ಹೆಪಟೈಟಿಸ್– B, C ಮತ್ತು Dಗಳಲ್ಲಿ, ಹೆಪಟೈಟಿಸ್ B ರೋಗವು ಅಪಾಯಕಾರಿಯಾದದ್ದು.

ಇಲ್ಲಿ ನಾವು A ಮತ್ತು E ರೋಗಗಳ ಬಗ್ಗೆ ನೋಡೋಣ. B, C ಮತ್ತು D ರೋಗಗಳು ರಕ್ತದ ಮೂಲಕ ಹರಡುತ್ತದೆ.

ಸಾಂಕ್ರಾಮಿಕ ರೋಗದಂತೆ ಹರಡುವಲ್ಲಿ ಹೆಪಟೈಟಿಸ್ A ಮತ್ತು E ಗಳು ಪ್ರಸಿದ್ಧಿಯಾಗಿವೆ.

**ರೋಗಲಕ್ಷಣಗಳು:**

ರೋಗದ ಲಕ್ಷಣಗಳು ಒಂದೇ ರೀತಿಯದಾಗಿರುತ್ತವೆ. ಇಂಕ್ಯುಬೇಷನ್ ಅವಧಿ ಮುಗಿದ ನಂತರ, ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ದೇಹದ ರೋಗನಿರೋಧಕ ಶಕ್ತಿ ಚೆನ್ನಾಗಿದ್ದರೆ ರೋಗ ಬರುವುದಿಲ್ಲ, ರೋಗನಿರೋಧಕ ಶಕ್ತಿ ಕಡಿಮೆ ಇದ್ದರೆ ರೋಗ ಬರುತ್ತದೆ.

**ವೈರಲ್ ಹೆಪಟೈಟಿಸ್ ರೋಗ ಲಕ್ಷಣಗಳು ಯಾವುವೆಂದರೆ:**

1) ಸ್ವಲ್ಪಮಟ್ಟಿಗೆ ಚಳಿ, ಜ್ವರ ಬರುವುದು.

2) ಬೇಗನೆ ಆಯಾಸ ಉಂಟಾಗುತ್ತದೆ.

3) ನಿಶ್ಶಕ್ತಿ ಉಂಟಾಗುತ್ತದೆ.

4) ತಲೆನೋವು, ಮೈಕೈ ನೋವು ಇರುತ್ತದೆ.

5) ಹಸಿವು ಉಂಟಾಗುವುದಿಲ್ಲ.

6) ಮೂತ್ರ ದಟ್ಟ ಹಳದಿ ಬಣ್ಣದಿಂದ ಕೂಡಿರುತ್ತದೆ.

7) ದೇಹವೆಲ್ಲಾ ಹಳದಿ ಆಗುವುದು. ಕಣ್ಣುಗಳು ಮತ್ತು ನಾಲಿಗೆ ಹಳದಿ ಬಣ್ಣ ಕಾಣುವುದು.

8) ವಾಂತಿ ಉಂಟಾಗುವುದು.

9) ಕೆಲವೊಮ್ಮೆ ಭೇದಿಯು ಉಂಟಾಗುವುದು.

ಅನೇಕ ರೋಗಿಗಳು 3ರಿಂದ 6 ವಾರಗಳಲ್ಲಿ ಚೇತರಿಸಿಕೊಳ್ಳುತ್ತಾರೆ. ಆದರೆ, ಕೆಲವರಲ್ಲಿ ಯಕೃತ್ ಅಥವಾ ಲಿವರ್ ದೀರ್ಘಕಾಲದವರೆಗೆ ರೋಗಗ್ರಸ್ಥಗೊಳ್ಳುತ್ತದೆ.

**ಜಾಂಡೀಸ್ ರೋಗಿಯ ಆರೈಕೆ:**

1) ರೋಗಿ 2ರಿಂದ 3 ವಾರಗಳವರೆಗೂ ಪೂರ್ಣವಾದ ವಿಶ್ರಾಂತಿಯನ್ನು ಪಡೆಯಬೇಕು.

2) ರೋಗಿಗೆ ಪೌಷ್ಠಿಕ ಆಹಾರವನ್ನು ಕೊಡಬೇಕು.

3) ಎಣ್ಣೆಯಲ್ಲಿ ಕರಿದ ತಿಂಡಿ–ತಿನಿಸನ್ನು ಕೊಡಬಾರದು.

4) ಕೊಬ್ಬು ಇರುವ ಆಹಾರ ಪದಾರ್ಥಗಳನ್ನು ಕೊಡಬಾರದು. ಕೊಬ್ಬಿನ (ಫ್ಯಾಟ್) ಆಹಾರ ಪದಾರ್ಥಗಳಿಂದ ಪಚನ (ಜೀರ್ಣಗೊಳ್ಳುವುದು)ಕ್ಕೆ ತೊಂದರೆಯಾಗುತ್ತದೆ.

5) ಕಬ್ಬಿನ ಹಾಲು ಕುಡಿಯುವುದು ಒಳ್ಳೆಯದೆಂದು ಹೇಳುತ್ತಾರೆ. ಆದರೆ, ಕಲುಷಿತಗೊಂಡ ಕಬ್ಬಿನ ಹಾಲು ಹಾನಿಕಾರಕ.

6) ರೋಗಿಗೆ ಕುದಿಸಿ ಆರಿಸಿದ ನೀರನ್ನು ಮಾತ್ರ ಕುಡಿಯಲು ಕೊಡಬೇಕು.

7) ರೋಗಿಯ ಮಲ ಹಾಗೂ ವಾಂತಿಯನ್ನು ಬಹಳ ಜಾಗ್ರತೆಯಿಂದ ನಾಶಪಡಿಸಬೇಕು.

## 4. ಸೀತಾಳೆ ಸಿಡುಬು (ಗಣಜಲಿ) (Chicken Pox)

ಸೀತಾಳೆ ಸಿಡುಬು ಅಥವಾ ಚಿಕನ್‌ಪಾಕ್ಸ್, ತೀವ್ರವಾದ ಸೋಂಕುರೋಗವಾಗಿರುತ್ತದೆ. ಇದು ಬರಲು ವೈರಸ್ ಜೀವಿ ಕಾರಣ. ಇದರ ಹೆಸರು ವೈರಸೆಲ್ಲಾಜಾಸ್ಟರ್. ಇದರ ರೋಗಲಕ್ಷಣಗಳು ಕೆಲವರಲ್ಲಿ ಸೌಮ್ಯವಾಗಿರಬಹುದು.



ಮತ್ತೆ ಕೆಲವರಲ್ಲಿ ಉಗ್ರವಾಗಿರಬಹುದು. ಸೀತಾಳೆ ಸಿಡುಬು ಭಾರತದಲ್ಲಿ ಸಾಮಾನ್ಯವಾದ ರೋಗವಾಗಿರುತ್ತದೆ. ಇದು ಸಾಂಕ್ರಾಮಿಕವಾಗಿ ಅಥವಾ ಸ್ಥಾನಿಕ (ಎಂಡೆಮಿಕ್)ವಾಗಿ ಉಂಟಾಗಬಹುದು.

**ರೋಗಲಕ್ಷಣಗಳು:**

ಕೆಲವು ರೋಗಿಗಳಲ್ಲಿ ಕೆಲವು ದದ್ದುಗಳು ಕಂಡುಬಂದು, ಮಾಯವಾಗುವುದು. ಸ್ವಲ್ಪ ಜ್ವರವು ಇರಬಹುದು.

**ರೋಗ ಉಗ್ರವಾಗಿದ್ದರೆ:**

* ಜ್ವರ ಇರುತ್ತದೆ
* ಬೆನ್ನುನೋವು ಮತ್ತು ಚಳಿ ಬರುವುದು
* ಮೈಕೈಯಲ್ಲಿ ನೋವಿರುವುದು
* ಆಯಾಸವಿರುತ್ತದೆ
* ತ್ವಚೆ (ಮೈಚರ್ಮ)ಯಲ್ಲಿ ದದ್ದುಗಳು ಮೊದಲು ಎದೆಯ ಮೇಲ್ಭಾಗದಲ್ಲಿ ಹಾಗೂ ಹೊಟ್ಟೆಯ ಮೇಲೆ ಕಾಣಿಸಿಕೊಳ್ಳುತ್ತವೆ. ಅನಂತರ, ಮುಖದ ಮೇಲೂ ಕಾಣಿಸಿಕೊಳ್ಳುತ್ತವೆ. ಅಲ್ಲದೆ, ಕೊನೆಗೆ ಕೈ-ಕಾಲುಗಳ ಮೇಲೆ ದದ್ದುಗಳು ಕಂಡುಬರುತ್ತವೆ. ಎದೆ ಹಾಗೂ ಹೊಟ್ಟೆಯ ಮೇಲ್ಭಾಗದಲ್ಲಿ ಹೆಚ್ಚಾಗಿ ದದ್ದುಗಳು ಮೂಡುತ್ತವೆ. ಕೈಕಾಲುಗಳ ಮೇಲೆ ಕಡಿಮೆ ದದ್ದುಗಳು ಇರುತ್ತವೆ.
* ಸೀತಾಳೆ ಸಿಡುಬು ರೋಗದಲ್ಲಿ ದದ್ದುಗಳು ತುರಿಕೆಯಿಂದ ಕೂಡಿರಬಹುದು.
* ದದ್ದುಗಳು ಬಹುಬೇಗನೆ ಬದಲಾಗುತ್ತವೆ. ದದ್ದುಗಳು ದೊಡ್ಡದಾಗುತ್ತವೆ. ದದ್ದುಗಳ ಸುತ್ತಲೂ ಕೆಂಪು ಬಣ್ಣ ಕಾಣುತ್ತದೆ.
* ರೋಗಿಗೆ ಸ್ವಲ್ಪ ಕೆಮ್ಮು ಇರಬಹುದು. ಹಸಿವು ಮಂದವಾಗಿರಬಹುದು.
* ಕೆಲವೊಮ್ಮೆ ಸೀತಾಳೆ ಸಿಡುಬಿನಿಂದ ತೊಡಕುಗಳು ಉಂಟಾಗಬಹುದು. ವಯಸ್ಕರಲ್ಲಿ ತೊಡಕುಗಳು ಕಾಣುವುದು ಹೆಚ್ಚು.
* ಕೆಲವು ಸಲ ರೋಗಿ ನ್ಯುಮೋನಿಯಾದಿಂದ ನರಳಬಹುದು. ಇದರಿಂದ ಕಫ-ದಮ್ಮು ಬರಬಹುದು.

ಒಮ್ಮೆ ಸೀತಾಳೆಸಿಡುಬು ಬಂದು, ಬಳಲಿದ ನಂತರ, ರೋಗದಿಂದ ಮುಕ್ತವಾದ ನಂತರ ರೋಗ ನಿರೋಧಕತೆ ಜೀವನಪರ್ಯಂತ ಇರಬಹುದು.

**ಸೋಂಕಿನ ಮೂಲ:**

ಸೋಂಕಿನ ಮೂಲ ಸೀತಾಳೆ ಸಿಡುಬು ಹೊಂದಿರುವ ವ್ಯಕ್ತಿಯೇ ಆಗಿರುತ್ತಾನೆ. ವೈರಸ್, ರೋಗಿಯ ಮೂಗು ಮತ್ತು ಗಂಟಲಿನ ಸ್ರಾವಗಳಲ್ಲಿ ಮತ್ತು ಚರ್ಮದ ಗಾಯಗಳಲ್ಲಿ ಲೋಳೆಪೊರೆ ಮತ್ತು ರಕ್ತದಲ್ಲಿರುತ್ತದೆ.

ಸೀತಾಳೆ ಸಿಡುಬು ಮುಖ್ಯವಾಗಿ ಹತ್ತು ವರ್ಷದೊಳಪಟ್ಟ ಮಕ್ಕಳಲ್ಲಿ ಬರುವುದು ಹೆಚ್ಚು. ಈ ರೋಗವು ತುಂತುರು ಸೋಂಕಿನ DROPLET INFECTION ಮೂಲಕ ಹರಡುತ್ತದೆ. ರೋಗಿ ಉಪಯೋಗಿಸಿದ ಕಲುಷಿತ ವಸ್ತುಗಳಿಂದಲೂ ಸೋಂಕನ್ನು ಹರಡಬಲ್ಲದು. ರೋಗ ಪರಿಪಕ್ವ ಅವಧಿಯೆಂದರೆ 14ರಿಂದ 17 ದಿನಗಳು.

**ನಿಯಂತ್ರಣ/ತಡೆಗಟ್ಟುವಿಕೆ:**

ಸೀತಾಳೆ ಸಿಡುಬಿಗೆ ನಿರ್ದಿಷ್ಟ ಚಿಕಿತ್ಸೆಯೇನಿಲ್ಲ. ಸಾಮಾನ್ಯ ಪ್ರತಿಬಂಧಕ ಕ್ರಮಗಳೆಂದರೆ:

1) ಪ್ರಕರಣಗಳ ಬಗ್ಗೆ ಆರೋಗ್ಯ ಇಲಾಖೆಯವರಿಗೆ ವರದಿ ಮಾಡುವುದು.

2) ರೋಗಿಯನ್ನು ಪ್ರತ್ಯೇಕವಾದ ರೂಮಿನಲ್ಲಿರಿಸುವುದು.

3) ರೋಗಿ ಉಪಯೋಗಿಸಿದ ವಸ್ತುಗಳನ್ನು ಸೋಂಕು ನಿವಾರಣೆ ಮಾಡುವುದು.

**5. ದಡಾರ ಅಥವಾ ಮೀಸಲ್ಸ್**

ದಡಾರ ಅಥವಾ ಮೀಸಲ್ಸ್ ಅತಿ ಹೆಚ್ಚಿನ ಸೋಂಕು ಉಂಟು ಮಾಡುವ ವೈರಸ್ ರೋಗ. ಭಾರತದಲ್ಲಿ ಸಾಮಾನ್ಯ ಸಾಂಕ್ರಾಮಿಕ ರೋಗ ಮೀಸಲ್ಸ್. ಇದು ಮಕ್ಕಳಲ್ಲಿ ಕಾಣಿಸಿಕೊಳ್ಳುವುದು ಹೆಚ್ಚು. ಅಭಿವೃದ್ಧಿ ಆಗುತ್ತಿರುವ ದೇಶಗಳಲ್ಲಿ ದಡಾರ ಸ್ಥಾನಿಕ (ಎಂಡೆಮಿಕ್)ವಾಗಿ ಹಾಗೂ ಸಾಂಕ್ರಾಮಿಕವಾಗಿಯೂ ಕಾಣಿಸಿಕೊಳ್ಳಬಲ್ಲದು. ಈ ರೋಗವನ್ನು ತಡೆಗಟ್ಟಬಹುದು ಮತ್ತು ಮಕ್ಕಳಿಗೆ ಸಾಮೂಹಿಕವಾಗಿ ದಡಾರದ ಚುಚ್ಚುಮದ್ದನ್ನು ಕೊಡಿಸುವುದರಿಂದ ನಿಯಂತ್ರಿಸಬಹುದು. ತಾಯಿಯಿಂದ ಬಳುವಳಿಯಾಗಿ ಪಡೆದ ರೋಗನಿರೋಧಕ ಶಕ್ತಿಯಿಂದಾಗಿ, ಮಗುವಿಗೆ, ಮೊದಲ

ಆರು ತಿಂಗಳು ಆಗುವ ತನಕ ದಡಾರ ಬರುವುದಿಲ್ಲ. ದಡಾರದ ಉಪಟಳ ಆರು ತಿಂಗಳಿಂದ ಐದು ವರ್ಷದೊಳಗಿನ ಮಕ್ಕಳಲ್ಲಿ ಜಾಸ್ತಿ. ಹೆಣ್ಣು-ಗಂಡು ಮಕ್ಕಳು ಎನ್ನದೆ ಮಕ್ಕಳಲ್ಲಿ ರೋಗ ಕಾಣಿಸಿಕೊಳ್ಳುತ್ತದೆ.

**ರೋಗ ಹರಡುವಿಕೆ:**

ದಡಾರ ರೋಗಿಯ, ಬಾಯಲ್ಲಿ, ಮೂಗಿನಲ್ಲಿ ಮತ್ತು ಗಂಟಲ ಸ್ರವಿಕೆಯಲ್ಲಿ ವೈರಸ್‌ಗಳಿರುತ್ತವೆ. ರೋಗಿಯು ಸೀನಿದಾಗ, ಕೆಮ್ಮಿದಾಗ ಹೊರಗಿನ ಪರಿಸರಕ್ಕೆ ಸೇರುತ್ತವೆ. ರೋಗಾಣುಗಳು ಆರೋಗ್ಯವಂತ ವ್ಯಕ್ತಿಯ ದೇಹವನ್ನು ಉಸಿರಾಟದ ಮೂಲಕ ಪ್ರವೇಶಿಸಿ, ರೋಗಲಕ್ಷಣಗಳು ಹೊರಹೊಮ್ಮಿಸುತ್ತವೆ.

ಮುಖ್ಯವಾಗಿ ಆರೋಗ್ಯವಂತ ಮಗುವಿಗೆ ತುಂತುರು ಸೋಂಕು ಮೂಲಕ ದಡಾರ ಹರಡುತ್ತದೆ. ಅಲ್ಲದೆ, ದಡಾರ ರೋಗಿ ಉಪಯೋಗಿಸಿದ ಸೋಂಕಿನಿಂದ ಕೂಡಿದ ವಸ್ತುಗಳಿಂದಲೂ ಸೋಂಕು ಹರಡಬಹುದು.

ದಡಾರ ಬರುವ ಮೊದಲು ಅಂದರೆ, ನಾಲ್ಕು ದಿನಗಳ ಮೊದಲು ಮತ್ತು ಗಂದೆ (ರ್‍ಯಾಶ್)ಗಳು ಕಾಣಿಸಿಕೊಂಡ ಐದು ದಿನಗಳು ಸೋಂಕು ಉಗ್ರ ಸ್ವರೂಪದಲ್ಲಿರುವುದರಿಂದ, ಬೇರೆ ಮಕ್ಕಳಿಂದ ಮಗುವನ್ನು ಪ್ರತ್ಯೇಕವಾಗಿರಿಸುವುದು ಅಗತ್ಯ.

**ರೋಗ ಪರಿಪಕ್ವ ಆಗುವ ಅವಧಿ (ಇಂಕ್ಯುಬೇಷನ್ ಪೀರಿಯಡ್):**

ದಡಾರ ಪರಿಪಕ್ವ ಆಗುವ ಅವಧಿ ಸಾಮಾನ್ಯವಾಗಿ ರೋಗಲಕ್ಷಣಗಳು ಕಾಣಿಸಿಕೊಂಡ 10 ದಿವಸಗಳು.

**ರೋಗದ ಲಕ್ಷಣಗಳು:**

* ನೆಗಡಿ-ಶೀತ, ಕೆಮ್ಮು ಮತ್ತು ಮೂಗಿನಲ್ಲಿ ಸುರಿತ
* ಜ್ವರ, 38 ಡಿಗ್ರಿ ಸೆಂಟಿಗ್ರೇಡ್ (100.4 ಡಿಗ್ರಿ ಎಫ್) ಅಥವಾ ಅದಕ್ಕಿಂತಲೂ ಹೆಚ್ಚು
* ಸಿಂಬಳದ ಸೋರಿಕೆ
* ಕಣ್ಣುಗಳು ಕೆಂಪಗಾಗಿ, ಊದಿಕೊಂಡು, ಕಣ್ಣೀರು ಹರಿಯತೊಡಗುತ್ತದೆ
* ಬೆಳಕನ್ನು ನೋಡಲಾಗುವುದಿಲ್ಲ

* ದವಡೆ ಹಲ್ಲಿನ ಹತ್ತಿರ, ಕೆನ್ನೆಯ ಲೋಳ್ಪರೆಯ ಮೇಲೆ ಕಾಪ್ಲಿಕ್ ಚುಕ್ಕೆಗಳು ಕಾಣಿಸಿಕೊಳ್ಳುತ್ತವೆ. ಇವು ನೋಡಲು ಸಣ್ಣ ಸಣ್ಣ ಉಪ್ಪಿನ ಕಣಗಾತ್ರದ ಬಿಳಿಯ ಗುಳ್ಳೆಗಳಂತಿದ್ದು ಅವುಗಳ ಸುತ್ತ ಕೆಂಪಡರಿರುತ್ತದೆ. ದಡಾರ ಗುಳ್ಳೆಗಳು ಕಾಣಿಸಿಕೊಂಡ ನಂತರ, ಕಾಪ್ಲಿಕ್ ಚುಕ್ಕೆಗಳು ಮಾಯವಾಗುತ್ತವೆ. ಗುಳ್ಳೆಗಳು ಬತ್ತಲು ಆರಂಭವಾದೊಡನೆ ಜ್ವರ ಇದ್ದಕ್ಕಿದ್ದಂತೆ ಇಳಿದು ಹೋಗುತ್ತದೆ.

ಗಂಡಾಂತರ ಸಂಗತಿಗಳು (Risk Factors):

* ದಡಾರದ ವೈರಸ್ ತುಂತುರು ಗಾಳಿಯ ಮೂಲಕ ಸೋಂಕಿನ ಮಕ್ಕಳಿಂದ ಹರಡುತ್ತದೆ. ಆದುದರಿಂದ, ರೋಗ ನಿಯಂತ್ರಿಸುವಲ್ಲಿ, ರೋಗಿಯನ್ನು ಪ್ರತ್ಯೇಕವಾಗಿಡುವುದು ಅಗತ್ಯವಿಲ್ಲವೆಂದು ತಜ್ಞವೈದ್ಯರ ಅಭಿಪ್ರಾಯ.

* ದಡಾರದ ವಿರುದ್ಧ ಚುಚ್ಚುಮದ್ದನ್ನು ಕೊಡಿಸದಿದ್ದರೆ ಪ್ರತಿ ಮಗುವಿಗೂ ದಡಾರ ರೋಗ ಬರುತ್ತದೆ.


* ಎಳೆಯ ಮಕ್ಕಳಲ್ಲಿ ಮತ್ತು ಅಪೌಷ್ಠಿಕತೆಯನ್ನು ಹೊಂದಿರುವ ಮಕ್ಕಳಲ್ಲಿ ದಡಾರ ಬಹಳ ತೀವ್ರ ತೊಡಕನ್ನುಂಟು ಮಾಡುತ್ತದೆ.


**ದಡಾರದ ಚುಚ್ಚುಮದ್ದು ಯಾವಾಗ ಕೊಡಿಸಬೇಕು?**

ಮಗುವಿಗೆ 9 ತಿಂಗಳು ತುಂಬಿದ ನಂತರ, ಒಂದು ವರ್ಷ ತುಂಬುವ ಮೊದಲು ಕೊಡಿಸಬೇಕು.

**6. ರೇಬಿಸ್ (ನಾಯಿಹುಚ್ಚು)**

ರೇಬಿಸ್ ಅಥವಾ ನಾಯಿಹುಚ್ಚನ್ನು ಹೈಡ್ರೋಫೋಬಿಯಾ (ಜಲಭಯ) ಎಂತಲೂ ಕರೆಯುತ್ತಾರೆ. ಪ್ರಾಥಮಿಕವಾಗಿ ನಾಯಿಹುಚ್ಚು ಬಿಸಿರಕ್ತದ ಪ್ರಾಣಿಗಳಾದ ನಾಯಿಗಳು, ಬೆಕ್ಕುಗಳು, ತೋಳಗಳು, ನರಿ ಮುಂತಾದ ಪ್ರಾಣಿಗಳಿಂದ ಬರುವ ರೋಗವಾಗಿರುತ್ತದೆ. ಇದು ಮನುಷ್ಯನಿಗೆ, ಹುಚ್ಚು ಹಿಡಿದಿರುವ ಪ್ರಾಣಿಗಳು ಕಚ್ಚುವುದರಿಂದ, ನೆಕ್ಕುವುದರಿಂದ ಬರುತ್ತದೆ.



ರೇಬಿಸ್ ಅಥವಾ ನಾಯಿಹುಚ್ಚನ್ನು ಹೊಂದಿರುವ ಪ್ರಾಣಿಗಳ ಶರೀರದ ಸ್ರಾವಗಳಲ್ಲಿ, ಜೊಲ್ಲಿನಲ್ಲಿ ರೇಬಿಸ್ ವೈರಸ್‌ಗಳು ಇರುತ್ತವೆ. ಅಂತಹ ಪ್ರಾಣಿ, ಮನುಷ್ಯನನ್ನು ಪರಚಿದಾಗ, ಕಚ್ಚಿದಾಗ ರೇಬಿಸ್ ವೈರಸ್ ಗಾಯದ ಮೂಲಕ ಮನುಷ್ಯನ ದೇಹವನ್ನು ಪ್ರವೇಶಿಸುತ್ತವೆ.

ರೇಬಿಸ್ ಬರಲು ಕಾರಣ ರೋಗಕಾರಕ ಲಿಸ್ಸಾವೈರಸ್ ಟೈಪ್-1 (Lyssa Virus Type-1)

**ಸೋಂಕಿನ ಮೂಲ:**

ಭಾರತದಲ್ಲಿ ಶೇಕಡ 90ರಷ್ಟು ಪ್ರಕರಣಗಳಲ್ಲಿ ಹುಚ್ಚುನಾಯಿ ಕಡಿತವೇ ಕಾರಣವಾಗಿರುತ್ತದೆ. ಅಲ್ಲದೆ, ನರಿ ಮತ್ತು ತೋಳಗಳೂ ಸಹ ಸೋಂಕಿನ ಮೂಲವಾಗಿರುತ್ತವೆ.







**ಹರಡುವ ವಿಧಾನ:**

1) ಹುಚ್ಚು ಇರುವ ಪ್ರಾಣಿಗಳು ಕಚ್ಚುವುದರಿಂದ

2) ಮನುಷ್ಯನಲ್ಲಿ ಗಾಯಗಳಾಗಿರುವ ಭಾಗವನ್ನು ಪ್ರಾಣಿಗಳು ನೆಕ್ಕುವುದರಿಂದ

ದೇಹವನ್ನು ಪ್ರವೇಶಿಸಿದ ರೇಬಿಸ್ ವೈರಸ್ ನರಗಳು ಮತ್ತು ಮಿದುಳನ್ನು ತಲುಪಿ ರೋಗಕ್ಕೆ ಕಾರಣವಾಗುತ್ತದೆ.

**ಇಂಕ್ಯುಬೇಷನ್ ಪೀರಿಯಡ್ (ರೋಗ ಪರಿಪಕ್ವ ಆಗುವ ಅವಧಿ):**

ಸಾಮಾನ್ಯವಾಗಿ 1ರಿಂದ 3 ತಿಂಗಳುಗಳು.

ಹುಚ್ಚು ಇರುವ ಪ್ರಾಣಿ ಕಚ್ಚಿದ ಮನುಷ್ಯನನ್ನು ಆ್ಯಂಟಿರೇಬಿಸ್ ವ್ಯಾಕ್ಸೀನ್‌ನಿಂದ ಸಂರಕ್ಷಣೆಯನ್ನು ಮಾಡದಿದ್ದರೆ, ಆತನಲ್ಲಿ ರೋಗಲಕ್ಷಣಗಳು 2ರಿಂದ 8 ವಾರಗಳಲ್ಲಿ ಅಭಿವೃದ್ಧಿಗೊಳ್ಳುತ್ತವೆ.

**ಅಂತಹ ಲಕ್ಷಣಗಳೆಂದರೆ:**

- ತಲೆನೋವು
- ನುಂಗುವ ಸ್ನಾಯುಗಳಲ್ಲಿ ಸೆಡೆತ
- ಸನ್ನಿ ನಡುಕ (Convulsions and Delerium)
- ಶ್ವಾಸಕೋಶದ ಸ್ನಾಯುಗಳಿಗೆ ಲಕ್ವ ಹೊಡೆದಿರುವುದು

**ಹುಚ್ಚು ಹಿಡಿದಿರುವ ಪ್ರಾಣಿಯೆಂದು ಗುರ್ತಿಸುವುದು ಹೇಗೆ?**

ಹುಚ್ಚುನಾಯಿಯಲ್ಲಿ ನಡವಳಿಕೆ ಬದಲಾವಣೆಯಾಗಿರುವುದು ಕಾಣುತ್ತದೆ. ಅದು ತುಂಬಾ ಉಗ್ರರೂಪದಲ್ಲಿರಬಹುದು ಅಥವಾ ಮೌನದಿಂದ ಏಕಾಂಗಿಯಾಗಿರಬಹುದು. ನಾಯಿ ಬೊಗಳುವುದು ವ್ಯತ್ಯಾಸದಿಂದ ಕೂಡಿರುತ್ತದೆ. ಮತ್ತು ನಾಯಿ, ಮರದ ತುಂಡುಗಳನ್ನು ಅಥವಾ ಕಲ್ಲುಗಳನ್ನು ನುಂಗುತ್ತದೆ. ಆಹಾರ ಸೇವಿಸುವುದನ್ನು ತಿರಸ್ಕರಿಸುತ್ತದೆ ಮತ್ತು ಜ್ವರದಿಂದ ಕೂಡಿರುತ್ತದೆ. ನಾಯಿಯ ಬಾಯಿಂದ ಯಥೇಚ್ಚವಾಗಿ ಜೊಲ್ಲು ಸುರಿಯುತ್ತಿರುತ್ತದೆ. ಕಾಲುಗಳು ಪಾರ್ಶ್ವವಾಯುವಿಗೆ ತುತ್ತಾಗಿರುತ್ತವೆ.

ನಾಯಿ ಹುಚ್ಚಿನಿಂದ ಕೂಡಿದ ಬೆಕ್ಕು ಅವಿಶ್ರಾಂತ ಸ್ಥಿತಿಯನ್ನು ಹೊಂದಿರುವುದಲ್ಲದೆ, ಆಕ್ರಮಣಕಾರಿಯಾಗಿರುತ್ತದೆ. ಹಿಂದಕ್ಕೆ ಜಂಪ್ ಮಾಡುತ್ತದೆ. ಅದರ ಬಾಯಿಂದ ಯಥೇಚ್ಚವಾಗಿ ಜೊಲ್ಲು ಸುರಿಯುತ್ತಿರುತ್ತದೆ.

ಸಾಕುಪ್ರಾಣಿಗಳಿಗೆ ಕ್ರಮವಾಗಿ, ಸಕಾಲದಲ್ಲಿ ವ್ಯಾಕ್ಸಿನೇಷನ್ ಹಾಕಿಸುವುದರಿಂದ ರೇಬಿಸ್‌ನ್ನು ತಡೆಗಟ್ಟಬಹುದು.

**ವ್ಯಕ್ತಿಯನ್ನು ಪ್ರಾಣಿ ಕಚ್ಚಿದಾಗ ಏನು ಮಾಡಬೇಕು?**

- ಗಾಯವನ್ನು ಶುದ್ಧವಾದ ನೀರಿನಿಂದ, ಮೈ ಸೋಪನ್ನು ಉಪಯೋಗಿಸಿ ಚೆನ್ನಾಗಿ ತೊಳೆಯಬೇಕು.
- ಗಾಯಕ್ಕೆ ಆ್ಯಂಟಿ ಸೆಪ್ಟಿಕ್‌ನ್ನು ಹಚ್ಚಬೇಕು.
- ಟೆಟನಸ್ (ಧನುರ್ವಾಯು) ಬಾರದಂತೆ ರೋಗನಿರೋಧಕ ಚುಚ್ಚುಮದ್ದನ್ನು ಕೊಡಿಸಬೇಕು.
- ವ್ಯಕ್ತಿಯನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ದು ಆ್ಯಂಟಿರೇಬಿಸ್ ವ್ಯಾಕ್ಸಿನ್ ಕೊಡಿಸಬೇಕು.

– ಕಚ್ಚಿದ ಪ್ರಾಣಿಯನ್ನು ಐದು ದಿನಗಳವರೆಗೂ ಗಮನಿಸುತ್ತಿರಬೇಕು.

– ಪ್ರಾಣಿ ಜೀವಂತವಾಗಿ ಆರೋಗ್ಯವಾಗಿ, ಐದು ದಿನಗಳವರೆಗೂ ಉಳಿದರೆ ಕಚ್ಚಿಸಿಕೊಂಡ ವ್ಯಕ್ತಿಗೆ ಅಗತ್ಯವಿರುವಷ್ಟು ಮಾತ್ರ ವ್ಯಾಕ್ಸಿನ್ ಕೊಡಿಸಬೇಕು.

– ಪ್ರಾಣಿಯಲ್ಲಿ ರೇಬಿಸ್ ರೋಗದ ಲಕ್ಷಣಗಳು ಕಾಣಿಸಿಕೊಂಡರೆ ಅಥವಾ ಆ ಪ್ರಾಣಿ ಸತ್ತರೆ, ಕಚ್ಚಿಸಿಕೊಂಡ ವ್ಯಕ್ತಿ ವೈದ್ಯರು ತಿಳಿಸುವಷ್ಟು ದಿನ ಆ್ಯಂಟಿ ರೇಬಿಸ್ ವ್ಯಾಕ್ಸಿನ್‌ನನ್ನು ಕೊಡಿಸಿಕೊಳ್ಳಬೇಕು.

– ಕಚ್ಚಿದ ಪ್ರಾಣಿ ಕೊಲ್ಲಲ್ಪಟ್ಟರೆ ಅಥವಾ ತಪ್ಪಿಸಿಕೊಂಡಿದ್ದರೆ, ಕಚ್ಚಿಸಿಕೊಂಡ ವ್ಯಕ್ತಿ ಆ್ಯಂಟಿರೇಬಿಸ್ ವ್ಯಾಕ್ಸಿನ್‌ನನ್ನು ಕ್ರಮವಾಗಿ ತೆಗೆದುಕೊಳ್ಳಬೇಕು.

**ವಿಶೇಷ ಸೂಚನೆ:**

**ವ್ಯಕ್ತಿ ಆ್ಯಂಟಿ ರೇಬಿಸ್ ವ್ಯಾಕ್ಸಿನೇಷನ್ ಪಡೆಯುತ್ತಿರುವಾಗ, ಈ ಕೆಳಕಂಡವುಗಳನ್ನು ತಡೆಯಬೇಕು.**

* ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಆಯಾಸಗೊಳ್ಳಬಾರದು.
* ಮದ್ಯಪಾನ ಮತ್ತು ಧೂಮಪಾನವನ್ನು ಮಾಡಬಾರದು.
* ಮಸಾಲೆ ಆಹಾರ ಪದಾರ್ಥಗಳನ್ನು ಸೇವಿಸಬಾರದು.
* ರಾತ್ರಿಯ ವೇಳೆ ನಿದ್ರೆಗೆಡಬಾರದು.

ನಾಯಿಹುಚ್ಚು ಅಥವಾ ರೇಬಿಸ್‌ನಿಂದ ಕೂಡಿದ ನಾಯಿ ಅಥವಾ ಪ್ರಾಣಿಗಳನ್ನು ತಡಮಾಡದೆ ಸಾಯಿಸಬೇಕು.


**ಸಲಹೆ:**


ರೇಬಿಸ್ ಪ್ರಾಣಾಂತಿಕವಾದರೂ ಅದನ್ನು ತಡೆಗಟ್ಟಬಹುದು.

* ಎಲ್ಲ ಸಾಕುಪ್ರಾಣಿಗಳಿಗೂ ರೇಬಿಸ್ ಕಾಯಿಲೆ ಬರದಂತೆ ಚುಚ್ಚುಮದ್ದನ್ನು ಕೊಡಿಸಬೇಕು.
* ಹುಚ್ಚು ಎಂದು ಕಂಡು ಬಂದ ಪ್ರಾಣಿಯನ್ನು ಕೊಲ್ಲಬೇಕು.
* ಮಕ್ಕಳು, ಬೀದಿ ನಾಯಿಗಳು ಮತ್ತು ಬೆಕ್ಕುಗಳ ಜೊತೆ ಆಟವಾಡದಂತೆ ಜಾಗ್ರತೆ ವಹಿಸಬೇಕು.

* ಯಾವುದೇ ಪ್ರಾಣಿ ಕಚ್ಚಿದರೂ, ಕಚ್ಚಿದ ಭಾಗವನ್ನು ನೀರನ್ನು ಮತ್ತು ಮೈ ಸೋಪನ್ನು ಉಪಯೋಗಿಸಿ ತೊಳೆಯಬೇಕು. ಅನಂತರ, ಸಮೀಪದಲ್ಲಿರುವ ವೈದ್ಯರಲ್ಲಿ ತೋರಿಸಬೇಕು.

### 7. ಪೋಲಿಯೋ ಮೈಲೈಟಿಸ್






ಪೋಲಿಯೋ ಮೈಲೈಟಿಸ್ ವೈರಸ್‌ನಿಂದ ಬರುವ ರೋಗ. ಇದು ಸೋಂಕಿನ ವ್ಯಕ್ತಿಯಿಂದ ಆರೋಗ್ಯವಂತ ವ್ಯಕ್ತಿಗೆ, ರೋಗಿಯ ಮಲದಿಂದ, ನೀರು ಮತ್ತು ಆಹಾರ ಕಲುಷಿತಗೊಂಡಾಗ ಹರಡುತ್ತದೆ. ಈ ರೋಗ ಮಕ್ಕಳಲ್ಲಿ ಮತ್ತು ಹದಿಹರೆಯದವರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಅತಿ ಜನ ಸಾಂದ್ರತೆ, ನೈರ್ಮಲ್ಯದ ಕೊರತೆ ಮತ್ತು ನಿರೋಧಕ ಕಾರ್ಯಕ್ರಮ ಸರಿಯಾಗಿ ನಡೆಯದ ಪ್ರದೇಶಗಳಲ್ಲಿ ಪೋಲಿಯೋ ಮೈಲೈಟಿಸ್ ಸಾಂಕ್ರಾಮಿಕವಾಗಿ ಹರಡುತ್ತದೆ.

**ಈ ರೋಗ ಪರಿಪಕ್ವ ಆಗುವ ಅವಧಿ (ಇಂಕ್ಯುಬೇಷನ್ ಪೀರಿಯಡ್):**

7ರಿಂದ 14 ದಿನಗಳು.




**ರೋಗಲಕ್ಷಣಗಳು:**

- ಜ್ವರ
- ತಲೆನೋವು
- ಅತಿಸಾರ ಭೇದಿ ಮತ್ತು ವಾಂತಿ
- ಕೈಕಾಲುಗಳಲ್ಲಿ ನೋವಿನಿಂದ ಕೂಡಿದ ಸ್ನಾಯುಗಳ ಸೆಳೆತ
- ಕತ್ತು ಮತ್ತು ಬೆನ್ನಿನ ಭಾಗ ಬಿಗಿತಗೊಂಡಿರುವುದು

– ಲಕ್ವ, ಅಂಗವಿಕಲತೆ, ಕೈಕಾಲುಗಳು ವಿಶೇಷವಾಗಿ ಕಾಲುಗಳು ನಿಶ್ಯಕ್ತಗೊಳ್ಳುತ್ತವೆ ಅಥವಾ ಕಾಲುಗಳನ್ನು ಚಲಿಸಲು ಅಶಕ್ತರಾಗಿರುತ್ತಾರೆ (ಲಕ್ವ-ಪೆರಾಲಿಸಿಸ್)

– ಕೈಕಾಲುಗಳು ತೆಳ್ಳಗಾಗುತ್ತವೆ (WASTING) ಮತ್ತು ಅನಂತರ, ಮಗು ಅಂಗವೈಕಲ್ಯಕ್ಕೊಳಗಾಗುತ್ತದೆ.


ಪೋಲಿಯೋ ವೈರಸ್‌ಗಳು ನೇರವಾಗಿ ಮೆದುಳನ್ನು ಆಕ್ರಮಿಸಿ ರೋಗವನ್ನುಂಟು ಮಾಡಬಹುದು.

ಯಾವ ಮಗುವಿಗೂ ಪೋಲಿಯೋ ರೋಗ ಬರಬಾರದು. ಎಲ್ಲ ಮಕ್ಕಳಿಗೂ, ಪೋಲಿಯೋ ಡ್ರಾಪ್ಸ್ ಹಾಕಿಸುವುದರಿಂದ ರೋಗವನ್ನು ಖಂಡಿತ ತಡೆಗಟ್ಟಬಹುದು.

## 8. ಟ್ರಾಕೋಮ (Trachoma)

ಟ್ರಾಕೋಮ, ಬೇರೂರಿದ ಕಣ್ಣಿನ ಸೋಂಕು ರೋಗವಾಗಿರುತ್ತದೆ. ಇದು ಕ್ಲಮಿಡಿಯಾ ಟ್ರಕೋಮಾಟಿಸ್ ಎಂಬ ವೈರಸ್‌ನಿಂದ ಬರುತ್ತದೆ. ಸಕಾಲದಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆಯದಿದ್ದರೆ, ಟ್ರಾಕೋಮ ಸ್ಥಿತಿ ತಿಂಗಳುಗಟ್ಟಲೆ ಅಥವಾ ವರ್ಷಗಟ್ಟಲೆ ಉಳಿದು ಕುರುಡುತನ ಉಂಟುಮಾಡುತ್ತದೆ.

ಟ್ರಾಕೋಮ ರೋಗ ಬಂದಾಗ ಕಣ್ಣುಗುಡ್ಡೆಗಳು ಕೆಂಪಗಾಗುತ್ತವೆ. ರೆಪ್ಪೆಯ ಒಳಮುಖದಲ್ಲಿ ಕಣಕಣವಾಗಿ ಗುಳ್ಳೆಗಳಾಗುವುವು. ರೋಗಿಯ ಕಣ್ಣಿನೊಳಗೆ ಮರಳು ಇದ್ದಂತೆ ಭಾಸವಾಗುತ್ತದೆ. ಹೆಚ್ಚು ಪ್ರಕಾಶಮಾನವಾದ ಬೆಳಕನ್ನು ನೋಡಲಾಗುವುದಿಲ್ಲ. ಕಣ್ಣಿನಲ್ಲಿ ನೀರು ಸೋರುವಿಕೆ, ರೆಪ್ಪೆಗಳ ತೂಕವು ಹೆಚ್ಚಾಗುವುದು. ಕೊನೆಗೆ, ಪಾರದರ್ಶಕ ಪಟಲದ ಮೇಲೆ ಬಿಳಿ ಚುಕ್ಕೆ ಕಾಣಿಸಿಕೊಳ್ಳುತ್ತದೆ. ಇಂತಹ ಸ್ಥಿತಿಯಲ್ಲಿ ಸೂಕ್ತ ಚಿಕಿತ್ಸೆಯನ್ನು ನೇತ್ರ ತಜ್ಞವೈದ್ಯರಿಂದ ಪಡೆಯದಿದ್ದರೆ, ಕಣ್ಣುಗುಡ್ಡೆಯ ಪಾರದರ್ಶಕ ಪಟಲಕ್ಕೆ ಹಾನಿಯಾಗಿ, ರೆಪ್ಪೆಯ ಕೂದಲುಗಳು ಒಳಗಡೆ ತಿರುಚಿಕೊಂಡು, ನಿರಂತರವೂ ಪಾರದರ್ಶಕ ಪಟಲವನ್ನು ಉಜ್ಜುವುದರಿಂದ, ದೃಷ್ಟಿ ಮಾಂದ್ಯ ಉಂಟಾಗುತ್ತದೆ.



ಭಾರತದಲ್ಲಿ ಪಂಜಾಬ್, ರಾಜಾಸ್ತಾನ ಮತ್ತು ಉತ್ತರಪ್ರದೇಶಗಳಲ್ಲಿ

ಸಾಮಾನ್ಯವಾಗಿ ಟ್ರಾಕೋಮ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಕುರುಡುತನ ಉಂಟಾಗಲು ಟ್ರಾಕೋಮ ರೋಗ ಸಹ ಕಾರಣವಾಗಿರುತ್ತದೆ.

**ಹರಡುವ ವಿಧಾನ:**

ಟ್ರಾಕೋಮ ರೋಗ, ರೋಗಿಯಿಂದ, ಆರೋಗ್ಯವಂತ ವ್ಯಕ್ತಿಗೆ (1) ಪ್ರತ್ಯಕ್ಷ ಅಥವಾ ಪರೋಕ್ಷ ಸಂಪರ್ಕದಿಂದ.

(2) ಟ್ರಾಕೋಮ ರೋಗಿಯ ಕಣ್ಣಿನ ಸುರಿತದಿಂದ ವಸ್ತುಗಳು ಕಲುಷಿತಗೊಳ್ಳುವುದರಿಂದ, ಉದಾ.: ಮನೆಯಲ್ಲಿ ಎಲ್ಲರು ಒಂದೇ ಟವೆಲ್ ಹಾಗೂ ಬೆಡ್‌ಷೀಟ್‌ಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುವುದರಿಂದ ರೋಗ ಹರಡಲು ಕಾರಣವಾಗುತ್ತದೆ.

(3) ಟ್ರಾಕೋಮ ರೋಗಿಯ ಕಣ್ಣಿನಿಂದ ಸುರಿತ ಉಂಟಾಗುತ್ತದೆ. ಆ ಸುರಿತದ ಮೇಲೆ ಕೂತ ನೊಣಗಳು ಸಹ ರೋಗವನ್ನು ಹರಡಬಲ್ಲವು.

(4) ಧೂಳು, ಕಸ, ಹೊಗೆ ಮತ್ತು ಹಳ್ಳಿಯ ಕೆರೆಗಳ ಕಲುಷಿತ ನೀರಿನಿಂದಲೂ ಹಾಗೂ ಸೂರ್ಯನ ತೀಕ್ಷ್ಣ ಬೆಳಕು ಸಹ ರೋಗದ ತೀವ್ರತೆಯನ್ನು ಉಲ್ಬಣಗೊಳಿಸುತ್ತದೆ.

**ರೋಗ ಪರಿಪಕ್ವ ಆಗುವ ಅವಧಿ (ಇಂಕ್ಯುಬೇಷನ್ ಪೀರಿಯಡ್):**

ಟ್ರಾಕೋಮ ರೋಗ ಪರಿಪಕ್ವ ಆಗುವ ಅವಧಿ 5ರಿಂದ 12 ದಿನಗಳಾಗಿರುತ್ತವೆ.

**ರೋಗಲಕ್ಷಣಗಳು:**

1) ರೋಗಿಯ ಕಣ್ಣುಗಳಲ್ಲಿ ತುರಿಕೆ ಮತ್ತು ಕಣ್ಣಿನ ರೆಪ್ಪೆಗಳ ಕೆಳಗಡೆ ಮರಳಿನ ಕಣಗಳಿರುವಂತೆ ಭಾಸವಾಗುತ್ತದೆ.
2) ಕಣ್ಣುಗಳಿಂದ ಅಂಟು ಅಂಟಾದ ಸುರಿತ ಉಂಟಾಗುತ್ತದೆ.
3) ಕಣ್ಣುಗಳು ಕೆಂಪಗಾಗುವುದು.
4) ಕಣ್ಣುಗಳ ರೆಪ್ಪೆಗಳು ಭಾರವಾಗುವುದು.
5) ಕಣ್ಣುಗಳ ರೆಪ್ಪೆಯ ಕೂದಲು ವಿಕಾರಗೊಳ್ಳುವುದು.
6) ಕಣ್ಣಿನ ಪಾರದರ್ಶಕ ಪಟಲದ ಮೇಲೆ ಬಿಳಿ ಚುಕ್ಕೆಗಳು ಉಂಟಾಗುತ್ತವೆ.

**ನಿಯಂತ್ರಣ ಹೇಗೆ?**

1) ಪ್ರತಿದಿನ ಶುದ್ಧವಾದ ನೀರಿನಿಂದ ಕಣ್ಣುಗಳನ್ನು ತೊಳೆದುಕೊಳ್ಳಬೇಕು.


2) ನೇತ್ರ ವೈದ್ಯರ ಸಲಹೆ ಮೇರೆಗೆ ಕಣ್ಣಿನ ಮುಲಾಮನ್ನು ಹಚ್ಚಬೇಕು.

3) ವೈಯಕ್ತಿಕ ಆರೋಗ್ಯ ನಿಯಮಗಳನ್ನು ಪ್ರತಿಯೊಬ್ಬರು ತಪ್ಪದೆ ಪಾಲಿಸಬೇಕು.

4) ನೊಣಗಳ ನಾಶಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು.

**9. ಮೆದುಳು ಜ್ವರ**

ಮೆದುಳು ಜ್ವರವು ವೈರಸ್‌ನಿಂದ ಉಂಟಾಗುವ ರೋಗ. ಈ ವೈರಸ್‌ನ ಹೆಸರು ಆರ್ಬೋವೈರಸ್ ಎಂದು. ಈ ರೋಗವನ್ನು ಜ್ಯಾಪನೀಸ್ ಎನ್ಸೆಫಲೈಟಿಸ್ (Japanese Encephalitis) ಎಂದು ಕರೆಯುತ್ತಾರೆ.



ವೈರಸ್‌ಗಳು ಪಾರಿವಾಳ, ಕೆರೆಯ ಕೊಕ್ಕರೆ, ಎಮ್ಮೆ ಕೊಕ್ಕರೆ, ಹಂದಿ ಹಾಗೂ ಬಾತುಕೋಳಿಗಳ ಮೂಲಕ ಪ್ರಸರಣಗೊಳ್ಳುತ್ತವೆ. ವೈರಸ್‌ಗಳು ವಿಭಜನೆ ಹೊಂದಿ ಹೆಚ್ಚಾಗುತ್ತವೆ. ಹಂದಿಯು ಸ್ವತಃ ರೋಗದಿಂದ ನರಳುವುದಿಲ್ಲ. ಹೀಗಾಗಿ ಹಂದಿಯನ್ನು ವೈರಸ್ ವರ್ಧಕ ಅತಿಥಿ ಎಂದು ಕರೆಯಲಾಗುತ್ತದೆ.

**ಮೆದುಳು ಜ್ವರ ರೋಗವು ಹೇಗೆ ಹರಡುತ್ತದೆ?**

ಕ್ಯೂಲೆಕ್ಸ್ ಜಾತಿಯ ಹೆಣ್ಣು ಸೊಳ್ಳೆ (ಅದರಲ್ಲೂ ವಿಶೇಷವಾಗಿ ವಿಷ್ಣುಯಿ ಎಂಬ ಗುಂಪಿನ ಹೆಣ್ಣು ಸೊಳ್ಳೆಗಳು) ಈ ರೋಗದ ವೈರಸ್‌ನ ಸೋಂಕನ್ನು ಹೊಂದಿದ ಹಂದಿಗಳನ್ನು ಕಚ್ಚಿ ರಕ್ತ ಹೀರಿದಾಗ, ಈ ವೈರಸ್‌ಗಳು ಸೊಳ್ಳೆಗಳ ದೇಹವನ್ನು ಸೇರಿ 9ರಿಂದ 12 ದಿನಗಳಲ್ಲಿ ವೃದ್ಧಿ ಹೊಂದಿ, ಅನಂತರ, ಸೋಂಕು ಹೊಂದಿದ ಸೊಳ್ಳೆಯು ಆಕಸ್ಮಿಕವಾಗಿ ಮನುಷ್ಯನನ್ನು ಕಚ್ಚಿದಾಗ, ಅಂತಹವರಲ್ಲಿ 5ರಿಂದ 15 ದಿನಗಳ ಅಂತರದಲ್ಲಿ ರೋಗಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

ರೋಗಲಕ್ಷಣಗಳು:

1) ಆರಂಭದಲ್ಲಿ : ಜ್ವರ, ತಲೆನೋವು ಮತ್ತು ನಿಶ್ಶಕ್ತಿ ಕಾಣಿಸಿಕೊಳ್ಳುತ್ತದೆ. ಈ ಬಾಧೆಯು 1ರಿಂದ 6 ದಿನಗಳವರೆಗೆ ಇರುತ್ತದೆ.

2) ಮೆದುಳಿನ ಸೋಂಕು ಉಲ್ಬಣ ಸ್ಥಿತಿ: ಈ ಹಂತದಲ್ಲಿ ವಿಪರೀತ ಜ್ವರ, ತಲೆನೋವು, ಕತ್ತಿನ ಬಿಗಿತ, ತಲೆಸುತ್ತುವಿಕೆ ಹಾಗೂ ಜ್ಞಾನ ತಪ್ಪುವುದು, ಮೈನಡುಕ –ಫಿಟ್ಸ್ ಕಂಡುಬರುವುದು.

3) ಅಂತಿಮ ಸ್ಥಿತಿ: ತೀವ್ರಗತಿಯಲ್ಲಿರುವ ನಾಡಿಮಿಡಿತವು ನಿಧಾನಗೊಳ್ಳುತ್ತದೆ. ಜ್ವರ ಕಡಿಮೆಯಾಗಿ, ಮೈನಡುಕ ಆರಂಭವಾಗಿ ಸಂಪೂರ್ಣ ಜ್ಞಾನ ತಪ್ಪುತ್ತದೆ.

ಸಾಮಾನ್ಯವಾಗಿ ಕಾಯಿಲೆಯು ಉಲ್ಬಣಗೊಂಡಾಗ ಮೆದುಳು ಊತಕ್ಕೊಳಗಾಗುತ್ತದೆ. ಸರಿಯಾದ ಚಿಕಿತ್ಸೆಯನ್ನು ಸಕಾಲದಲ್ಲಿ ಕೊಡಿಸದಿದ್ದರೆ, ಸಾವು ಉಂಟಾಗಬಹುದು.

**ಮೆದುಳು ಜ್ವರ ಹರಡುವ ಕಾಲ ಯಾವುದು?**

ಈ ರೋಗವು ಹೆಚ್ಚಾಗಿ ಮಳೆಗಾಲದ ನಂತರ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಏಕೆಂದರೆ, ಮಳೆಗಾಲದ ನಂತರ ಗದ್ದೆ–ಬಯಲುಗಳಲ್ಲಿ ಹೆಚ್ಚಾಗಿ ನೀರು ನಿಂತು, ಅಂತಹ ಜಾಗಗಳಲ್ಲಿ ಸೊಳ್ಳೆಗಳು ಉತ್ಪತ್ತಿಯಾಗಿ ರೋಗ ಹರಡಲು ಕಾರಣವಾಗುತ್ತದೆ.

**ಈ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಯಾವುವು?**

1) ರೋಗಲಕ್ಷಣಗಳು ಕಂಡು ಬಂದ ಕೂಡಲೇ, ತಡಮಾಡದೆ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಸರ್ಕಾರಿ ಆಸ್ಪತ್ರೆಗೆ ರೋಗಿಯನ್ನು ಕರೆದೊಯ್ದು ಸೂಕ್ತ ಚಿಕಿತ್ಸೆಯನ್ನು ಕೊಡಿಸಬೇಕು.

2) ಹಂದಿಗಳನ್ನು ಜನರು ವಾಸ ಮಾಡುವ ಜಾಗದಿಂದ ಕನಿಷ್ಠ 3 ಕಿಲೋಮೀಟರ್ ದೂರಕ್ಕೆ ಸ್ಥಳಾಂತರಿಸಬೇಕು.

3) ರೋಗವಾಹಕ ಸೊಳ್ಳೆಗಳ ನಿಯಂತ್ರಣಕ್ಕೆ ಸಂಜೆ ವೇಳೆ (ಸೂರ್ಯ ಮುಳುಗುವಾಗ) ಕೀಟನಾಶಕ ಸಿಂಪಡಿಸುವಿಕೆ ಕಾರ್ಯವನ್ನು ಮನೆಗಳ ಸುತ್ತಮುತ್ತಲಿನ ಬೇಲಿ, ಗಿಡಗಳು ಮತ್ತು ಪೊದೆಗಳಲ್ಲಿ ಕೈಗೊಳ್ಳುವುದರಿಂದ ಸೊಳ್ಳೆಗಳ ಸಾಂದ್ರತೆಯನ್ನು ಸಾಕಷ್ಟು ಮಟ್ಟಿಗೆ ನಿಯಂತ್ರಿಸಬಹುದು.

4) ಹಂದಿ ಮತ್ತು ಜಾನುವಾರು ಕೊಟ್ಟಿಗೆಗಳಿಗೆ ಕೀಟನಾಶಕಗಳನ್ನು ಸಿಂಪಡಿಸಬೇಕು.

5) ಹಂದಿಗೂಡುಗಳಿಗೆ ಸೊಳ್ಳೆ ನಿರೋಧಕ ಜಾಲರಿಗಳನ್ನು ಅಳವಡಿಸುವುದು.

6) ಸಂಜೆ ವೇಳೆಯಲ್ಲಿ ಮಕ್ಕಳು ಮೈತುಂಬಾ ಬಟ್ಟೆ ಧರಿಸಿ ಓಡಾಡುವುದು ಹಾಗೂ ಮಕ್ಕಳು ಮುಸ್ಸಂಜೆಯಲ್ಲಿ ಮನೆಯ ಹೊರಗಿನ ಚಟುವಟಿಕೆಗಳನ್ನು ಆದಷ್ಟೂ ಕಡಿಮೆ ಮಾಡುವುದು.

7) ಮಕ್ಕಳನ್ನು ಮನೆಯ ಹೊರಗಡೆ ಅಥವಾ ಜಾನುವಾರಗಳ ಹತ್ತಿರ ಖಂಡಿತ ಮಲಗಿಸಬಾರದು.

8) ಮಲಗುವಾಗ ತಪ್ಪದೇ ಸೊಳ್ಳೆ ಪರದೆಗಳನ್ನು ಉಪಯೋಗಿಸುವುದು ಹಾಗೂ ಸೊಳ್ಳೆ ಕಡಿತದಿಂದ ಪಾರಾಗಲು ಸಂಜೆ ವೇಳೆ ಸಹ ಸೊಳ್ಳೆ ನಿರೋಧಕ ಬತ್ತಿಗಳನ್ನು ಉರಿಸುವುದು, ಹಸಿ ಬೇವಿನ ಸೊಪ್ಪಿನ ಹೊಗೆಯನ್ನು ಹಾಕುವುದು.

9) ಗದ್ದೆ ಬಯಲು ಮುಂತಾದ ಪ್ರದೇಶಗಳಲ್ಲಿ ನೀರು ನಿಂತಿರುವ ಜಾಗಗಳಲ್ಲಿ ಲಾರ್ವಾಹಾರಿ ಮೀನುಗಳನ್ನು ಬಿಡುವುದು.

10) ಬೇವಿನ ಮಿಶ್ರಣವಿರುವ ಗೊಬ್ಬರವನ್ನೇ ಭತ್ತದ ಗದ್ದೆಗಳಲ್ಲಿ ಉಪಯೋಗಿಸುವುದರಿಂದ, ಸೊಳ್ಳೆಗಳು ಗದ್ದೆ ಬಯಲುಗಳಲ್ಲಿ ಉತ್ಪತ್ತಿಯಾಗುವುದನ್ನು ತಡೆಗಟ್ಟಬಹುದು.

**10. ಮಂಪ್ಸ್ (ಗದ್ದಬಾವು, ಮಂಗಬಾವು)**

ಮಂಪ್ಸ್, ಒಂದು ತೀವ್ರ ಸೋಂಕಿನ ರೋಗ. ಇದು ವೈರಸ್‌ನಿಂದ ಉಂಟಾಗುತ್ತದೆ. ಮಂಪ್ಸ್‌ನ್ನು ಕನ್ನಡದಲ್ಲಿ, ಗದ್ದಬಾವು, ಮಂಗಬಾವು, ಗದ್ದಕಟ್ಟು, ಕೆತ್ತಡೆ, ಕೆನ್ನೆ ಬೀಗು ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಮಂಗಬಾವು ರೋಗಕ್ಕೆ ತುತ್ತಾದ ವ್ಯಕ್ತಿಯ ಎರಡು ಕಪಾಳಗಳು ಎದ್ದುಕಾಣುವಂತೆ ಊದಿಕೊಂಡಿರುತ್ತದೆ. ರೋಗಿಯ ಕೆನ್ನೆಗಳ ಹಿಂಬದಿಯಲ್ಲಿ, ಕಿವಿಗಳಿಂದ ಸ್ವಲ್ಪವೇ ಕೆಳಗಿರುವ ಪೆರೋಟಿಡ್ ಗ್ರಂಥಿಗಳೆಂಬ ಲಾಲಾಗ್ರಂಥಿಗಳ ಉರಿಯೂತದಿಂದ ಊತವು ಉಂಟಾಗುತ್ತದೆ. ಪೆರೋಟಿಡ್ ಎಂಬ ಹೆಸರು ಈ ಲಾಲಾಗ್ರಂಥಿಗೆ ಬರಲು ಅದಿರುವ ಸ್ಥಳವೇ ಕಾರಣ. ಗ್ರೀಕ್ ಭಾಷೆಯಲ್ಲಿ ಪೆರೋಟಿಡ್ ಎಂದರೆ 'ಕಿವಿಯ ಸುತ್ತಮುತ್ತ' ಎಂಬ ಅರ್ಥವಿದೆ. ಮಂಪ್ಸ್‌ನ್ನು, ಅನೇಕ ವೈದ್ಯರು ಪೆರೋಟೈಟಿಸ್ ಎಂಬ ಹೆಸರಿನಿಂದ ಕರೆಯುತ್ತಾರೆ.

ಈ ಕಾಯಿಲೆ ಬಂದಿರುವವರು ದವಡೆಗಳನ್ನು ಆಡಿಸುವಾಗ ಅವುಗಳ ಸುತ್ತಮುತ್ತ ವಿಪರೀತ ನೋವು ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಮಾತನಾಡಲು ಕಷ್ಟವಾಗುತ್ತದೆ. ರೋಗಿಯು ಅಸ್ಪಷ್ಟವಾಗಿ ಮಾತನಾಡುವುದರಿಂದಲೇ 'ಮಂಪ್ಸ್' ಎಂಬ ಹೆಸರು ಬಂದಿದೆ.

**ರೋಗಕಾರಕ:**

ಪ್ಯಾರಾಮಿಕ್ಸೋ ವೈರಸ್‌ಗಳ ಗುಂಪಿಗೆ ಸೇರಿರುವ ಮಿಕ್ಸೋ ವೈರಸ್, ಪೆರೋಟೈಟಿಡಿಸ್ ಎಂಬ ಅತಿ ಸಣ್ಣ ವೈರಸ್‌ನಿಂದ ಮಂಪ್ಸ್ ಉಂಟಾಗುತ್ತದೆ.

**ಸೋಂಕಿನ ಮೂಲ:**

ಮಂಪ್ಸ್ ಅಥವಾ ಮಂಗಬಾವಿನಿಂದ ಕೂಡಿರುವ ರೋಗಿಯೇ ಸೋಂಕಿನ ಮೂಲವಾಗಿರುತ್ತಾನೆ.

ವ್ಯಕ್ತಿಯೊಬ್ಬನು, ಮಂಪ್ಸ್‌ನಿಂದ ಬಳಲುತ್ತಿರುವ ರೋಗಿಯ ಕೆಮ್ಮು ಮತ್ತು ಸೀನುಗಳ ಮೂಲಕ ವೈರಸ್‌ನ್ನು ಪಡೆಯುತ್ತಾನೆ.

ಕೆನ್ನೆಯ ಬಾವು ಕಾಣಿಸಿಕೊಳ್ಳುವುದಕ್ಕೆ ಎರಡು ದಿನಗಳ ಮೊದಲೇ ರೋಗಿಯು ತನ್ನ ಜೊಲ್ಲಿನಲ್ಲಿ ಮಂಪ್ಸ್ ವೈರಸ್‌ಗಳನ್ನು ಸ್ರವಿಸುತ್ತಿರುತ್ತಾನೆ. ಅಲ್ಲದೆ, ಬಾವು ಕಡಿಮೆಯಾದ ನಂತರವೂ, ಸುಮಾರು ಒಂದು ವಾರದವರೆಗೆ ವೈರಸ್‌ಗಳು ಸ್ರವಿಸಲ್ಪಡುತ್ತವೆ.

ರೋಗ ಪರಿಪಕ್ವ ಆಗುವ ಅವಧಿ (ಇನ್‌ಕ್ಯುಬೇಶನ್ ಪೀರಿಯಡ್) 2ರಿಂದ 3 ವಾರಗಳಾಗಿರುತ್ತವೆ.

**ರೋಗಲಕ್ಷಣಗಳು:**

- ಸೌಮ್ಯ ಸ್ವರೂಪದ ಜ್ವರ
- ಗಂಟಲುಬೇನೆ
- ಮೈನಡುಕ

– ಬಾಯಿ ತೆರೆಯಲು ನೋವು ಮತ್ತು ಬಿಗಿತವಿರುತ್ತದೆ. ತೀವ್ರತರಹದ ಮಂಗಬಾವುನಲ್ಲಿ, ಜ್ವರದ ಜೊತೆಗೆ ತಲೆನೋವು ಇರುತ್ತದೆ. ಊತ ನಿಧಾನವಾಗಿ ಕಡಿಮೆಯಾಗುತ್ತದೆ. ಅಂದರೆ, 1ರಿಂದ 2 ವಾರಗಳ ನಂತರ ಬಾವು ಕಡಿಮೆಯಾಗುತ್ತದೆ.

ಊತ ಕಡಿಮೆಯಾಗಿ, ಮಕ್ಕಳು ಚೇತರಿಸಿಕೊಳ್ಳುವ ತನಕ ಮನೆಯಲ್ಲೇ ವಿಶ್ರಾಂತಿ ಪಡೆಯುತ್ತಿರಬೇಕು. ಶಾಲೆಗೆ ಕಳಿಸಬಾರದು.

ಮಂಪ್ಸ್, 5ರಿಂದ 10 ವರ್ಷದ ವಯೋಮಾನದವರಲ್ಲಿ ಕಾಣಿಸಿಕೊಳ್ಳುವುದು ಸಾಮಾನ್ಯ. ಗಂಡು-ಹೆಣ್ಣು ಮಕ್ಕಳಿಬ್ಬರಲ್ಲೂ ಇದು ಕಾಣಿಸಿಕೊಳ್ಳಬಹುದು.

**ತಡೆಗಟ್ಟುವುದು:**

ಮಂಪ್ಸ್, ತಡೆಗಟ್ಟಬಹುದಾದ ಕಾಯಿಲೆಯಾಗಿರುತ್ತದೆ. ಮಂಪ್ಸ್ ವಿರುದ್ಧವಾಗಿ ಈಗ ವ್ಯಾಕ್ಸಿನ್ ಲಭ್ಯವಿದೆ.

**11. ಚಿಕುನ್‌ಗುನ್ಯಾ ಜ್ವರ**

ಚಿಕುನ್‌ಗುನ್ಯಾ ರೋಗವು ಏಡಿಯಸ್ ಈಜಿಪ್ಟಿ ಎಂಬ ಸೊಳ್ಳೆ ಕಚ್ಚುವುದರಿಂದ ಹರಡುತ್ತದೆ. ಇದು ಒಂದು ವೈರಸ್‌ನಿಂದ ಉಂಟಾಗುವ ಅನಾರೋಗ್ಯ.

ಚುಕುನ್‌ಗುನ್ಯಾ ವೈರಸ್‌ನ್ನು ಮತ್ತು ಸೊಳ್ಳೆಗಳನ್ನು ಬೇರ್ಪಡಿಸಿದ್ದು, 1952-53ರಲ್ಲಿ ಟಾಂಜಾನಿಯಲ್ಲಿ ರೋಗ ಸಾಂಕ್ರಾಮಿಕವಾಗಿ ಹರಡಿದಾಗ ಚಿಕುನ್‌ಗುನ್ಯಾ, ಸ್ಥಳೀಯ ಪದ. ಅದರ ಅರ್ಥ 'ದ್ವಿಗುಣಗೊಳ್ಳುವುದು' ಎಂದು. ವೈರಸ್, ಆಫ್ರಿಕಾದ ಕೆಲವು ಪ್ರದೇಶಗಳಲ್ಲಿ, ಭಾರತ ಮತ್ತು ಏಷ್ಯಾದ ಅನೇಕ ಪ್ರದೇಶಗಳಲ್ಲಿರುತ್ತದೆ. 1963-64ರಲ್ಲಿ ಈ ರೋಗ ಕೋಲ್ಕತ್ತಾದಲ್ಲಿ ಸಾಂಕ್ರಾಮಿಕವಾಗಿ ಹರಡಿತ್ತು. 1965ರಲ್ಲಿ ಚೆನ್ನೈಯಲ್ಲಿ ಚಿಕುನ್‌ಗುನ್ಯಾ ಸಾಂಕ್ರಾಮಿಕವಾಗಿ ಹರಡಿತ್ತು.

**ಇದರ ರೋಗಲಕ್ಷಣಗಳು :**

ಇದ್ದಕ್ಕಿದ್ದಂತೆ ಫ್ಲೂ ತರಹದ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಜ್ವರ, ಚಳಿ, ತಲೆನೋವು, ಓಕರಿಕೆ, ವಾಂತಿ, ತೀವ್ರತರಹದ ಕೀಲು ನೋವು ಇರುತ್ತದೆ ಮತ್ತು ದೇಹದಲ್ಲಿ ದದ್ದುಗಳು ಕಾಣಿಸಿಕೊಳ್ಳುತ್ತವೆ.

ದದ್ದುಗಳು, ಎದೆಯ ಭಾಗದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಸಣ್ಣ ಕೀಲುಗಳಲ್ಲಿ ಪಾಲಿ ಆರ್ಥ್ರೈಟಿಸ್ ಅಥವಾ ಸಂಧಿವಾತ ಉಂಟಾಗುತ್ತದೆ. ಕೈ-ಕಾಲುಗಳ ಕೀಲುಗಳು ಊತಗೊಂಡಿರುತ್ತವೆ. ರಕ್ತಸ್ರಾವ ಅಪರೂಪ. ಕೆಲವು ರೋಗಿಗಳು 3ರಿಂದ 5 ದಿನಗಳಲ್ಲಿ ಚೇತರಿಸಿಕೊಳ್ಳುತ್ತಾರೆ. ಆದರೆ, ಕೆಲವು ರೋಗಿಗಳಲ್ಲಿ ಬೆಳಗಿನ ಹೊತ್ತು ಕೈ-ಕಾಲುಗಳಲ್ಲಿ ಬಿಗಿತ, ಊತ ಮತ್ತು ಚಲಿಸುವಾಗ ನೋವು ಇರುತ್ತದೆ. ಈ ರೀತಿಯ ತೊಂದರೆ ವಾರಗಟ್ಟಲೆ ಅಥವಾ ತಿಂಗಳುಗಟ್ಟಲೆ ಚೇತರಿಸಿಕೊಂಡ ನಂತರವು ಮುಂದುವರೆಯುತ್ತದೆ.

**ಚಿಕಿತ್ಸೆ :**

ತೀವ್ರ ತರಹದ ಜ್ವರವಿದ್ದಾಗ, ಹಾಸಿಗೆಯಲ್ಲಿ ವಿಶ್ರಾಂತಿಯನ್ನು ಪಡೆಯಬೇಕು. ಜ್ವರ ಕಡಿಮೆಯಾಗಲು ವೈದ್ಯರ ಸಲಹೆ ಮೇರೆಗೆ ಪ್ಯಾರಾಸಿಟಮಾಲ್/ಕ್ರೋಸಿನ್ ಮಾತ್ರೆಯನ್ನು ಸೇವಿಸಬೇಕು. ಆಸ್ಪಿರಿನ್ ಮಾತ್ರೆಯನ್ನು ಸೇವಿಸಬಾರದು. ಅದರಿಂದ ಹೊಟ್ಟೆಹುಣ್ಣು ಅಥವಾ ಗ್ಯಾಸ್ಟ್ರೈಟಿಸ್ ಉಂಟಾಗುತ್ತದೆ.

ದ್ರವರೂಪದ ಆಹಾರ ಪದಾರ್ಥಗಳನ್ನು ಯಥೇಚ್ಛವಾಗಿ ಸೇವಿಸಬೇಕು.

* ಚಿಕುನ್‌ಗುನ್ಯಾಕ್ಕೆ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಆದರೆ, ರೋಗಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆಯನ್ನು ವೈದ್ಯರು ನೀಡುತ್ತಾರೆ.

* ಚಲನೆ ಮತ್ತು ಸರಳ ವ್ಯಾಯಾಮ ಆರೋಗ್ಯ ಸುಧಾರಣೆಯಲ್ಲಿ ಸಹಾಯಕವಾಗುತ್ತದೆ.

**ಮುನ್ನೆಚ್ಚರಿಕೆ :**

1) ಮನೆ, ಶಾಲೆ ಮತ್ತು ಕಛೇರಿ ಮೊದಲಾದ ಜಾಗಗಳಲ್ಲಿ ನೀರು ನಿಲ್ಲದಂತೆ ಗಮನವನ್ನು ಕೊಡಬೇಕು.

2) ಶರೀರದ ತೆರೆದ ಭಾಗಗಳಿಗೆ ರಿಪಲೆಂಟ್ಸ್‌ಗಳನ್ನು ಉಪಯೋಗಿಸುವುದು.

3) ನೀರಿನ ಟ್ಯಾಂಕ್‌ಗಳನ್ನು ಸರಿಯಾಗಿ ಮುಚ್ಚಿಡಬೇಕು.

4) ಮನೆಯ ಆವರಣದಲ್ಲಿ ಟೈರ್‌ಗಳು, ಹೂ ಕುಂಡ, ಒಡೆದ ಮಡಕೆ ಮೊದಲಾದವುಗಳಲ್ಲಿ ನೀರು ಶೇಖರಗೊಳ್ಳದಂತೆ ಎಚ್ಚರಿಕೆ ವಹಿಸಬೇಕು.

5) ಸೊಳ್ಳೆಗಳು ಉತ್ಪತ್ತಿಯಾಗುವ ಜಾಗವನ್ನು ಪತ್ತೆ ಮಾಡಿ ಅಲ್ಲಿ ಸೊಳ್ಳೆ ನಾಶಕಗಳನ್ನು ಉಪಯೋಗಿಸಬೇಕು.

## 12. H1N1 ಸೋಂಕು (ಹಂದಿಜ್ವರ)

ಸ್ವೈನ್‌ಇನ್‌ಫ್ಲೂಯೆಂಜಾವನ್ನು ಕನ್ನಡದಲ್ಲಿ ಹಂದಿಜ್ವರ ಎಂದು ಕರೆಯುತ್ತೇವೆ. ಅಲ್ಲದೆ, ಇದನ್ನು ಸ್ವೈನ್‌ಫ್ಲೂ, ಹಾಗ್‌ಫ್ಲೂ ಮತ್ತು ಪಿಗ್‌ಫ್ಲೂ ಎಂತಲೂ ಕರೆಯುತ್ತಾರೆ. 2009ನೇ ಇಸವಿಯಲ್ಲಿ ಮಾಧ್ಯಮದವರು, ಇದಕ್ಕೆ ಸ್ವೈನ್‌ಫ್ಲೂ ಎಂದು ಕರೆದರು. ಹಂದಿಗೂ ಈ ಸೋಂಕು ಜನರಿಗೆ ಬರುವುದಕ್ಕೂ ಸಂಬಂಧವಿಲ್ಲ.

ಉಸಿರಾಟದ ತೊಂದರೆಯನ್ನುಂಟುಮಾಡುವ ಇದು ಸಾಮಾನ್ಯವಾಗಿ ಹಂದಿಗಳಿಗೆ ಬರುವ ರೋಗ. ಟೈಪ್–ಎ ಮಾದರಿಯ ಇನ್‌ಫ್ಲೂಯೆಂಜಾ ವೈರಸ್ (ಎಚ್‌1ಎನ್‌1 ವೈರಸ್)ನಿಂದ ಉಂಟಾಗುತ್ತದೆ.

**ಮನುಷ್ಯರಲ್ಲಿ ಕಂಡು ಬರುವ ರೋಗಲಕ್ಷಣಗಳು :**

ಸಾಮಾನ್ಯವಾಗಿ ಚಳಿ, ಜ್ವರ, ಗಂಟಲು ನೋವು, ಮಾಂಸಖಂಡಗಳಲ್ಲಿ ನೋವು, ತೀವ್ರವಾದ ತಲೆನೋವು, ಕೆಮ್ಮು, ನಿಶ್ಶಕ್ತಿ ಕಂಡು ಬರುತ್ತದೆ.

ಹಂದಿಗಳು ಸಹ, ಮನುಷ್ಯನ ಇನ್‌ಫ್ಲೂಯೆಂಜಾಯಿಂದ ಸೋಂಕಿಗೊಳಗಾಗಬಹುದು.

**ಹಂದಿಯ ಮಾಂಸ ತಿನ್ನುವುದರಿಂದ ಹಂದಿಜ್ವರ ಬರುತ್ತದೆಯೇ ?**

ಹಂದಿ ಮಾಂಸ ತಿನ್ನುವುದರಿಂದ ಹಂದಿ ಜ್ವರ ಬರುವುದಿಲ್ಲ. ಆಹಾರ ಸೇವಿಸುವುದರ ಮೂಲಕ ಹಂದಿ ಜ್ವರದ ವೈರಸ್‌ಗಳು ಪ್ರಸಾರವಾಗುವುದಿಲ್ಲ. ಆದರೆ, ಸರಿಯಾಗಿ ಸಂಸ್ಕರಿಸಿದ ಮತ್ತು ಬೇಯಿಸಿದ ಹಂದಿ ಮಾಂಸ ಮತ್ತು ಅದರ ಉತ್ಪನ್ನಗಳನ್ನು ಸೇವಿಸುವುದು ಒಳ್ಳೆಯದು. ಹಂದಿ ಮಾಂಸವನ್ನು 160 ಡಿಗ್ರಿ ಫ್ಯಾರನ್‌ಹೀಟ್ ಬಿಸಿಯಲ್ಲಿ ಬೇಯಿಸುವುದರಿಂದ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳು ನಾಶವಾಗುತ್ತವೆ.

**ಹಂದಿಜ್ವರ ಹೇಗೆ ಹರಡುತ್ತದೆ?**

**ಹಂದಿಗಳ ನಡುವೆ ಹರಡುವಿಕೆ.**

ಹಂದಿಜ್ವರ ನೇರವಾಗಿ ಸಂಪರ್ಕದಿಂದ ಹರಡುತ್ತದೆ. ಅಂದರೆ, ಸೋಂಕಿನಿಂದ ಕೂಡಿದ ಪ್ರಾಣಿಗಳಿಂದ, ಸೋಂಕು ಇರದ ಹಂದಿಗಳಿಗೆ ಹರಡುತ್ತದೆ. ಈ ರೀತಿಯ ಸಾಮಿಪ್ಯ ಸಂಪರ್ಕ ಹಂದಿಗಳನ್ನು ಒಂದು ಕಡೆಯಿಂದ ಮತ್ತೊಂದು ಜಾಗಕ್ಕೆ ಕರೆದೊಯ್ಯುವಾಗ ಉಂಟಾಗುತ್ತದೆ. ಹಂದಿಗಳ ಮೂಗನ್ನು ಸ್ಪರ್ಶಿಸುವುದರಿಂದ ಅಥವಾ ಒಣಗಿದ ಲೋಳೆಯಿಂದ ವೈರಸ್ ನೇರವಾಗಿ ಹರಡುವ ಸಾಧ್ಯತೆಗಳು ಹೆಚ್ಚು.

ಅಲ್ಲದೆ, ಹಂದಿಗಳು ಕೆಮ್ಮುವುದರಿಂದ, ಸೀನುವುದರಿಂದ ಸೋಂಕು ಹರಡುತ್ತದೆ.

**ಹಂದಿಗಳಲ್ಲಿ ಹಂದಿಜ್ವರದ ಚಿಹ್ನೆಗಳು ಮತ್ತು ಲಕ್ಷಣಗಳು:**

ಹಂದಿಗಳಲ್ಲಿ ಇನ್‌ಫ್ಲೂಯೆಂಜಾ ಸೋಂಕಿನಿಂದ ಜ್ವರ, ಆಲಸ್ಯ, ಸೀನುವಿಕೆ, ಕೆಮ್ಮು, ಉಸಿರಾಟದಲ್ಲಿ ತೊಂದರೆ ಮತ್ತು ಹಸಿವು ಕಡಿಮೆಯಾಗಿರುತ್ತದೆ. ಕೆಲವೊಮ್ಮೆ, ಕೆಲವು ಪ್ರಕರಣಗಳಲ್ಲಿ ಗರ್ಭಪಾತವು ಉಂಟಾಗಬಹುದು. ವೈರಸ್‌ನಿಂದಾಗಿ ಹಂದಿಯ ತೂಕ ಕಡಿಮೆಯಾಗುವುದಲ್ಲದೆ ಬೆಳವಣಿಗೆಯು ಕುಂಠಿತವಾಗುತ್ತದೆ. ಇದರಿಂದಾಗಿ ಹಂದಿ ಸಾಕಾಣಿಕೆದಾರರಿಗೆ ಆರ್ಥಿಕ ನಷ್ಟ ಉಂಟಾಗುತ್ತದೆ.

**ಮನುಷ್ಯರಲ್ಲಿ ಸ್ವೈನ್‌ಫ್ಲೂ ಅಥವಾ ಹಂದಿಜ್ವರದ ಮುಖ್ಯ ಲಕ್ಷಣಗಳು :**

ಜ್ವರ, ಕೆಮ್ಮು, ಗಂಟಲನೋವು, ಮೈಕೈ ನೋವು, ತಲೆನೋವು, ಚಳಿ ಮತ್ತು ಆಯಾಸವಿರುತ್ತದೆ. ಕೆಲವು ರೋಗಿಗಳಲ್ಲಿ ಅತಿಸಾರ ಭೇದಿ ಮತ್ತು ವಾಂತಿಯು ಇರಬಹುದು. ಈ ರೋಗಲಕ್ಷಣಗಳು ಹಂದಿಜ್ವರದ ನಿರ್ದಿಷ್ಟ ರೋಗಲಕ್ಷಣಗಳಂತೆ

ಕಾಣದೆಯೂ ಇರಬಹುದು. ಎಚ್1ಎನ್1 ವೈರಸ್ ಹಂದಿಗಳಿಂದ ಮನುಷ್ಯರಿಗೆ ಹರಡುವುದಿಲ್ಲ. ಆದರೆ, ಮನುಷ್ಯರಿಂದ ಮನುಷ್ಯರಿಗೆ ಹರಡುತ್ತದೆ.

**ಮನುಷ್ಯರಲ್ಲಿ ಹಂದಿಜ್ವರದ ಸೋಂಕನ್ನು ಹೇಗೆ ನಿರ್ಧರಿಸುತ್ತಾರೆ?**

ಹಂದಿಜ್ವರವಿರುವ ವ್ಯಕ್ತಿಯೊಡನೆ ಸಂಪರ್ಕ ಹೊಂದಿದ್ದರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಪ್ರಯೋಗ ಶಾಲೆಯಲ್ಲಿ ಸೋಂಕಿರುವ ವ್ಯಕ್ತಿಯ ಉಸಿರಿನ ಮಾದರಿಯನ್ನು ತೆಗೆದುಕೊಂಡು ಪರೀಕ್ಷಿಸಬೇಕು. ಅಂದರೆ, ಸೋಂಕು ಹೊಂದಿರುವ ಮನುಷ್ಯನಿಂದ ಮೂಗು ಮತ್ತು ಗಂಟಲಿನಿಂದ ಮಾದರಿಯನ್ನು ಸಂಗ್ರಹಿಸಬೇಕು. ಅನಂತರ ತಪಾಸಣೆ ಮಾಡಬೇಕು.

ರೋಗದ ಮೊದಲ 4ರಿಂದ 5 ದಿನಗಳೊಳಗೆ ಸೋಂಕು ಪಡೆದಿರುವ ವ್ಯಕ್ತಿಯಲ್ಲಿ ಈ ವೈರಸ್‌ಗಳು ದೊರೆಯುತ್ತವೆ. ಆದರೆ, ಕೆಲವು ಜನರಲ್ಲಿ, ಮುಖ್ಯವಾಗಿ ಮಕ್ಕಳಲ್ಲಿ ವೈರಸ್‌ಗಳ ಬಿಡುಗಡೆ ಹತ್ತು ದಿನಗಳವರೆಗೆ ಅಥವಾ ಇನ್ನೂ ಹೆಚ್ಚಿನ ಸಮಯ ತೆಗೆದುಕೊಳ್ಳಬಹುದು.

ಸ್ವೈನ್‌ಇನ್‌ಫ್ಲೂಯೆಂಜಾ ತಡೆಯಲು ಹಂದಿಗಳಿಗೆ ಕೊಡುವ ವ್ಯಾಕ್ಸಿನ್ (ಲಸಿಕೆಯಿದೆ). ಆದರೆ, ಹಂದಿಜ್ವರದಿಂದ ಮನುಷ್ಯರನ್ನು ರಕ್ಷಿಸಲು ಯಾವುದೇ ಲಸಿಕೆ ಸದ್ಯಕ್ಕೆ ಲಭ್ಯವಿಲ್ಲ.

**ಹಂದಿಜ್ವರವನ್ನು ತಡೆಗಟ್ಟುವುದು ಹೇಗೆ?**

ಹಂದಿಜ್ವರ (ಸ್ವೈನ್‌ಇನ್‌ಫ್ಲೂಯೆಂಜಾ)ವನ್ನು ತಡೆಗಟ್ಟಲು ಮೂರು ಹಂತಗಳಿವೆ. ಅವುಗಳೆಂದರೆ:

1. ಹಂದಿಜ್ವರವನ್ನು ಹಂದಿಗಳಿಗೆ ಬಾರದಂತೆ ತಡೆಗಟ್ಟುವುದು.
2. ಹಂದಿಜ್ವರ, ಮನುಷ್ಯರಿಗೆ ಹರಡದಂತೆ ತಡೆಗಟ್ಟುವುದು.
3. ಮನುಷ್ಯರ ನಡುವೆ ಹರಡದಂತೆ ತಡೆಗಟ್ಟುವುದು.

**1. ಹಂದಿಜ್ವರವನ್ನು ಹಂದಿಗಳಿಗೆ ಬಾರದಂತೆ ತಡೆಗಟ್ಟುವುದು.**

1) ಪರಿಸರದಲ್ಲಿರುವ ವೈರಸ್‌ನ್ನು ನಿಯಂತ್ರಿಸಲು ಸೋಂಕು ನಾಶಕಗಳನ್ನು ಉಪಯೋಗಿಸುವುದು.

2) ಸೋಂಕು ಇರುವ ಹಂದಿಗಳನ್ನು, ಆರೋಗ್ಯವಂತ ಹಂದಿಗಳ ಜೊತೆಗೆ

ಬಿಡದಿರುವುದು. ಹೊಸ ಹಂದಿಗಳನ್ನು ಹಳೆಯ ಹಂದಿಗಳಿಂದ ಪ್ರತ್ಯೇಕವಾಗಿರಿಸುವುದು.

**2. ಹಂದಿಗಳಿಂದ ಮನುಷ್ಯರಿಗೆ, ಹಂದಿಜ್ವರ ಹರಡದಂತೆ ಗಟ್ಟುವುದು.**

1) ಹಂದಿ ಸಾಕಾಣಿಕೆ ಮಾಡುವ ರೈತರು, ಪಶು ವೈದ್ಯರು, ಸಿಬ್ಬಂದಿ, ಸೋಂಕು ಹರಡದಂತೆ ಬಾಯಿಗೆ ಮಾಸ್ಕ್ ಕಟ್ಟಿಕೊಳ್ಳುವುದು

2) ಪ್ರಾಣಿಗಳನ್ನು ಮುಟ್ಟುವಾಗ ಕೈಗವಸುಗಳನ್ನು ಹಾಕಿಕೊಳ್ಳುವುದು.

3) ಕೈಗಳನ್ನು ಆಗಿಂದಾಗ್ಗೆ ವೈ ಸೋಪು ಉಪಯೋಗಿಸಿ ತೊಳೆದುಕೊಳ್ಳುವುದು.

**3. ಮನುಷ್ಯರ ನಡುವೆ ಹರಡದಂತೆ ತಡೆಗಟ್ಟುವುದು.**

ಇನ್‌ಫ್ಲೂಯೆಂಜಾ ಮನುಷ್ಯರ ನಡುವೆ ಕೆಮ್ಮುವುದರಿಂದ ಮತ್ತು ಸೀನುವುದರಿಂದ ಮತ್ತು ವೈರಸ್ ಇರುವುದನ್ನು ಮುಟ್ಟುವುದರಿಂದ ಹರಡುತ್ತದೆ. ಮನುಷ್ಯರಲ್ಲಿ ಹಂದಿಜ್ವರ ಬಹಳ ಸಾಂಕ್ರಾಮಿಕವಾದದ್ದು. ಅದರಲ್ಲೂ ಹಂದಿಜ್ವರ ಬಹಳ ಸಾಂಕ್ರಾಮಿಕವಾದದ್ದು. ಅದರಲ್ಲೂ, ಹಂದಿಜ್ವರ ಕಾಣಿಸಿಕೊಂಡ ಮೊದಲ ಐದು ದಿನಗಳಲ್ಲಿ ರೋಗ ಬಹಳ ಸಾಂಕ್ರಾಮಿಕವಾಗಿ ಹರಡುತ್ತದೆ. ಮಕ್ಕಳಲ್ಲಿ ಸಾಂಕ್ರಾಮಿಕತೆ ಹತ್ತು ದಿನಗಳವರೆಗೂ ಇರುತ್ತದೆ. ಮೊದಲ ಐದು ದಿನಗಳಲ್ಲಿ ಸಂಗ್ರಹಿಸಿದ ಮಾದರಿಗಳನ್ನು ರೋಗನಿರ್ಧಾರಕ್ಕಾಗಿ ಪ್ರಯೋಗ ಶಾಲೆಗೆ ಕಳಿಸಬೇಕು.

ಮನುಷ್ಯರ ನಡುವೆ ರೋಗ ಹರಡುವುದನ್ನು ತಡೆಗಟ್ಟಲು ಶಿಫಾರಸ್ಸು ಮಾಡಿರುವಂತಹವು.

1) ಸೋಂಕನ್ನು ನಿಯಂತ್ರಿಸಲು ಸಮರ್ಥಕವಾದ ಕ್ರಮವನ್ನು ಕೈಗೊಳ್ಳಬೇಕು.

2) ನೀರು ಮತ್ತು ಸೋಪನ್ನು ಉಪಯೋಗಿಸಿ ಆಗಿಂದಾಗ್ಗೆ ಕೈಗಳನ್ನು ತೊಳೆದುಕೊಳ್ಳಬೇಕು ಅಥವಾ ಆಲ್ಕೋಹಾಲ್ ಸೇರಿಸಿರುವ, ಹ್ಯಾಂಡ್‌ವಾಶ್‌ನಿಂದಲೂ ಕೈಗಳನ್ನು ತೊಳೆದುಕೊಳ್ಳಬಹುದು.

3) ಮನೆಯ ನೆಲವನ್ನು ಸೋಂಕು ನಾಶಕ (ಉದಾ: ಪೆನಾಯಿಲ್ ಅಥವಾ ಡೆಟಾಲ್)ಗಳನ್ನು ಉಪಯೋಗಿಸಿ ಸ್ವಚ್ಛಗೊಳಿಸಬೇಕು.

4) ತಜ್ಞರ ಪ್ರಕಾರ ಹ್ಯಾಂಡ್‌ವಾಶ್‌ನಿಂದ ವೈರಲ್ ಸೋಂಕನ್ನು ತಡೆಗಟ್ಟಬಹುದು.

5) ಇದ್ದಕ್ಕಿದ್ದಂತೆ ಜ್ವರ, ಕೆಮ್ಮು ಅಥವಾ ಮಾಂಸಖಂಡಗಳಲ್ಲಿ ನೋವು ಕಾಣಿಸಿಕೊಂಡರೆ, ಉದ್ಯೋಗಕ್ಕೆ ತೆರಳಬಾರದು, ಸಾರ್ವಜನಿಕ ಬಸ್‌ಗಳಲ್ಲಿ ಪ್ರಯಾಣಿಸಬಾರದು ಮತ್ತು ಸಲಹೆಗಾಗಿ ಮೆಡಿಕಲ್ ಡಾಕ್ಟರ್‌ನ್ನು ಸಂಪರ್ಕಿಸಬೇಕು.

6) ಸೋಂಕು ರೋಗಿಗಳಿಂದ ದೂರವಿರಬೇಕು.

7) ಜನಸಂದಣಿ ಸೇರಬಾರದು.

## (ಇ) ಪರಾವಲಂಬಿ ಜೀವಿಗಳಿಂದ ಬರುವ ರೋಗಗಳು

### 1. ಅಮೀಬಿಯಾಸಿಸ್ (Amoebiasis)

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅಮೀಬಿಯಾಸಿಸ್ ಸೋಂಕು ಬಹಳ ಸಾಮಾನ್ಯವಾದ ಸಮಸ್ಯೆ. ನಮ್ಮ ದೇಶದಲ್ಲಿ ಪ್ರತಿ ಕುಟುಂಬದಲ್ಲೂ ಕನಿಷ್ಠ ಒಬ್ಬರಾದರೂ ತಮ್ಮ ಜೀವನದಲ್ಲಿ ಯಾವುದಾದರೂ ಒಂದು ಸಾರಿ ಈ ರೋಗದಿಂದ ನರಳಿರುತ್ತಾರೆ.

ಹೊಟ್ಟೆಯ ತೊಂದರೆಗಳಿಗೆ ಅನೇಕ ಸಂದರ್ಭಗಳಲ್ಲಿ ಅಮಿಬಿಯಾಸಿಸ್ ಕಾರಣೀಭೂತವಾಗಿರುವುದು ಸಹಜ. ಅಜೀರ್ಣ, ವಾಯು, ಜಿಗಟಾಗಿರುವ ಮಲ, ಹೊಟ್ಟೆಯ ಉಬ್ಬರ ಈ ರೋಗದ ಲಕ್ಷಣಗಳು.

ಅಮೀಬಿಯಾಸಿಸ್ ರೋಗ ಪ್ರಪಂಚದಾದ್ಯಂತ ಹರಡಿದೆ. ಆದಾಗ್ಯೂ, ಇದು ನೈರ್ಮಲ್ಯದ ಕೊರತೆಯಿರುವ ಪ್ರದೇಶಗಳಲ್ಲಿ ಬಹಳ ಸಾಮಾನ್ಯ. ಒಂದು ಅಂದಾಜಿನ ಪ್ರಕಾರ, ಪ್ರಪಂಚದ ಜನಸಂಖ್ಯೆಯಲ್ಲಿ ಶೇಕಡ 10ರಷ್ಟು ಜನರಿಗೆ ಈ ರೋಗ ಹರಡಿರಬಹುದು.

ಭಾರತದಲ್ಲಿ, ವಿವಿಧ ಪ್ರದೇಶಗಳಲ್ಲಿ ಶೇಕಡ 10ರಿಂದ 60ರಷ್ಟು ಮಂದಿಯಲ್ಲಿ ಇರುವುದು ವರದಿಯಾಗಿದೆ. ಉದಾಹರಣೆಗೆ ಮುಂಬಯಿಯಲ್ಲಿ ಶೇಕಡ 58ರಷ್ಟು ಹೆಚ್ಚು.

ಈ ರೋಗ ಎಲ್ಲ ವಯಸ್ಸಿನವರಲ್ಲೂ ಕಂಡು ಬರುತ್ತದೆ.

**ಹೇಗೆ ಬರುತ್ತದೆ?**

ಅಮೀಬಿಯಾಸಿಸ್ ರೋಗ ಏಕಕಣ ಜೀವಿಯಾದ ಒಂದು ಸೂಕ್ಷ್ಮಜೀವಿಯ ಮೂಲದಿಂದ ಬರುತ್ತದೆ. ಆ ಕ್ರಿಮಿಯ ಹೆಸರು ಎಂಟ್‌ಅಮೀಬಾ ಹಿಸ್ಟಾಲಿಟಿಕಾ (Entamoeba Hystolitica).

ಈ ರೋಗದ ಸೋಂಕನ್ನು ಹೊಂದಿದ ವ್ಯಕ್ತಿ ಅಮೀಬಾ ಅಥವಾ ಅದರ ಮೊಟ್ಟೆ (Cyst)ಯನ್ನು ಮಲದ್ವಾರದ ಮೂಲಕ ಹೊರಗೆ ಬಿಡುತ್ತಾನೆ. ಆ, ಮಲದಿಂದ ಕಲುಷಿತಗೊಂಡ ನೀರು ಅಥವಾ ಆಹಾರದ ಮೂಲಕ ಕ್ರಿಮಿ ಮತ್ತೊಬ್ಬ ವ್ಯಕ್ತಿಯನ್ನು ಸೇರುತ್ತದೆ.

ಸಾಧಾರಣವಾಗಿ ನಮ್ಮ ಹಳ್ಳಿಗಳಲ್ಲಿ ಪ್ರತ್ಯೇಕವಾಗಿ ಟಾಯ್‌ಲೆಟ್‌ಗಳು (ಮಲಮೂತ್ರ ವಿಸರ್ಜಿಸಲು ಪ್ರತ್ಯೇಕವಾದ ಜಾಗ) ಇಲ್ಲದೆ ಇರುವುದರಿಂದ, ಜನರು, ಬಯಲಿಗೆ ಹೋಗಿ ಮಲಮೂತ್ರಗಳನ್ನು ವಿಸರ್ಜಿಸುತ್ತಾರೆ. ಅಲ್ಲಿಂದ ಅಮೀಬಾ ಮೊಟ್ಟೆ (Cysts)ಗಳು ತರಕಾರಿಗಳಿಗೆ ಅಂಟಿಕೊಳ್ಳುತ್ತವೆ. ಅಡುಗೆ ಮಾಡುವ ಮೊದಲು, ಆ ತರಕಾರಿಗಳನ್ನು ಶುದ್ಧವಾದ ನೀರಿನಿಂದ ಚೆನ್ನಾಗಿ ತೊಳೆಯದಿದ್ದರೆ, ಆ ಆಹಾರವನ್ನು ಸೇವಿಸಿದ ವ್ಯಕ್ತಿಗಳಿಗೆ ಅಮೀಬಿಕ್ ಸೋಂಕು ಉಂಟಾಗುವ ಸಂಭವವಿದೆ. ತರಕಾರಿಗಳನ್ನು ಬೇಯಿಸದೆ ಹಾಗೆ ತಯಾರಿಸುವ ಸಲಾಡ್‌ಗಳು, ಕೋಸಂಬರಿ, ಚಟ್ನಿ ಇತ್ಯಾದಿಗಳಿಂದ ಈ ಪ್ರಮಾದ ಆಗುವುದು ಹೆಚ್ಚು.

**ರಸ್ತೆ ಪಕ್ಕದಲ್ಲಿನ ಆಹಾರ ಪದಾರ್ಥಗಳು:**

ರಸ್ತೆ ಪಕ್ಕದಲ್ಲಿ ಮಾರಾಟ ಮಾಡುವ, ಆಹಾರದ ಪದಾರ್ಥಗಳನ್ನು ತಿನ್ನುವುದರಿಂದ, ಅಮೀಬಿಕ್ ಸೋಂಕು ಉಂಟಾಗುವ ಸಂಭವ ಹೆಚ್ಚು. ಅದಕ್ಕೆ ಕಾರಣ, ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಪರಿಶುಭ್ರತೆಯನ್ನು ಪಾಲಿಸದೇ ಇರುವುದು.

ಈ ವ್ಯಾಪಾರಿಗಳು ಕೈಗಳನ್ನು ಸರಿಯಾಗಿ ತೊಳೆದಿರುವುದಿಲ್ಲ. ಉಗುರು ಚೆನ್ನಾಗಿ ಬೆಳೆದಿರುವುದರಿಂದ, ಆ ಉಗುರಿನ ಕೆಳಭಾಗದಲ್ಲಿ ಕೊಳಕು ಸೇರಿರುತ್ತದೆ. ಆ ಕೊಳೆಯಲ್ಲಿಯೇ ಅಮೀಬಾ ಮೊಟ್ಟೆಗಳು ಸಂಸಾರವನ್ನು ಹೂಡಿ, ಅಡುಗೆಯನ್ನು ಕೈಗಳಿಂದ ಬಡಿಸುವಾಗ, ಕೊಂಡು ತಿನ್ನುವ ಗ್ರಾಹಕರಿಗೆ ಹರಡುತ್ತದೆ.

ರಸ್ತೆ ಪಕ್ಕ, ಆಹಾರ ಪದಾರ್ಥಗಳನ್ನು ಮಾರಾಟ ಮಾಡುವವರು, ಕೈಗಳನ್ನು ಚೆನ್ನಾಗಿ ಶುಭ್ರಗೊಳಿಸಿಕೊಂಡಿರುವುದಿಲ್ಲ. ಇದಕ್ಕೆ ಕಾರಣ, ಸಾಕಷ್ಟು ನೀರು ದೊರೆಯದೆ ಇರುವುದರಿಂದ, ತಟ್ಟೆಗಳನ್ನು, ಲೋಟಗಳನ್ನು, ಚಮಚಗಳನ್ನು ತೊಳೆದ ನೀರಿನಲ್ಲಿಯೇ ತೊಳೆಯುವುದರಿಂದ ಅಮೀಬಿಯಾಸಿಸ್ ಹರಡುವ ಸಾಧ್ಯತೆಗಳು ಹೆಚ್ಚು.

**ನೀರಿನ ಮೂಲಕ:**

ಅಮೀಬಿಯಾಸಿಸ್ ಬರಲು ಮತ್ತೊಂದು ಮುಖ್ಯ ಕಾರಣ ನಾವು ಕುಡಿಯುವ ಕಲುಷಿತ ನೀರು.

ಪ್ರಯಾಣ ಮಾಡುವಾಗ ದಾಹವನ್ನು ತಡೆಯಲಾರದೆ, ಎಲ್ಲೆಂದರಲ್ಲಿ ನೀರು ಕುಡಿಯುತ್ತೇವೆ. ರೈಲ್ವೆಸ್ಟೇಷನ್, ಬಸ್‌ಸ್ಟ್ಯಾಂಡ್, ರಸ್ತೆಬದಿಯ ಹೋಟೆಲ್‌ಗಳಲ್ಲಿ ಶುದ್ಧವಾದ ನೀರು ಪೂರೈಕೆಯಾಗದಿದ್ದರೆ ಅಮೀಬಿಯಾಸಿಸ್ ವ್ಯಾಧಿ ಹರಡುವ ಸಂಭವ ಹೆಚ್ಚು.

**ರೋಗ ಪರಿಪಕ್ವ ಆಗುವ ಅವಧಿ (ಇನ್‌ಕ್ಯುಬೇಷನ್ ಪೀರಿಯಡ್):**

ಇದು ಸಾಮಾನ್ಯವಾಗಿ 2ರಿಂದ 4 ವಾರಗಳಾಗಿರುತ್ತವೆ.

**ಕರುಳಿನ ನಾಶ:**

ನಾವು ಸೇವಿಸುವ ಕಲುಷಿತ ಆಹಾರ ಅಥವಾ ನೀರಿನ ಮೂಲಕ ಅಮೀಬಾ ಕ್ರಿಮಿಗಳು ಹೊಟ್ಟೆಯನ್ನು ಸೇರಿ, ಅಲ್ಲಿಂದ, ಸಣ್ಣ ಕರುಳಿಗೆ, ಆ ನಂತರ ದೊಡ್ಡ ಕರುಳಿಗೆ ಸೇರಿಕೊಳ್ಳುತ್ತವೆ.

ದೊಡ್ಡ ಕರುಳನ್ನು ಸೇರಿಕೊಂಡ ಅಮೀಬಾ ಕ್ರಿಮಿಗಳು, ಅಲ್ಲಿನ ಗೋಡೆಗಳಲ್ಲಿ ಹುಣ್ಣನ್ನುಂಟು ಮಾಡುತ್ತದೆ. ಈ ಹುಣ್ಣನ್ನು ವಾಸಸ್ಥಾನವನ್ನಾಗಿ ಮಾಡಿಕೊಂಡು ಅಮೀಬಾ ಕ್ರಿಮಿಗಳು ವಿಪರೀತವಾಗಿ ವೃದ್ಧಿಯಾಗಲು ಪ್ರಾರಂಭಿಸುತ್ತವೆ.

ಹುಣ್ಣಿನಲ್ಲಿ ತಯಾರಾಗುವ ಹೊಸ ಕ್ರಿಮಿಗಳು ಆಗಾಗ ನಾವು ವಿಸರ್ಜಿಸುವ ಮಲದ ಮೂಲಕ ಹೊರಗಡೆಗೆ ಬಂದು, ಇತರರ ಶರೀರವನ್ನು ಪ್ರವೇಶಿಸಲು ಸಿದ್ಧವಾಗಿರುತ್ತವೆ.

**ರೋಗದ ನಿರ್ಧಾರ:**

ರೋಗವಿದೆಯೇ, ಇಲ್ಲವೇ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಲು, ಪ್ರಯೋಗ ಶಾಲೆಯಲ್ಲಿ ಮಲ ಪರೀಕ್ಷೆಯನ್ನು ಮಾಡಿಸಬೇಕು.

ಮಲ ಪರೀಕ್ಷೆ ರಿಪೋರ್ಟ್‌ನಲ್ಲಿ Cysts ಎಂದು 'Vegetative Form of $E_1$ Histolytica' ಎಂದಿರಬಹುದು. ಅದರ ಅರ್ಥ, ಆ ವ್ಯಕ್ತಿಗೆ ಅಮೀಬಿಯಾಸಿಸ್ ಸೋಂಕು ಇದೆಯೆಂದು.

**ತೊಡಕುಗಳು:**

ಅಮೀಬಿಯಾಸಿಸ್‌ಗೆ ಸರಿಯಾದ ಚಿಕಿತ್ಸೆಯನ್ನು ಪಡೆಯದಿದ್ದರೆ ಕೆಳಕಂಡ ತೊಡಕುಗಳು ಉಂಟಾಗುತ್ತವೆ.

**ಯಕೃತ್ (ಲಿವರ್) ಕುರು:**

ಅಮೀಬಿಯಾಸಿಸ್ ತೀವ್ರಗೊಂಡರೆ ಲಿವರ್‌ನಲ್ಲಿ ಕುರು (Liver Abscess) ಉಂಟಾಗುತ್ತದೆ. ಕರುಳಿನಿಂದ, ಅಮೀಬಾ ಜೀವಿಗಳು ರಕ್ತದ ಮೂಲಕ ಲಿವರ್‌ನ್ನು ಸೇರಿಕೊಳ್ಳುತ್ತವೆ. ಅಲ್ಲಿ, ಕೀವನ್ನುಂಟುಮಾಡುತ್ತದೆ. ಇದರಿಂದ ತೀವ್ರವಾದ ತೊಡಕು ಉಂಟಾಗುತ್ತದೆ. ಈ ಪರಿಸ್ಥಿತಿ ಏರ್ಪಟ್ಟಾಗ, ಜ್ವರ, ಚಳಿ, ತೂಕ ಕಡಿಮೆಯಾಗುವುದು, ಲಿವರ್ ತೊಂದರೆ, ಹೊಟ್ಟೆ ನೋವು ಮೊದಲಾದವು ಕಾಣಿಸಿಕೊಳ್ಳುತ್ತದೆ.

ಲಿವರ್‌ನಲ್ಲಿ ಕುರುವು ಆಗಿರುವುದನ್ನು ತಿಳಿದುಕೊಳ್ಳಲು ಅಲ್ಟ್ರಾ ಸೋನೋಗ್ರಫಿ ಮಾಡಿಸಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸೋಂಕು, ಲಿವರ್‌ನಿಂದ ಶ್ವಾಸಕೋಶಗಳಿಗೆ ಹರಡಿ, ಅಲ್ಲಿಯೂ ಕುರುಗಳನ್ನುಂಟುಮಾಡುತ್ತದೆ.

**2. ಫೈಲೇರಿಯಾ ಅಥವಾ ಆನೇಕಾಲು ರೋಗ**

ಫೈಲೇರಿಯಾ ರೋಗದ ಸಮೀಕ್ಷೆಯಿಂದ ಕರ್ನಾಟಕ ರಾಜ್ಯದ ಸಮುದ್ರ ತೀರ ಪ್ರದೇಶಗಳಿಂದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯ ಒಳನಾಡು ಪ್ರದೇಶ, ರಾಯಚೂರು, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಫೈಲೇರಿಯಾ ರೋಗವು ವಿಶೇಷವಾಗಿ ಕಂಡು ಬಂದಿರುತ್ತದೆ. ತೇವಾಂಶಗಳಿಂದ ಕೂಡಿರುವ ಉಷ್ಣವಾತಾವರಣವು ಈ ರೋಗದ ಇರುವಿಕೆಗೆ ಪ್ರಮುಖ ಕಾರಣವಾಗಿದೆ.

ಭಾರತದಲ್ಲಿ ಹೆಚ್ಚಾಗಿ ಸೋಂಕಿರುವ ಇತರೆ ಪ್ರದೇಶಗಳೆಂದರೆ, ಉತ್ತರಪ್ರದೇಶ, ಬಿಹಾರ, ಆಂಧ್ರಪ್ರದೇಶ, ಒರಿಸ್ಸಾ, ತಮಿಳುನಾಡು ಮತ್ತು ಕೇರಳ. ಫೈಲೇರಿಯಾ ರೋಗ ಪ್ರಾಣಾಂತಿಕವಲ್ಲದಿದ್ದರೂ, ಈ ರೋಗ ಬಂದ ವ್ಯಕ್ತಿ ಹೆಚ್ಚಾಗಿ ನರಳುವುದಲ್ಲದೆ, ಅಂಗವೈಕಲ್ಯವು ಉಂಟಾಗುತ್ತದೆ.

ಭಾರತದಲ್ಲಿ ಆನೇಕಾಲು ರೋಗಕ್ಕೆ ಡಬ್ಲ್ಯೂ. ಬ್ಯಾಂಕ್ರಾಫ್ಟಿ ಮತ್ತು ಬಿ. ಮಲಾಯಿ ಎಂಬ ಜಾತಿಯ ಫೈಲೇರಿಯಾ ರೋಗಾಣುಗಳೇ ಮೂಲ. ಕ್ಯೂಲೆಕ್ಸ್ ಜಾತಿಗೆ ಸೇರಿದ ಸೊಳ್ಳೆಗಳು ಸೋಂಕನ್ನು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ.

**ರೋಗದ ಲಕ್ಷಣಗಳು:**

ಫೈಲೇರಿಯಾ ರೋಗವನ್ನು ಸಾಮಾನ್ಯವಾಗಿ ಆನೇಕಾಲು ರೋಗವೆಂದು ಕರೆಯುತ್ತಾರೆ. ಇದಕ್ಕೆ ಕಾರಣ ರೋಗಪೀಡಿತ ವ್ಯಕ್ತಿಯ ಕಾಲು ಆನೇಕಾಲಿನಂತೆ ದಪ್ಪದಾಗಿರುತ್ತದೆ. (ಚಿತ್ರದಲ್ಲಿ ತೋರಿಸಿರುವಂತೆ)

**ರೋಗದ ಪ್ರಮುಖ ಲಕ್ಷಣಗಳೆಂದರೆ:**

ಆರಂಭದಲ್ಲಿ ಆಗಾಗ ಜ್ವರ ಬರುತ್ತಲೇ ಇರುತ್ತದೆ. ಜ್ವರದೊಂದಿಗೆ ನಡುಕವು ಇರಬಹುದು. ದುಗ್ಧನಾಳ (Lymphan)ಗಳ ವ್ಯೂಹದಲ್ಲಿ ಉರಿಯೂತ ಉಂಟಾಗುತ್ತದೆ. ಅಲ್ಲಿ ಪ್ರಬುದ್ಧ ಫೈಲೇರಿಯಾ ಕ್ರಿಮಿಗಳು ಜೀವಿಸುತ್ತವೆ. ಆದಾಗ್ಯೂ, ಸೋಂಕು ತಗುಲಿಸಿಕೊಂಡ ಅನೇಕ ಜನ ರೋಗಕ್ಕೆ ಒಳಗಾಗುವುದಿಲ್ಲ. ಈ ರೋಗ ಸಾವನ್ನುಂಟು ಮಾಡುವುದಿಲ್ಲವಾದರೂ, ಅಂಗಗಳಲ್ಲಿ ಕುರೂಪ, ಹಿಂಸೆ, ಮತ್ತು ಊನತೆ ಉಂಟುಮಾಡುತ್ತದೆ. ಕ್ರಾನಿಕ್ ಹಂತದಲ್ಲಿ ಅಂದರೆ, ದೀರ್ಘಕಾಲದ ನಂತರ ರೋಗಪೀಡಿತ ಭಾಗ ದೊಡ್ಡದಾಗುತ್ತಾ ಹೋಗುತ್ತದೆ. ಉದಾಹರಣೆಗೆ ಕೈ, ಕಾಲು, ವೃಷಣ ಚೀಲ ಮೊದಲಾದ ಅವಯವಗಳಲ್ಲಿ ಊತ (Swelling) ಕಂಡುಬರುತ್ತದೆ.

**ಈ ರೋಗವನ್ನು ಹೇಗೆ ಪತ್ತೆಹಚ್ಚುತ್ತಾರೆ?**

ರಾತ್ರಿ ವೇಳೆಯಲ್ಲಿ ಮಾತ್ರ ಫೈಲೇರಿಯಾ ರೋಗವನ್ನು ಕಂಡು ಹಿಡಿಯಬಹುದಾಗಿದೆ. ಏಕೆಂದರೆ, "ಮೈಕ್ರೋ ಫೈಲೇರಿಯಾ" ಜಂತುಗಳು ರಾತ್ರಿ ಸಮಯದಲ್ಲಿ ಮಾತ್ರ ರಕ್ತ ಸಂಚಾರದಲ್ಲಿ ಕಾಣಿಸಿಕೊಳ್ಳುವುದರಿಂದ. ರಾತ್ರಿ 8.00ರಿಂದ ಮಧ್ಯರಾತ್ರಿ 12.00ರವರೆಗೆ ರಕ್ತಲೇಪನ ಸಂಗ್ರಹಿಸಿ, ಮೈಕ್ರೋಸ್ಕೋಪಿನ ಸಹಾಯದಿಂದ ಪರೀಕ್ಷೆ ಮಾಡಿದಾಗ ಮಾತ್ರ ಈ ರೋಗದ ಸೋಂಕು ಗೊತ್ತಾಗುತ್ತದೆ.

**ಆನೇಕಾಲು ರೋಗದ ಚಿಕಿತ್ಸೆ:**



ಆನೇಕಾಲು ರೋಗದ ಚಿಹ್ನೆಗಳು ಕಾಣಿಸಿಕೊಂಡ ನಂತರ, ರೋಗದ ಚಿಕಿತ್ಸೆ ಕಷ್ಟಸಾಧ್ಯ. ಆದರೆ, ಈ ರೋಗಾಣುಗಳನ್ನು (ಮೈಕ್ರೋ ಫೈಲೇರಿಯಾ ಪರಾವಲಂಬಿಗಳು) ರಕ್ತದಲ್ಲಿ ಹೊಂದಿರುವವರು ಪ್ರಾರಂಭದಲ್ಲಿ ಈ ರೋಗದ ಚಿಹ್ನೆಗಳನ್ನು ಮತ್ತು ಲಕ್ಷಣಗಳನ್ನು ತೋರಿಸುವುದಿಲ್ಲ. ಅಂತಹವರಲ್ಲಿ ಈ ರೋಗದ ಅರಿವು ಉಂಟಾಗುವುದಿಲ್ಲ.

ಅವರು ಎಲ್ಲರಂತೆಯೇ ಆರೋಗ್ಯವಂತರಾಗಿಯೇ ಕಾಣುತ್ತಾರೆ. ಅಂತಹ ಜನರು ಸಮಾಜದಲ್ಲಿ ಫೈಲೇರಿಯಾ ರೋಗದ ಹರಡುಪಿಕೆಗೆ ಕಾರಣರಾಗುತ್ತಾರೆ. ಆ ಜನರು ಪ್ರಾರಂಭದಲ್ಲೇ ಚಿಕಿತ್ಸೆಯನ್ನು ಪಡೆದರೆ ಈ ರೋಗದ ಬಾಹ್ಯ ಲಕ್ಷಣಗಳನ್ನು ಹಾಗೂ ಈ ರೋಗವು ಇತರರಿಗೆ ಹರಡುವುದನ್ನು ತಡೆಗಟ್ಟಬಹುದು. ರಾತ್ರಿಯ ವೇಳೆ ರಕ್ತಪರೀಕ್ಷೆಯನ್ನು ಮಾಡಿಸಿದಾಗ, ಮೈಕ್ರೋ ಫೈಲೇರಿಯಾ ಪರಾವಲಂಬಿಗಳು ಇರುವುದು ಖಚಿತಪಟ್ಟಲ್ಲಿ, ಫೈಲೇರಿಯಾ ಚಿಕಿತ್ಸಾಲಯದ ಸಿಬ್ಬಂದಿ ಸೂಕ್ತ ಚಿಕಿತ್ಸೆಯನ್ನು ನೀಡುವುದಲ್ಲದೆ, ಈ ರೋಗದ ಬಗ್ಗೆ ತಿಳುವಳಿಕೆಯನ್ನು ಮೂಡಿಸುತ್ತಾರೆ.

**ಲಿಂಫ್ಯಾಟಿಕ್ ಫೈಲೇರಿಯಾ ಎಂದರೇನು?**

ಲಿಂಫ್ಯಾಟಿಕ್ ಫೈಲೇರಿಯಾ ರೋಗವು ಎಳೆಯಾಕಾರದ ಜಂತುಗಳಿಂದ ಉಂಟಾಗುತ್ತದೆ. ಹಲವು ವರ್ಷಗಳ ಸೋಂಕಿನ ನಂತರ ಕಾಲುಗಳಲ್ಲಿ ಊತ ಕಂಡುಬರುತ್ತದೆ. ಆದುದರಿಂದ, ಈ ರೋಗ ಆನೇಕಾಲು 'ರೋಗವೆಂದು ಪ್ರಚಲಿತವಾಗಿದೆ.

**ಈ ರೋಗವು ಹೇಗೆ ಹರಡುತ್ತದೆ?**

ಫೈಲೇರಿಯಾ ರೋಗವು ಸೊಳ್ಳೆಗಳ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ವಯಸ್ಕ ಜಂತುಗಳು ದುಗ್ಧಗ್ರಂಥಿ (ಲಿಂಫ್‌ನೋಡ್) ಹಾಗೂ ದುಗ್ಧನಾಳ (ಲಿಂಫ್ ವೆಸಲ್)ಗಳಲ್ಲಿ ವಾಸಿಸಿ ಲಕ್ಷಾಂತರ ಮೈಕ್ರೋ ಫೈಲೇರಿಯಾ (ಸೂಕ್ಷ್ಮಜಂತು)ಗಳನ್ನು ರಕ್ತವಾಹಿನಿಗೆ ಬಿಡುತ್ತದೆ. ರೋಗಿಯನ್ನು ಕಚ್ಚಿದ ಸೊಳ್ಳೆಯು ಮೈಕ್ರೋ ಫೈಲೇರಿಯಾ ಜಂತುಗಳನ್ನು ಹೀರಿ ಬೇರೆಯವರನ್ನು ಕಚ್ಚುವುದರ ಮೂಲಕ ಒಬ್ಬರಿಂದ ಒಬ್ಬರಿಗೆ ಫೈಲೇರಿಯಾ ರೋಗ ಹರಡುತ್ತದೆ.

**ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು:**

1) ರಾತ್ರಿಯ ವೇಳೆ ಮನೆಗಳಿಗೆ ಭೇಟಿ ನೀಡುವ ಆರೋಗ್ಯ ಸಿಬ್ಬಂದಿಗೆ ರಕ್ತಲೇಪನವನ್ನು ನೀಡುವುದು.

2) ಸಂಜೆಯ ವೇಳೆ ಸೊಳ್ಳೆಗಳ ಕಚ್ಚುವಿಕೆಯಿಂದ ದೂರವಿರುವುದು.

3) ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸುವುದು.

4) ವಾಸಿಸುವ ಮನೆ ಕಿಟಕಿ, ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸುವುದು.

5) ಮನೆಯ ಹತ್ತಿರದ ಚರಂಡಿಗಳಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡುವುದು.

6) ಪರಿಸರ ನೈರ್ಮಲ್ಯ ಸಂರಕ್ಷಣೆಗೆ ಹೆಚ್ಚು ಗಮನವನ್ನು ನೀಡುವುದು.

7) ಉಚಿತವಾಗಿ ನೀಡುವ ಡಿ.ಇ.ಸಿ. (ಡೈ ಈಥೈಲ್ ಕಾರ್ಬಮಜೈನ ಸಿಟ್ರೇಟ್) ಮಾತ್ರೆಗಳನ್ನು ತಪ್ಪದೆ ತೆಗೆದುಕೊಳ್ಳುವುದು.

8) ಫೈಲೇರಿಯಾ ರೋಗದ ಬಗ್ಗೆ ಸರಿಯಾದ ತಿಳುವಳಿಕೆ ಪಡೆದು ಇತರರು, ಈ ರೋಗದ ನಿಯಂತ್ರಣಕ್ಕೆ ಸಹಕರಿಸುವಂತೆ ಮನವೊಲಿಸುವುದು.

### 3. ಮಲೇರಿಯಾ

ಮಲೇರಿಯಾ ಸಾಂಕ್ರಾಮಿಕವಾಗಿ ಹರಡುವ ರೋಗ. ಭಾರತದಲ್ಲಿ ಈ ರೋಗದ ಹಾವಳಿಯಿಂದ ಪ್ರತಿವರ್ಷ ಲಕ್ಷಗಟ್ಟಲೆ ಜನರು ನರಳುತ್ತಾರೆ. ಮಲೇರಿಯಾದಿಂದ ಸಾವಿರಾರು ಜನರು ನಮ್ಮ ದೇಶದಲ್ಲಿ ಸಾವನ್ನಪ್ಪುತ್ತಾರೆ. ಯಾವುದೇ ಜ್ವರ ಬಂದರೂ ಅದನ್ನು ಮಲೇರಿಯಾ ಎಂದೇ ಪರಿಗಣಿಸಬೇಕೆಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಮಲೇರಿಯಾ ಪ್ರೋಟೋಜೋವ ಗುಂಪಿನ ಪರಾವಲಂಬಿ ಜೀವಿ ಪ್ಲಾಸ್ಮೋಡಿಯಂನಿಂದ ಬರುತ್ತದೆ. ಅದರಲ್ಲಿ ನಾಲ್ಕು ಜಾತಿಗಳಿವೆ. ಅವುಗಳೆಂದರೆ,

1) ಪ್ಲಾಸ್ಮೋಡಿಯಂ ವೈವಾಕ್ಸ್

2) ಪ್ಲಾಸ್ಮೋಡಿಯಂ ಫಾಲ್ಸಿಫಾರಂ

3) ಪ್ಲಾಸ್ಮೋಡಿಯಂ ಮಲೇರಿಯಾ


4) ಪ್ಲಾಸ್ಮೋಡಿಯಂ ಓವೇಲ್

ಭಾರತದಲ್ಲಿ ಪ್ಲಾಸ್ಮೋಡಿಯಂ ವೈವಾಕ್ಸ್ ಜಾತಿಯ ಜೀವಿಯಿಂದ ರೋಗ ಬರುವುದು ಹೆಚ್ಚು.


**ರೋಗ ಹೇಗೆ ಹರಡುತ್ತದೆ?**

ಮಲೇರಿಯಾ ರೋಗ ಹರಡಲು ಸೊಳ್ಳೆಗಳೇ ಕಾರಣ. ಅನಾಫಿಲಿಸ್ ಎಂಬ ಹೆಣ್ಣು ಜಾತಿ ಸೊಳ್ಳೆಯಿಂದ ರೋಗ ಪ್ರಸಾರವಾಗುತ್ತದೆ. ಅಂದರೆ, ಅನಾಫಿಲಿಸ್ ಹೆಣ್ಣು ಜಾತಿ ಸೊಳ್ಳೆಯು ರೋಗಿಯ ರಕ್ತದಿಂದ ಮಲೇರಿಯಾ ರೋಗಾಣುಗಳನ್ನು

ಹೀರಿಕೊಂಡು ಆರೋಗ್ಯವಂತ ವ್ಯಕ್ತಿಯ ದೇಹದಲ್ಲಿ ಬಿಡುವುದರಿಂದ ರೋಗ ಉಂಟಾಗುತ್ತದೆ.



ಒಬ್ಬ ಮನುಷ್ಯ ಮಲೇರಿಯಾದಿಂದ ನರಳುತ್ತಿದ್ದಾಗ ಆ ಮನುಷ್ಯನ ರಕ್ತದಲ್ಲಿ ಮಲೇರಿಯಾ ರೋಗಾಣುಗಳು ಇರುತ್ತವೆ. ಹೆಣ್ಣು ಅನಾಫಿಲಿಸ್ ಸೊಳ್ಳೆಗೆ ರಕ್ತದ ಆಹಾರ ಬೇಕು. ಇಂತಹ ಸೊಳ್ಳೆ ಮಲೇರಿಯಾ ರೋಗಿಯನ್ನು ಕಚ್ಚಿ ರಕ್ತ ಹೀರಿದಾಗ ರಕ್ತದೊಡನೆ ಮಲೇರಿಯಾ ಪರಾನ್ನ ಜೀವಿಗಳು ಸೊಳ್ಳೆಯ ದೇಹ ಸೇರುತ್ತವೆ. ಸೊಳ್ಳೆಯ ದೇಹದಲ್ಲಿ ಅವು ಬೆಳೆಯುತ್ತವೆ. ಪರಾನ್ನ ಜೀವಿಗಳನ್ನು (ಪ್ಯಾರಾಸೈಟ್ಸ್) ತುಂಬಿಕೊಂಡ ಸೊಳ್ಳೆ ಬೇರೆಯವರನ್ನು ಕಚ್ಚುವಾಗ ತನ್ನ ಗಂಟಲಲ್ಲಿ




1. ಮಲೇರಿಯಾ ರೋಗಿಗೆ ಹೆಣ್ಣು ಅನಾಫಿಲೀಸ್ ಸೊಳ್ಳೆ ಕಚ್ಚಿದಾಗ...
2. ಸೊಳ್ಳೆಗಳ ಶರೀರದಲ್ಲಿ ರಕ್ತದ ಜೊತೆಗೆ ಮಲೇರಿಯಾ ಜೀವಾಣುಗಳು ಪ್ರವೇಶಿಸಿ, ಸಂಖ್ಯಾಭಿವೃದ್ಧಿ ಹೊಂದುತ್ತವೆ.
3. ಆ ಹೆಣ್ಣು ಸೊಳ್ಳೆ ಮತ್ತೊಬ್ಬ ಆರೋಗ್ಯವಂತನಿಗೆ ಕಚ್ಚಿದಾಗ ಮಲೇರಿಯಾ ಜೀವಾಣುಗಳು ಆರೋಗ್ಯವಂತನ ಶರೀರವನ್ನು ಪ್ರವೇಶಿಸುತ್ತವೆ.
4. ಕೆಲವು ದಿನಗಳ ನಂತರ ಆ ವ್ಯಕ್ತಿ ಮಲೇರಿಯಾ ರೋಗಕ್ಕೆ ಒಳಗಾಗುತ್ತಾನೆ.



ಮಲೇರಿಯಾ ಜ್ವರ ಹೇಗೆ ಬರುತ್ತದೆ?


ರೋಗಪೀಡಿತ ಸೊಳ್ಳೆ ಆರೋಗ್ಯವಂತ ಮನುಷ್ಯನನ್ನು ಕಚ್ಚಿದಾಗ ಮಲೇರಿಯಾ ಜೀವಾಣುಗಳು ಅವನ ಶರೀರವನ್ನು ಪ್ರವೇಶಿಸಿ ಮಲೇರಿಯಾ ಜ್ವರವನ್ನುಂಟು ಮಾಡುತ್ತವೆ.

ಇರುವ ಪರಾನ್ನ ಜೀವಿಗಳನ್ನು ಅವರ ದೇಹದಲ್ಲಿ ಬಿಡುತ್ತದೆ. ಹೀಗೆ ಪರಾನ್ನ ಜೀವಿಗಳನ್ನು ಪಡೆದ ಮನುಷ್ಯ ಮಲೇರಿಯಾ ರೋಗದಿಂದ ನರಳುತ್ತಾನೆ.

ಮಲೇರಿಯಾ ರೋಗಾಣುಗಳನ್ನು ಹೊಂದಿರುವ ರೋಗಿಯನ್ನು ಕಚ್ಚಿದ ಅನಾಫಿಲಿಸ್ ಹೆಣ್ಣು ಸೊಳ್ಳೆ 10ರಿಂದ 14 ದಿನಗಳೊಳಗಾಗಿ ರೋಗವನ್ನು ಹರಡುವ ಸ್ಥಿತಿಗೆ ಬರುತ್ತದೆ. 5ರಿಂದ 15 ದಿನಗಳೊಳಗಾಗಿ ಮನುಷ್ಯನಿಗೆ ಚಳಿಜ್ವರ ಆರಂಭವಾಗುತ್ತದೆ.

**ರೋಗಲಕ್ಷಣಗಳು:**

ನಿಂತ ನೀರಿನಲ್ಲಿ ಸೊಳ್ಳೆಗಳು ಹೇಗೆ ಬೆಳೆಯುತ್ತವೆ?



1. ಹೆಣ್ಣು ಸೊಳ್ಳೆ ನಿಂತ ನೀರಿನ ಮೇಲೆ ಮೊಟ್ಟೆಗಳನ್ನು ಇಡುತ್ತವೆ.
2. ಕೆಲವು ದಿನಗಳ ನಂತರ ಮರಿಗಳು (ಆರ್ವಾ) ಹೊರಬರುತ್ತವೆ.
3. ಒಂದು ವಾರದ ನಂತರ ಬೆಳೆದು ಪ್ಯೂಪಗಳಾಗಿ ಪರಿವರ್ತನೆ ಹೊಂದುತ್ತವೆ.
4. ಪ್ಯೂಪದಿಂದ ಸೊಳ್ಳೆ ಹೊರಬರುತ್ತವೆ.

- ವಿಪರೀತ ಜ್ವರ
- ವಿಪರೀತ ಚಳಿ
- ಮೈಬೆವರುವುದು
- ಮೈಕೈ ನೋವು
- ತಲೆನೋವು
- ಕೆಲವರಲ್ಲಿ ವಾಂತಿ, ಅನಂತರ ಸುಸ್ತು ಉಂಟಾಗುತ್ತದೆ.

**ಮಲೇರಿಯಾ ರೋಗವನ್ನು ಗುರ್ತಿಸುವುದು:**

ಯಾವುದೇ ಜ್ವರವಿರಲಿ, ರೋಗಿಯ ರಕ್ತಪರೀಕ್ಷೆಯ ನಂತರವಷ್ಟೇ ಮಲೇರಿಯಾ ಎಂದು ದೃಢಪಡಿಸಲು ಸಾಧ್ಯ.

ಸರ್ಕಾರಿ ಆಸ್ಪತ್ರೆ, ಆರೋಗ್ಯ ಕೇಂದ್ರ ಅಥವಾ ಜ್ವರ ಚಿಕಿತ್ಸಾ ಕೇಂದ್ರಗಳು ಹಾಗೂ ಮನೆ ಮನೆಗೆ ಭೇಟಿ ಕೊಡುವ ಆರೋಗ್ಯ ಸಹಾಯಕರಲ್ಲೂ ರಕ್ತ ಲೇಪನವನ್ನು ಕೊಡಬಹುದು.

**ಚಿಕಿತ್ಸೆ:**

ಯಾವುದೇ ಜ್ವರವಿರಲಿ, ತಡಮಾಡದೆ ರಕ್ತಪರೀಕ್ಷೆಯನ್ನು ಮಾಡಿಸಬೇಕು. ರಕ್ತ ಲೇಪನವನ್ನು ಪ್ರಯೋಗ ಶಾಲಾ ಪರೀಕ್ಷೆಗಾಗಿ ಕೊಟ್ಟ ತಕ್ಷಣ ವಯೋಮಿತಿಗೆ ಅನುಗುಣವಾಗಿ ಕ್ಲೋರೋಕ್ವಿನ್ ಮಾತ್ರೆಗಳನ್ನು ತೆಗೆದುಕೊಳ್ಳಬೇಕು.

**ರೋಗದ ನಿಯಂತ್ರಣ:**

1) ರಕ್ತ ಪರೀಕ್ಷೆಯಿಂದ ಮಲೇರಿಯಾ ರೋಗವೆಂದು ದೃಢಪಟ್ಟರೆ ಸೂಕ್ತ ಚಿಕಿತ್ಸೆ ಪಡೆಯುವುದು ಅತಿಮುಖ್ಯ.

2) ನಿಂತ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುವುದರಿಂದ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಸೂಕ್ತ ಕ್ರಮ ಕೈಗೊಳ್ಳುವುದು.


3) ಮಲಗುವಾಗ ತಪ್ಪದೆ ಸೊಳ್ಳೆ ಪರದೆಗಳನ್ನು ಉಪಯೋಗಿಸುವುದು.

4) ಮನೆಯ ಎಲ್ಲ ರೂಮುಗಳಿಗೂ ಕೀಟನಾಶಕವನ್ನು ಸಿಂಪಡಿಸುವುದು.

## 4. ಅತಿಸಾರ (ಅತಿಭೇದಿ) (Diarrhoea)

**ಅತಿಸಾರ ಭೇದಿ ಎಂದರೇನು?**

ದ್ರವದಂತಹ ಅಥವಾ ನೀರು ನೀರಾಗಿ ಆಗುವ ಮಲವಿಸರ್ಜನೆ, ಅತಿಸಾರಭೇದಿ. ನೀರು ನೀರಾದ ಮಲವು ಒಂದು ದಿನದಲ್ಲಿ ಮೂರು ಸಾರಿಗಿಂತ ಹೆಚ್ಚು ಸಾರಿ ಆಗಬಹುದು. ಆದರೆ, ಇದು, ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸಗೊಳ್ಳುತ್ತದೆ. ಮಗುವಿನ ವಿಷಯದಲ್ಲಿ, ತಾಯಿಯ ತೀರ್ಮಾನವೇ ನಂಬಲರ್ಹ. ಆದಾಗ್ಯೂ, ಒಂದೇ ಒಂದು ಸಾರಿಯಾದ ನೀರು ನೀರಾದ ಭೇದಿಯನ್ನು ಅತಿಸಾರ ಅಥವಾ ಡಯೇರಿಯಾ ಎಂದು ಕರೆಯುತ್ತಾರೆ.




ಅತಿಸಾರ ಭೇದಿಯಲ್ಲಿ, ಕಾಲರಾ ರೋಗದಂತೆ, ಅಕ್ಕಿ ಗಂಜಿಯಂತೆ ಭೇದಿಯಾಗಬಹುದು ಅಥವಾ ಮಲ ಮೆತ್ತಗಿರಬಹುದು. ಬ್ಯಾಸಿಲರಿಡೀಸೆಂಟರಿ ಅಥವಾ ಆಮಶಂಕೆಯಲ್ಲಿ, ರಕ್ತ, ಲೋಳೆ ಮತ್ತು ಕೀವು ಕಾಣಿಸಿಕೊಳ್ಳಬಹುದು ಅಥವಾ ಅಮೀಬಿಕ್ ಡೀಸೆಂಟ್ರಿಯಲ್ಲಿ ರಕ್ತ ಮತ್ತು ಲೋಳೆಯು ಕಾಣಿಸಿಕೊಳ್ಳಬಹುದು.

ಇತರೆ ರೋಗಲಕ್ಷಣಗಳೂ ಸಹ ಕಾಣಿಸಿಕೊಳ್ಳಬಹುದು. ಆ ಲಕ್ಷಣಗಳೆಂದರೆ: ವಾಕರಿಕೆ, ವಾಂತಿ, ಹೊಟ್ಟೆಯ ನೋವು ಅಥವಾ ಜ್ವರ.

ಭೇದಿ ಜಾಸ್ತಿಯಾದಾಗ, ನಿರ್ಜಲತೆ ಅಥವಾ ಡೀಹೈಡ್ರೇಷನ್ (ದೇಹದಲ್ಲಿ ನೀರಿನ ಅಂಶ ಕಡಿಮೆಯಾಗುವುದು) ಬಹಳ ಬೇಗನೆ ಉಂಟಾಗಬಹುದು. ಈ ನಿರ್ಜಲತೆ, ಹೆಚ್ಚಾಗಿ ಮಕ್ಕಳಲ್ಲಿ ಉಂಟಾಗುತ್ತದೆ.

ಮಗುವಿನಲ್ಲಿ, ನಿರ್ಜಲತೆ ಚಿಹ್ನೆ ಉಂಟಾದರೆ, ಆ ಮಗುವು ಅಪಾಯ ಸ್ಥಿತಿಯನ್ನು ತಲುಪುತ್ತದೆ. ಚಿಕಿತ್ಸೆ ನಿಧಾನವಾದರೆ ಸಾವು ಸಹ ಸಂಭವಿಸಬಹುದು.

**ಅತಿಸಾರ ಭೇದಿಯಿಂದ ಮಗುವಿನ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳು:**

* ಅತಿಸಾರ ಭೇದಿಯು ಮಗುವಿನ ದೇಹದಲ್ಲಿ ನಿರ್ಜಲತೆಯನ್ನು

ಉಂಟಮಾಡುತ್ತದೆ. ನಿರ್ಜಲತೆಯಿಂದಾಗಿ, ದೇಹದಿಂದ ನೀರು ಮತ್ತು ವಿವಿಧ ಲವಣಾಂಶಗಳು ನಷ್ಟ ಹೊಂದುತ್ತವೆ.

* ಅಪೌಷ್ಟಿಕತೆ: ಭೇದಿಯಿಂದಾಗಿ, ಮಗುವಿನಲ್ಲಿ ಪೌಷ್ಟಿಕಾಂಶಗಳೂ ಸಹ ನಷ್ಟವಾಗುವುದರಿಂದ, ಅಪೌಷ್ಟಿಕತೆ ಉಂಟಾಗುತ್ತದೆ.

**ಅತಿಸಾರ ಭೇದಿಗೆ ಚಿಕಿತ್ಸೆ:**

* ನೂರರಲ್ಲಿ ತೊಂಬತ್ತು ಅತಿಸಾರ ಪ್ರಕರಣಗಳಲ್ಲಿ, ನಿರ್ಜಲತೆ ಉಂಟಾಗುವುದಿಲ್ಲ. ಆದರೂ, ನಿರ್ಜಲತೆ ಉಂಟಾಗುವ ತನಕ ಕಾಯದೆ, ಮನೆಯಲ್ಲಿಯೇ ಸಿಗುವಂತಹ ಪಾನೀಯ (ಉದಾ: ಮಜ್ಜಿಗೆ, ಗಂಜಿ)ಗಳು ಮತ್ತು ಮೃದು ಆಹಾರ ಉಣಿಸುವುದನ್ನು ತಾಯಂದಿರು ಮುಂದುವರೆಸಬೇಕು.

* ನೂರರಲ್ಲಿ ಒಂಬತ್ತು ಪ್ರಕರಣಗಳಲ್ಲಿ, ಸ್ವಲ್ಪ ನಿರ್ಜಲತೆಯು ಕಂಡು ಬರುತ್ತದೆ. ಆದುದರಿಂದ, ನಿರ್ಜಲತೆಯನ್ನು ನಿವಾರಿಸಬೇಕಾದರೆ ಮೌಖಿಕ ಪುನರ್ಜಲೀಕರಣದ ಲವಣಗಳ ದ್ರಾವಣವನ್ನು (ಓ.ಆರ್.ಎಸ್) ಮಗುವಿಗೆ ಕೊಡಬೇಕು.

ರೋಗಿ ತುಂಬಾ ಸುಸ್ತಾದರೆ ಮತ್ತು ಈ ಕೆಳಕಂಡ ಲಕ್ಷಣಗಳು ಉಂಟಾದರೆ ತಡಮಾಡದೆ, ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಆಸ್ಪತ್ರೆಗೆ ಕರೆದೊಯ್ಯಬೇಕು.

**ಅಂತಹ ಲಕ್ಷಣಗಳೆಂದರೆ:**

* ಮಲ, ಅಕ್ಕಿ ಗಂಜಿಯಂತೆ ಇದ್ದರೆ
* ಮಲ, ಹಸಿರು ಬಣ್ಣದಿಂದ ಕೂಡಿದ್ದು, ರಕ್ತ, ಕೀವು ಅಥವಾ ಲೋಳೆ ಇದ್ದರೆ
* ಅತಿಯಾಗಿ ವಾಂತಿ ಆಗುತ್ತಿದ್ದರೆ
* ನಾಡಿಬಡಿತ ವೇಗವಾಗಿದ್ದರೆ ಅಥವಾ ಕಡಿಮೆಯಾಗಿದ್ದರೆ
* ಮೈಚರ್ಮ ತಣ್ಣಗಾಗಿದ್ದರೆ
* ಮೂತ್ರ ಕಪ್ಪು ಬಣ್ಣದಿಂದ ಕೂಡಿದ್ದರೆ
* ರೋಗಿ ಪ್ರಜ್ಞೆಯನ್ನು ಕಳೆದುಕೊಂಡಿದ್ದರೆ

ವಿ.ಸೂ.: ರೋಗಿಯನ್ನು ಆಸ್ಪತ್ರೆಗೆ ಸಾಗಿಸುತ್ತಿರುವಾಗಲೂ ಓ.ಆರ್.ಎಸ್. ಪಾನಕವನ್ನು ಚಮಚದ ಮೂಲಕ ಕುಡಿಸುತ್ತಿರಬೇಕು.

### 5. ಕರುಳಿನಲ್ಲಿ ಹುಳು(ಜಂತು)ಗಳು


ಭಾರತದಲ್ಲಿ ಜಂತುಹುಳುವಿನ ಸೋಂಕು ಬಹಳ ಹೆಚ್ಚು. ಈ ಸೋಂಕು ವಿಶೇಷವಾಗಿ ಮಕ್ಕಳಲ್ಲಿ ಹೆಚ್ಚು. ಹುಳುಗಳು ವಿವಿಧ ರೂಪಗಳಲ್ಲಿರುತ್ತವೆ. ಸಾಮಾನ್ಯವಾಗಿ ಕಾಣುವ ಹುಳುಗಳೆಂದರೆ ದುಂಡುಹುಳು (ರೌಂಡ್‌ವರ್ಮ್), ಲಾಡಿ ಹುಳು (ಟೇಪ್ ವರ್ಮ್) ದಾರದ ಹುಳು (ಥ್ರೆಡ್‌ವರ್ಮ್ (ಅಥವಾ ಪಿನ್‌ವರ್ಮ್) ಮತ್ತು ಕೊಕ್ಕೆಹುಳ (ಹುಕ್‌ವರ್ಮ್). ಅವು ಕರುಳಿನಲ್ಲಿ ವಾಸಿಸುತ್ತವೆ ಮತ್ತು ಮೊಟ್ಟೆಗಳನ್ನಿಡುತ್ತವೆ. ಅವು ಮಲದ ಮೂಲಕ ಹೊರಗೆ ಬರುತ್ತವೆ. ಈ ಮೊಟ್ಟೆಗಳು ಲಾರ್ವ ಮರಿ ಆಗಿ ಅಭಿವೃದ್ಧಿಗೊಂಡು ದೊಡ್ಡದಾಗುತ್ತವೆ.

ಪ್ರತಿ ವಿಧದ ಹುಳುವಿಗೂ ತನ್ನದೇ ಆದ ಜೀವನ ಚಕ್ರವಿರುತ್ತದೆ. ಮತ್ತು ತನ್ನದೇ ಆದ ಮಾರ್ಗದಿಂದ ಮನುಷ್ಯನ ದೇಹವನ್ನು ಸೇರುತ್ತದೆ.

ರೋಗಿಯ ಮಲವನ್ನು ಮೈಕ್ರೋಸ್ಕೋಪಿನಲ್ಲಿ ಪರೀಕ್ಷಿಸುವುದರಿಂದ, ಎಂತಹ ವಿಧದ ಹುಳುಗಳೆಂದು ಪತ್ತೆಹಚ್ಚಬಹುದು ಹಾಗೂ ಹುಳುಗಳ ಮೊಟ್ಟೆಗಳನ್ನೂ ಸಹ ಕಾಣಬಹುದು. ಜಂತುಹುಳು ಮತ್ತು ದಾರದ ಹುಳು ಸೋಂಕಿನಲ್ಲಿ, ಮಲದಲ್ಲಿ ವಯಸ್ಕ ಹುಳು (Adult Worms)ಗಳನ್ನು ನೋಡಬಹುದು.

#### i) ದುಂಡುಹುಳು (Round Worm)

ನೈರ್ಮಲ್ಯದ ಕೊರತೆ, ನೀರಿನ ಕೊರತೆ ಮತ್ತು ಶುದ್ಧವಾದ ನೀರಿನಲ್ಲಿ ತರಕಾರಿಗಳನ್ನು ತೊಳೆಯದೆ ಹಾಗೆಯೇ ತಿನ್ನುವುದರಿಂದ ಈ ಹುಳುವಿನ ಸೋಂಕು ಉಂಟಾಗುವುದು ಬಹಳ ಸಾಮಾನ್ಯ.



ಈ ಹುಳುಗಳು ಮನುಷ್ಯನನ್ನೇ ಅವಲಂಬಿಸಿರುವ ಪರಾವಲಂಬಿಗಳು, ಪ್ರೌಢಾವಸ್ಥೆಯ ಹುಳುಗಳು ಮನುಷ್ಯನ ಸಣ್ಣಕರುಳಿನಲ್ಲಿರುತ್ತವೆ.

ದುಂಡುಹುಳು ಮೊಟ್ಟೆಗಳು ಸಣ್ಣಕರುಳಿನಲ್ಲಿ ಉಂಟಾಗಿ ಮಲದ ಜೊತೆ ಹೊರ ಹಾಕಲ್ಪಡುತ್ತದೆ. ಮಕ್ಕಳನ್ನು ಬಯಲಿನಲ್ಲಿ ಕಕ್ಕಸಿಗೆ ಕೂಡಿಸುವುದರಿಂದ, ಮನೆಯ ಸುತ್ತಮುತ್ತಲ ಮಣ್ಣಿನಲ್ಲಿ ಹುಳುವಿನ ಮೊಟ್ಟೆಗಳು ಸೇರುತ್ತವೆ.

ಮಣ್ಣಿನಲ್ಲಿ ತೇವಾಂಶ ಇರುವಾಗ ಅದರಲ್ಲಿನ ಮೊಟ್ಟೆಗಳು 9ರಿಂದ 13 ದಿನಗಳಲ್ಲಿ ಕ್ರಿಮಿಯ ರೂಪವನ್ನು ತಾಳಿ ಸೋಂಕನ್ನುಂಟು ಮಾಡಬಲ್ಲವು.

ಸೋಂಕು ಉಂಟು ಮಾಡಬಲ್ಲ ಮೊಟ್ಟೆಗಳನ್ನು, ಹಸಿ ತರಕಾರಿ ಅಥವಾ ನೀರಿನ ಜೊತೆ ಸೇವಿಸಿದಾಗ ಅವು ಹೊಟ್ಟೆಯನ್ನು ಸೇರಿ, ಅನಂತರ ಸಣ್ಣಕರುಳನ್ನು ಸೇರುತ್ತವೆ.


ಸಣ್ಣಕರುಳಿನಲ್ಲಿ ಸೇರಿದ ಹುಳು, ಕರುಳಿನ ಗೋಡೆಗಳಲ್ಲಿ ತೂರಿ, ರಕ್ತ ಪರಿಚಲನೆಯಲ್ಲಿ ಬೆರೆತು, ಅನಂತರ, ಯಕೃತ್ (ಲಿವರ್), ಹೃದಯ ಮತ್ತು ಶ್ವಾಸಕೋಶಗಳನ್ನು ತಲುಪುತ್ತವೆ. ಹುಳುಗಳು, ಶ್ವಾಸಕೋಶದಿಂದ, ಶ್ವಾಸನಾಳಕ್ಕೆ ಸೇರಿ ಮತ್ತೆ ಹೊಟ್ಟೆಯನ್ನು ಸೇರುತ್ತವೆ. ಸಣ್ಣಕರುಳಿನಲ್ಲಿ ಅವು ಪ್ರೌಢಾವಸ್ಥೆಯ ಹುಳುವಾಗಿ ಬೆಳೆಯುತ್ತದೆ.

ಜಂತುಹುಳುಗಳು, ಕರುಳಿನಲ್ಲಿನ ಜೀರ್ಣವಾಗದ ಆಹಾರವನ್ನು ತಿಂದು ಜೀವಿಸುತ್ತವೆ. ಅದರಿಂದ, ಮಕ್ಕಳಲ್ಲಿ ಅಪೌಷ್ಟಿಕತೆ ಉಂಟಾಗುತ್ತದೆ. ಅಲ್ಲದೆ, ಹೊಟ್ಟೆನೋವು, ಅಜೀರ್ಣ ಮತ್ತು ನೀರುಭೇದಿ ಇತ್ಯಾದಿ ತೊಂದರೆಗಳು ಉಂಟಾಗುವುದಲ್ಲದೆ, ತುಂಬಾ ಅಶಕ್ತರನ್ನಾಗಿ ಮಾಡುತ್ತದೆ.

ಜಂತುಹುಳು ಬಾಧೆಯನ್ನು ಹೊಂದಿರುವ ವ್ಯಕ್ತಿ, ಮಲವನ್ನು ವಿಸರ್ಜಿಸಿದ ನಂತರ, ಸೋಪನ್ನು ಉಪಯೋಗಿಸಿ ತನ್ನ ಕೈಗಳನ್ನು ಶುದ್ಧವಾದ ನೀರಿನಿಂದ ತೊಳೆಯದಿದ್ದರೆ ಮತ್ತು ಆಹಾರ ಪದಾರ್ಥಗಳನ್ನು ವಿತರಿಸುವಾಗ ಆತನು/ಆಕೆ, ಇತರರಿಗೆ ಸೋಂಕನ್ನುಂಟು ಮಾಡಬಲ್ಲರು.

ರೋಗ ಹರಡುವುದನ್ನು ತಡೆಗಟ್ಟಲು ಇರುವ ಏಕೈಕ ಮಾರ್ಗವೆಂದರೆ ಮಲ-ಮೂತ್ರಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡಿ, ಸೋಂಕು ನಿವಾರಣೆಯನ್ನು ಮಾಡುವುದು. ಪ್ರತಿಯೊಬ್ಬರೂ ಊಟ ಮಾಡುವ ಮೊದಲು ಹಾಗೂ ಮಲವಿಸರ್ಜನೆಯ ನಂತರ ಕಡ್ಡಾಯವಾಗಿ, ಸೋಪು ಹಚ್ಚಿ ಕೈ ತೊಳೆಯಬೇಕು.

### ii) ದಾರದ ಹುಳುಗಳು (Thread Worms)



ದಾರದ ಹುಳುಗಳು ಅಥವಾ ಪಿನ್‌ವರ್ಮ್ಸ್ ಸಹ ಮಕ್ಕಳಲ್ಲಿ ಸಾಮಾನ್ಯ. ಹುಳುಗಳು ಕರುಳಿನಲ್ಲಿ ವಾಸಿಸುತ್ತವೆ ಮತ್ತು ಮಲದ ಮೂಲಕ ಹೊರಹೊಮ್ಮುತ್ತವೆ. ಈ ಹುಳುಗಳು ಬಿಳಿಯ ದಾರದಂತೆ, ಸಣ್ಣ ಸಣ್ಣ ಚೂರುಗಳಂತೆ ಕಾಣುತ್ತವೆ. ಹೆಣ್ಣು ಹುಳುಗಳು, ರಾತ್ರಿಯ ವೇಳೆ, ಗುದದ್ವಾರದ ಮೂಲಕ ಹೊರ ಬರುತ್ತವೆ ಮತ್ತು ಅಂಟು ಅಂಟಾದ ಮೊಟ್ಟೆಗಳನ್ನು ಗುದದ್ವಾರದ ಚರ್ಮದ ಸುತ್ತ ಇಡುತ್ತವೆ. ಅದರಿಂದಾಗಿ, ಗುದದ್ವಾರ ಭಾಗದಲ್ಲಿ ತುರಿಕೆ (ನವೆ) ಉಂಟಾಗುತ್ತದೆ. ಮಗು, ಗುದದ ಭಾಗದಲ್ಲಿ ಉಜ್ಜಿಕೊಂಡಾಗ, ಗೀರಿಕೊಂಡಾಗ, ಬೆರಳಿನ ಉಗುರುಗಳಿಗೆ, ಮೊಟ್ಟೆಗಳು ಅಂಟಿಕೊಳ್ಳುತ್ತವೆ ಮತ್ತು ಆ ಮೊಟ್ಟೆಗಳು ಬಾಯಿ ಅಥವಾ ಆಹಾರದ ಮೂಲಕ ದೇಹವನ್ನು ಸೇರಿದಾಗ, ಮಗುವಿಗೆ ಪುನಃ ಸೋಂಕು ಉಂಟಾಗುತ್ತದೆ. ಮೊಟ್ಟೆಗಳು, ಹಾಸಿಗೆ ಮತ್ತು ಬಟ್ಟೆಗಳನ್ನು ಕಲುಷಿತಗೊಳಿಸುತ್ತವೆ. ಅದರಿಂದಾಗಿ, ಕುಟುಂಬದ ಇತರೆ ಸದಸ್ಯರಿಗೂ ಸೋಂಕು ಉಂಟಾಗುತ್ತದೆ.

ಮಗುವಿನ ಗುದದ್ವಾರದಲ್ಲಿ ನವೆ ಉಂಟಾದರೆ, ಮಲದ ಮೂಲಕ, ದಾರದ ಹುಳುಗಳು ಮತ್ತು ದಾರದ ಹುಳುವಿನ ಮೊಟ್ಟೆಗಳು ಹೊರಗೆ ಬರುತ್ತವೆ.

– ಜಂತುಹುಳಗಳ ನಿವಾರಣೆಗಾಗಿ, ವೈದ್ಯರ ಸಲಹೆಯ ಮೇರೆಗೆ ಔಷಧಿಯನ್ನು ಕೊಡಿರಿ.


– ಮಲಗುವ ಸಮಯದಲ್ಲಿ ವ್ಯಾಸೆಲೈನ್‌ನನ್ನು ಮಗುವಿನ ಗುದದ್ವಾರದ ಭಾಗದಲ್ಲಿ ಹಚ್ಚಿ ಸ್ವಲ್ಪಮಟ್ಟಿಗೆ ನವೆ ಕಡಿಮೆಯಾಗುತ್ತದೆ.

– ಮಗುವಿನ ಕೈಬೆರಳಿನ ಉಗುರು ಚಿಕ್ಕದಾಗಿರುವಂತೆ, ಸ್ವಚ್ಛವಾಗಿರುವಂತೆ ಗಮನಹರಿಸಬೇಕು.

– ಮಗುವಿಗೆ ಪ್ರತಿದಿನ ಸ್ನಾನ ಮಾಡಿಸಿ, ಶುಭ್ರವಾದ ಡ್ರೆಸ್‌ನ್ನು ಹಾಕಬೇಕು.

– ಕುಟುಂಬದ ಇತರೆ ಸದಸ್ಯರಲ್ಲೂ ಥ್ರೆಡ್‌ವರ್ಮ್ (ದಾರದಹುಳು)ಗಳಿದ್ದರೆ ಸೂಕ್ತ ಚಿಕಿತ್ಸೆಯನ್ನು ಕೊಡಿಸಬೇಕು.

### iii) ಕೊಕ್ಕೆಹುಳುಗಳು (Hook Worms)



ಕೊಕ್ಕೆಹುಳುಗಳು, ಸಣ್ಣಕರುಳಿನಲ್ಲಿ ವಾಸಿಸುತ್ತವೆ ಮತ್ತು ಕರುಳಿನ ಗೋಡೆಗೆ ಅಂಟಿಕೊಂಡಿರುತ್ತವೆ. ಪ್ರೌಢಾವಸ್ಥೆಯ ಹೆಣ್ಣು ಹುಳುಗಳು ಸಾವಿರಗಟ್ಟಲೆ ಮೊಟ್ಟೆಗಳನ್ನಿಡುತ್ತವೆ. ಈ ಮೊಟ್ಟೆಗಳು, ಮಲದ ಮೂಲಕ ಹೊರಕ್ಕೆ ಬರುತ್ತವೆ. ತೇವಾಂಶದ ಮಣ್ಣಿರುವ ಜಾಗದಲ್ಲಿ ಮನುಷ್ಯ, ಬರಿಗಾಲಲ್ಲಿ ನಡೆದಾಗ, ಲಾರ್ವ (ಮರಿ), ಚರ್ಮವನ್ನು ಕಚ್ಚಿ ದೇಹವನ್ನು ಪ್ರವೇಶಿಸುತ್ತದೆ. ಲಿಂಫ್ ನಾಳಗಳ ಮೂಲಕ ರಕ್ತ ಪರಿಚಲನೆಯಲ್ಲಿ ಸೇರುತ್ತವೆ. ಅವು, ಶ್ವಾಸಕೋಶಗಳನ್ನು ಸೇರಿ, ಅನಂತರ ಶ್ವಾಸನಾಳ ತಲುಪಿ ಹೊಟ್ಟೆಯೊಳಕ್ಕೆ ಸೇರುತ್ತವೆ. ಸಣ್ಣಕರುಳನ್ನು ಸೇರಿದ ಲಾರ್ವಗಳು (ಮರಿಗಳು) ಪ್ರೌಢಾವಸ್ಥೆಯ ಹುಳುಗಳಾಗಿ ಬೆಳವಣಿಗೆ ಹೊಂದುತ್ತವೆ.

**ಕೊಕ್ಕೆಹುಳುವಿನ ಸೋಂಕಿನ ಲಕ್ಷಣಗಳು ಯಾವುವೆಂದರೆ:**

- ಲಾರ್ವ, ಚರ್ಮದೊಳಕ್ಕೆ ಸೇರಿದಾಗ ತುರಿಕೆ (ನವೆ)ಯನ್ನುಂಟು ಮಾಡುತ್ತದೆ.
- ಕೊಕ್ಕೆಹುಳುಗಳು, ಕರುಳಿನ ಗೋಡೆಯಿಂದ ರಕ್ತವನ್ನು ಹೀರುವುದರಿಂದ, ರಕ್ತಹೀನತೆ ಉಂಟಾಗುತ್ತದೆ.
- ವ್ಯಕ್ತಿಯಲ್ಲಿ ನಿಶ್ಶಕ್ತಿ ಉಂಟಾಗುತ್ತದೆ ಮತ್ತು ಹಸಿವು ಉಂಟಾಗುವುದಿಲ್ಲ.
- ಕೊಕ್ಕೆಹುಳುವಿನ ಮೊಟ್ಟೆಗಳನ್ನು ಮಲದಲ್ಲಿ ಕಾಣಬಹುದು.
- ವ್ಯಕ್ತಿಯ ಮಲದಲ್ಲಿ ಕೊಕ್ಕೆಹುಳುವಿನ ಮೊಟ್ಟೆಗಳು ಕಂಡು ಬಂದರೆ, ವೈದ್ಯರ ಸಲಹೆ ಮೇರೆಗೆ ಔಷಧಿಯನ್ನು ಕೊಡಬೇಕು.
- ಅಲ್ಲದೆ, ವ್ಯಕ್ತಿಗೆ ಐರನ್ ಮತ್ತು ಫೋಲಿಕ್ ಆ್ಯಸಿಡ್ ಮಾತ್ರೆಗಳನ್ನು ಕೊಡಬೇಕು.

ಸಮುದಾಯಕ್ಕೆ ಸಲಹೆ:

* ಸ್ಯಾನಿಟರಿ ಲ್ಯಾಟ್ರೀನ್‌ಗಳನ್ನು ನಿರ್ಮಿಸಿ, ಉಪಯೋಗಿಸಿರಿ.
* ಮಲವನ್ನು ವಿಸರ್ಜಿಸಿದ ನಂತರ, ಮೈ ಸೋಪನ್ನು ಉಪಯೋಗಿಸಿ ಸರಿಯಾಗಿ ಕೈಗಳನ್ನು ತೊಳೆದುಕೊಳ್ಳಬೇಕು.

* ಆಹಾರವನ್ನು ಸೇವಿಸುವ ಮೊದಲು, ವಿತರಿಸುವ ಮೊದಲು ಕೈಗಳನ್ನು ಮೈ ಸೋಪನ್ನು ಉಪಯೋಗಿಸಿ ಚೆನ್ನಾಗಿ ತೊಳೆದುಕೊಳ್ಳಬೇಕು.

* ಮಕ್ಕಳು ಮಣ್ಣನ್ನು ತಿನ್ನಬಾರದು ಅಥವಾ ನೆಲದ ಮೇಲೆ ಬಿದ್ದಿರುವ ಆಹಾರ ಪದಾರ್ಥಗಳನ್ನು ಸಹ ಸೇವಿಸಬಾರದು.

* ಉಗುರುಗಳನ್ನು ಚಿಕ್ಕದಾಗಿ ಮತ್ತು ಶುಭ್ರವಾಗಿಟ್ಟುಕೊಳ್ಳಬೇಕು.

* ಮಕ್ಕಳು ಬೆರಳು ಚೀಪುವುದನ್ನು, ಉಗುರು ಕಚ್ಚುವುದನ್ನು ಮತ್ತು ಗುದದ್ವಾರದ ಭಾಗವನ್ನು ಉಜ್ಜಿಕೊಳ್ಳುವುದನ್ನು ತಪ್ಪಿಸಬೇಕು.

– ಪ್ರತಿದಿನ ಸ್ನಾನ ಮಾಡಿಸಿ, ಡ್ರೆಸ್‌ನ್ನು ಬದಲಾಯಿಸಬೇಕು.

– ಬರೀ ಪಾದದಲ್ಲಿ ಹೊರಗಡೆ ತಿರುಗಾಡಬಾರದು.

– ಪಾದರಕ್ಷೆಗಳನ್ನು ಮನೆಯ ಹೊರಭಾಗದಲ್ಲಿ ಬಿಡಬೇಕು. ಪಾದರಕ್ಷೆಯನ್ನು ಊಟದ ಮನೆ/ಅಡುಗೆಮನೆಗೆ ತರಬಾರದು.

– ಹೊರಗಡೆಯಿಂದ ಮನೆಗೆ ಹೋದ ಕೂಡಲೇ ಕೈಕಾಲುಗಳನ್ನು ತೊಳೆದುಕೊಳ್ಳಬೇಕು.

– ಕುಟುಂಬದ ಸದಸ್ಯರು ಯಾರಾದರೂ ಜಂತುಹುಳು / ಕೊಕ್ಕೆಹುಳುವಿನ ಬಾಧೆಯನ್ನು ಹೊಂದಿದ್ದರೆ ವೈದ್ಯರ ಸಲಹೆ ಮೇರೆಗೆ ಚಿಕಿತ್ಸೆಯನ್ನು ಕೊಡಿಸಬೇಕು.

– ವೈಯಕ್ತಿಕ ಶುಚಿತ್ವವನ್ನು ಪರಿಪಾಲಿಸಬೇಕು.

– ಪರಿಸರ, ನೈರ್ಮಲ್ಯದಿಂದ ಕೂಡಿರುವಂತೆ ಪ್ರಯತ್ನಿಸಬೇಕು.

## ಟೇಪ್‌ವರ್ಮ್

ಸಾಮಾನ್ಯವಾದ ಎರಡು ವಿಧದ ಟೇಪ್‌ವರ್ಮ್‌ಗಳಿವೆ. ಇವನ್ನು ಲಾಡಿಹುಳ, ಟೇಪುಹುಳು, ರಿಬ್ಬನ್‌ಹುಳು ಎಂತಲೂ ಕರೆಯುತ್ತಾರೆ. ಇವು ಮನುಷ್ಯನ ಕರುಳಿನಲ್ಲಿ ಜೀವಿಸುತ್ತವೆ. ಮತ್ತು ಇವುಗಳ ಕೋಶಿಕ (Cystic Stage) ಹಂತ ಪ್ರಾಣಿಗಳಲ್ಲಿ ಜರುಗುತ್ತದೆ. ಮನುಷ್ಯನಲ್ಲೂ ಜರುಗುತ್ತದೆ.

ಮಾಂಸಾಹಾರಿಗಳನ್ನು ಮಾತ್ರ ಅವಲಂಬಿಸಿರುವ ಹುಳು ಲಾಡಿಹುಳು. ಬಿಳಿ ಅರೆ ಪಾರದರ್ಶಕ ದೇಹದ ಈ ಹುಳುಗಳ ಉದ್ದ ಅನೇಕ ಅಡಿಗಳಲ್ಲಿರುತ್ತದೆ. ದೇಹ ಉದ್ದವಾಗಿದ್ದರೂ ತಲೆ ಮತ್ತು ಕುತ್ತಿಗೆ ಕೇವಲ ಗುಂಡು ಸೂಜಿಯ ಅರ್ಧದಷ್ಟಿರುತ್ತದೆ. ಉಳಿದ ದೇಹ ಅನೇಕ ತುಂಡುಗಳ ಜೋಡಣೆಯಿಂದ ಕೂಡಿರುತ್ತದೆ.

ಪೂರ್ಣ ಬಲಿತು ತತ್ತಿಯಿಂದ ತುಂಬಿದ ದೇಹದ ಕೊನೆಯ ತುಂಡು ಕಳಚಿ ಬೀಳುತ್ತಲೇ ಮುಂಭಾಗದಿಂದ ಹೊಸದೊಂದು ತುಂಡು ಜನ್ಮ ತಾಳುತ್ತದೆ. ಒಂದೇಹುಳುವಿನಲ್ಲಿ ಗಂಡು-ಹೆಣ್ಣು ಎರಡೂ ಲಿಂಗವಿರುತ್ತದೆ.

ಮನುಷ್ಯನಿಗೆ ತಗಲುವ ಲಾಡಿಹುಳುವಿನಲ್ಲಿ ಮುಖ್ಯವಾಗಿ ಎರಡು ವಿಧ.

1) ಹಸುವಿನ ಮಾಂಸವನ್ನು ತಿನ್ನುವುದರಿಂದ ಹಸುವಿನ ಟೇಪುಹುಳ ಉಂಟಾಗುತ್ತದೆ.

2) ಹಂದಿ ಮಾಂಸವನ್ನು ತಿನ್ನುವುದರಿಂದ ಹಂದಿ ಟೇಪುಹುಳ ಉಂಟಾಗುತ್ತದೆ.

**ದನದ ಮಾಂಸದ ಟೇಪುಹುಳು:**

ಹುಳಗಳು, ಮನುಷ್ಯನ ಕರುಳಿನಲ್ಲಿ ವಾಸಿಸುತ್ತವೆ. ಮತ್ತು 20 ಅಥವಾ 24 ಅಡಿ ಉದ್ದ ಬೆಳೆಯುತ್ತದೆ. ತಮ್ಮ ಸಂತತಿಯ ಉಳಿವಿಗಾಗಿ ಮೊಟ್ಟೆ ತುಂಬಿದ ದೇಹದ ತುಂಡನ್ನೇ ಕಳಚಿಕೊಳ್ಳುತ್ತವೆ. ಮಲದೊಂದಿಗೆ ಭೂಮಿಯನ್ನು ಸೇರಿದ ಮೊಟ್ಟೆಗಳು ಮೇವಿನೊಂದಿಗೆ ಬೆರೆತು ಹಸುವಿನ ದೇಹವನ್ನು ಸೇರುತ್ತದೆ. ಹಸುವಿನ ಟೇಪುಹುಳದ ಮೊಟ್ಟೆ ಹಸುವನ್ನು ಸೇರಿದಾಗ ಮಾತ್ರ ಮುಂದೆ ಬೆಳೆಯುತ್ತದೆ.

**ಲಕ್ಷಣಗಳು:**

ಸಾಮಾನ್ಯವಾಗಿ ಸೋಂಕುಗೊಂಡ ವ್ಯಕ್ತಿ ತನ್ನ ಮಲದಲ್ಲಿ ತುಂಡುಗಳನ್ನು ಕಾಣುತ್ತಾನೆ. ಅಜೀರ್ಣವಿರುತ್ತದೆ, ಹೊಟ್ಟೆಯ ನುಲಿತವಿರುತ್ತದೆ. ಅತಿಯಾದ ಹಸಿವು

ಇರುತ್ತದೆ ಅಥವಾ ಹಸಿವಿನ ನಾಶವಾಗಿರುತ್ತದೆ. ಕೆಲವೊಮ್ಮೆ, ರಕ್ತಹೀನತೆ ಮತ್ತು ನರಗಳ ದೌರ್ಬಲ್ಯವು ಇರುತ್ತದೆ.

**ತಡೆಗಟ್ಟುವಿಕೆ:**

ಮಾಂಸವನ್ನು ಸರಿಯಾಗಿ ಪರಿಶೀಲಿಸಬೇಕು ಮತ್ತು ಸರಿಯಾಗಿ ಬೆಂದಿರದ ಮಾಂಸವನ್ನು ಸೇವಿಸಬಾರದು.

**ಹಂದಿ ಮಾಂಸದ ಟೇಪುಹುಳ:**

ಇದು ಬಹಳ ಸಣ್ಣದಾದ ಹುಳ. 6ರಿಂದ 12 ಅಡಿ ಉದ್ದವಿರುತ್ತದೆ. ಇದು ಸಹ ಮನುಷ್ಯನ ಕರುಳಿಗೆ ಅಂಟಿಕೊಂಡಿರುತ್ತದೆ. ರೋಗಿಯಲ್ಲಿ ಅನೇಕ ಹುಳುಗಳಿರುತ್ತವೆ.

ಸರಿಯಾಗಿ ಬೆಂದಿರದ ಹಂದಿ ಮಾಂಸವನ್ನು ತಿನ್ನುವುದರಿಂದ ಮನುಷ್ಯನಲ್ಲಿ ಟೇಪುಹುಳುಗಳು ರೂಪುಗೊಳ್ಳುತ್ತವೆ.

ನಾಯಿಗಳನ್ನು ನೆಚ್ಚಿಕೊಂಡಿರುವ ನಾಯಿಟೇಪುಹುಳುವಿನ ಮೊಟ್ಟೆ ಅನಿರೀಕ್ಷಿತವಾಗಿ ಅಂದರೆ, ನಾಯಿಯೊಂದಿಗೆ ಸಾಮಿಪ್ಯ ಸಂಪರ್ಕ, ನಾಯಿಮಲದೊಂದಿಗೆ ಸಂಪರ್ಕ ಪಡೆದ ಆಹಾರ ಸೇವನೆಯಿಂದ, ಮನುಷ್ಯನ ಶರೀರವನ್ನು ಸೇರಿ ಪೂರ್ಣ ಬೆಳೆಯದೆ ನಮ್ಮ ಯಕೃತ್ತು, ಶ್ವಾಸಕೋಶ, ಮೂತ್ರಪಿಂಡ, ಮೆದುಳು, ಮಾಂಸಖಂಡ, ಮೂಳೆಗಳಲ್ಲಿ ಉಳಿದು, ನೀರು ತುಂಬಿದ ಗಡ್ಡೆಯಂತೆ ರೂಪಾಂತರಗೊಂಡು, ಪ್ರಾಣಾಂತಿಕ ಹಿಂಸೆಯನ್ನು ನೀಡುವುದು. ಈ ಗಡ್ಡೆಯನ್ನು ಸರ್ಜನ್‌ರವರು ಹೊರ ತೆಗೆಯಲು ಬಹಳ ಶ್ರಮಿಸಬೇಕಾಗುತ್ತದೆ.

**6. ಹೇನು(ಕೂರೆ)**

ಹೇನು ತುಂಬ ಚಿಕ್ಕದಾದ, ರೆಕ್ಕೆಯಿಲ್ಲದ, ರಕ್ತ ಹೀರುವ ಕೀಟವಾಗಿದೆ. ಹೇನಿನ ಹಾವಳಿ ಸಾಮಾಜಿಕ ಸಂಪರ್ಕ ಮತ್ತು ಪ್ರವಾಸ ಹೆಚ್ಚಿರುವುದರಿಂದ ವಿಶ್ವದಾದ್ಯಂತ, ಮುಖ್ಯವಾದ ಆರೋಗ್ಯ ಸಮಸ್ಯೆಯಾಗಿದೆ. ಜೀವಿಸುವ ಸ್ಥಿತಿ ಬಡತನದಿಂದ ಕೂಡಿರುವುದರಿಂದ, ವೈಯಕ್ತಿಕ ನೈರ್ಮಲ್ಯದ ಕೊರತೆಯಿಂದ ಮತ್ತು ಅತಿಯಾದ ಜನಗಳ ಸಾಂದ್ರತೆಯಿಂದ ಹೇನಿನ ಸೋಂಕು ಸಾಂಕ್ರಾಮಿಕ ರೀತಿಯಲ್ಲಿ ಹರಡುತ್ತದೆ. ಹೇನುಗಳ ಸೋಂಕು ದೇಹವನ್ನು ಚುಚ್ಚಿ ರಕ್ತ ಹೀರುವಾಗ ಅಲ್ಲಿ ಒಸರುವ ಜೊಲ್ಲು ರಸ ಆ ಪ್ರದೇಶವನ್ನು ಕೆರಳಿಸಿ ತನ್ನ ಲಕ್ಷಣಗಳನ್ನು ಪ್ರಕಟಿಸುತ್ತದೆ. ಅದರ ಮುಖ್ಯ ಲಕ್ಷಣ ತುರಿಕೆ (ನವೆ). ವಿಪರೀತ ಕೆರೆತದಿಂದ

ಚರ್ಮ ಬಿರಿಯುವುದು. ಅದು ಬ್ಯಾಕ್ಟೀರಿಯಾ ಸೋಂಕಿಗೆ ಒಳಪಟ್ಟು, ಕೀವು ಗುಳ್ಳೆಗಳಿಗೆ, ಕತ್ತಿನ ಹಾಲ್ರಸ ಗ್ರಂಥಿಗಳ ಉಬ್ಬುಗೆಗೆ ಕಾರಣವಾಗುತ್ತದೆ.

ದೇಹದಲ್ಲಿ ಹೇನುಗಳು ತಲೆಭಾಗದಲ್ಲಿ, ಗುಪ್ತಾಂಗ ಭಾಗದಲ್ಲಿ ಮತ್ತು ಮೈಮೇಲೆ ಇರುತ್ತವೆ. ಪ್ರತಿ ವಿಧದ ಹೇನು ಭಿನ್ನ ಆಕಾರದಲ್ಲಿರುತ್ತದೆ. ಅವೆಲ್ಲವು ಚರ್ಮವನ್ನು ಕಚ್ಚುತ್ತವೆ ಮತ್ತು ರಕ್ತವನ್ನು ಹೀರುತ್ತದೆ. ಅವು ದೇಹದ ಮೇಲೆ ಒಂದು ತಿಂಗಳ ಕಾಲ ಬದುಕಿರುತ್ತವೆ. ಫಲವಂತಿತ ಹೆಣ್ಣು ಕೀಟ 7ರಿಂದ 10 ಮೊಟ್ಟೆಗಳನ್ನಿಡುತ್ತವೆ.

ತಲೆ ಹೇನು:

ತಲೆ ಹೇನುಗಳು ವಿಶೇಷವಾಗಿ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದ ಮಕ್ಕಳಲ್ಲಿರುತ್ತವೆ. ಹೇನುಗಳು ಕೂದಲುಗಳನ್ನೇ ಮನೆ ಮಾಡಿಕೊಂಡು, ತಲೆಯ ನೆತ್ತಿಯಲ್ಲಿ ಅತಿಯಾದ ನವೆ (ತುರಿಕೆ)ಯನ್ನುಂಟು ಮಾಡುತ್ತವೆ. ಅಲ್ಲದೆ, ಕತ್ತು ಹಿಂಭಾಗ ಮತ್ತು ಕಿವಿಗಳ ಹಿಂಭಾಗ ಸಹ ಹೇನುಗಳ ವಾಸಸ್ಥಾನವಾಗಿರುತ್ತವೆ. ತೀವ್ರವಾದ ಪ್ರಕರಣಗಳಲ್ಲಿ, ನಿಮ್ಮ ಕತ್ತಿನ ಹಾಲ್ರಸ (ಲಿಂಪ್‌ಗ್ಲಾಂಡ್ಸ್) ಗ್ರಂಥಿಗಳು ಸಹ ಊತಗೊಂಡಿರುತ್ತದೆ.

ನೀವು ಬಹಳ ಸಮೀಪದಿಂದ ನೋಡಿದಾಗ ಕೂದಲು ಒಂದರಲ್ಲಿ ಸಣ್ಣದಾದ ಬೆಳ್ಳಿ ಬಣ್ಣದ ಮೊಟ್ಟೆಯಿರುತ್ತದೆ. ಈ ಮೊಟ್ಟೆಗಳು ನೆತ್ತಿಯ ಸಾಮಿಪ್ಯದಲ್ಲೇ ಇರುತ್ತವೆ. ಅದು ತಲೆ ಹೊಟ್ಟಿನ ರೀತಿಯಲ್ಲಿ ಕಾಣುತ್ತದೆ. ಅದನ್ನು ತಲೆಹೊಟ್ಟು ತೆಗೆಯುವಂತೆ ತೆಗೆಯಲಾಗುವುದಿಲ್ಲ. ಏಕೆಂದರೆ, ಅದು ಕೂದಲಿನ ಬುಡದಲ್ಲಿ ಅಂಟಿಕೊಂಡಿರುತ್ತದೆ.

ತಲೆ ಹೇನು ನೇರ ಸಂಪರ್ಕದಿಂದ ಹರಡುತ್ತದೆ. ವ್ಯಕ್ತಿಗತ ವಸ್ತುಗಳಾದ ಬಾಚಣಿಗೆಗಳು, ಬ್ರಷ್‌ಗಳು ಮತ್ತು ತಲೆದಿಂಬಿನ ಕವರುಗಳ ಮೂಲಕ ಮತ್ತು ಬಟ್ಟೆಗಳ ಮೂಲಕ ಅಂದರೆ, ಹ್ಯಾಟ್‌ಗಳು, ಸ್ಕಾರ್ಫ್‌ಗಳಿಂದ, ರಿಬ್ಬನ್‌ಗಳು ಮತ್ತು ಇತರೆ ತಲೆಯನ್ನು ಮುಚ್ಚುವ ವಸ್ತುಗಳಿಂದಲೂ ಹರಡುತ್ತದೆ.

ಕುಟುಂಬದಲ್ಲಿ ಒಬ್ಬರಿಗೆ ಅಥವಾ ತರಗತಿಯಲ್ಲಿ ಒಬ್ಬರ ತಲೆಯಲ್ಲಿ ಹೇನು ಇದ್ದರೆ ಅದು, ಮನೆಯಲ್ಲಿ ಅಥವಾ ತರಗತಿಯ ಇತರರಿಗೂ ಹರಡುತ್ತದೆ.

ತಲೆಯಲ್ಲಿ ಹೇನು ಇದ್ದರೆ, ಚಿಕಿತ್ಸೆ ಸರಳ ಮತ್ತು ಪರಿಣಾಮಕಾರಿಯಾಗಿರುತ್ತದೆ. ವೈದ್ಯರು ಸೂಚಿಸುವ ಶ್ಯಾಂಪೂವನ್ನು ಕೂದಲಿಗೆ ಹಚ್ಚಿ ಸ್ನಾನ ಮಾಡಿ, ನಂತರ ಬಾಚಣಿಗೆಯಿಂದ ಬಾಚಬೇಕು. ಹೇನು ಹರಡುವುದನ್ನು ತಡೆಗಟ್ಟಲು ಸಂದೇಹ ಇರುವ ಎಲ್ಲ ಬಟ್ಟೆಬರೆಗಳನ್ನು ಚೆನ್ನಾಗಿ ಒಗೆದು ಬಿಸಿಲಲ್ಲಿ ಒಣಗಿಸಬೇಕು.

**ಗುಪ್ತಾಂಗದಲ್ಲಿ ಹೇನು:**

ಗುಪ್ತಾಂಗದ ಹೇನು, ಲೈಂಗಿಕ ಸಂಪರ್ಕದಿಂದ ಹೆಚ್ಚಾಗಿ ಹರಡುತ್ತವೆ. ಇವು ಸ್ತ್ರೀಯರಲ್ಲಿ 15 ಮತ್ತು 19ನೇ ವಯೋಮಾನದಲ್ಲಿ ಹೆಚ್ಚಾಗಿರುತ್ತವೆ ಮಸತ್ತು 20 ವರ್ಷದ ಮೇಲ್ಪಟ್ಟ ಪುರುಷರಲ್ಲಿ ಸಾಮಾನ್ಯವಾಗಿರುತ್ತವೆ.

ಸಾಮಾನ್ಯವಾಗಿ ಗುಪ್ತಾಂಗದ ಹೇನುಗಳು ಲೈಂಗಿಕ ಅಥವಾ ಸಾಮಿಪ್ಯ ಶಾರೀರಿಕ ಸಂಪರ್ಕದಿಂದ ಹರಡುತ್ತವೆ. ಆದರೆ, ಅವು ಹೇನು ಸೋಂಕಿರುವ ಹಾಸಿಗೆ ಅಥವಾ ಉಡುಪುಗಳನ್ನು ಉಪಯೋಗಿಸುವುದರಿಂದಲೂ ಹರಡುತ್ತವೆ.

ಗುಪ್ತಾಂಗದಲ್ಲಿ ಹೇನುಗಳಿದ್ದರೆ ತುರಿಕೆಯಿರುತ್ತದೆ. ಅದು ರಾತ್ರಿಯ ವೇಳೆ ಹೆಚ್ಚಾಗಿ ತುರಿಕೆಯನ್ನುಂಟು ಮಾಡುತ್ತದೆ. ವೈದ್ಯರು ಸೂಚಿಸಿರುವ ಶಾಂಪೂವನ್ನೇ ಬಳಸಿ, ನಿವಾರಿಸಿಕೊಳ್ಳಬೇಕು.

**ಮೈಮೇಲಿನ ಹೇನು:**

ಹೇನು ಚರ್ಮದ ಮೇಲ್ಮೈಗೆ ಮತ್ತು ಧರಿಸುವ ಉಡುಪಿನ ಮಡಿಕೆ ಮತ್ತು ಸುಕ್ಕುಗಳಿಗೆ ಅಂಟಿಕೊಂಡು ಬದುಕುತ್ತವೆ.

**ತಡೆಗಟ್ಟಿಕೊಳ್ಳುವುದು ಹೇಗೆ?**

1) ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳಬೇಕು.

2) ಪ್ರತಿದಿನ ಸ್ನಾನ ಮಾಡಿ, ಇಸ್ತ್ರಿ ಮಾಡಿದ ಉಡುಪುಗಳನ್ನು ಧರಿಸಬೇಕು.

3) ಸೋಂಕು ಹೊಂದಿದವರ ಬಟ್ಟೆಗಳ ಮೇಲೆ ಡಿಡಿಟಿ ಸಿಂಪಡಿಸಿ ಅನಂತರ ಬಿಸಿ ನೀರಿನಲ್ಲಿ ನೆನೆಸಿ ಒಗೆಯಬೇಕು.

4) ಬೇರೆಯವರು ಉಪಯೋಗಿಸಿದ ಬಟ್ಟೆಬರೆ, ಬಾಚಣಿಗೆ, ಒಳ ಉಡುಪು, ತಲೆದಿಂಬು ಇತ್ಯಾದಿಗಳನ್ನು ಬಳಸಬಾರದು.

5) ಶೇಕಡಾ ಒಂದು ಬೆಂಜೀನ್ ಹೆಕ್ಸಾಕ್ಲೋರೈಡ್ (ಮಕ್ಕಳಲ್ಲಿ ಉಪಯೋಗಿಸಬಾರದು) ಅಥವಾ ಶೇಕಡಾ ಬೆಂಜೋಯೇಟ್ ದ್ರಾವಕವನ್ನು ಸ್ಥಳೀಯವಾಗಿ ಹಚ್ಚಬೇಕು. ವೈದ್ಯರ ಮಾರ್ಗದರ್ಶನದಲ್ಲಿ ಚಿಕಿತ್ಸೆ ಮಾಡಿಕೊಳ್ಳಬೇಕು.

## 7. ಕಜ್ಜಿ

ಕಜ್ಜಿ ಅಥವಾ ಸ್ಕೇಬೀಸ್ ಚರ್ಮಕ್ಕೆ ಉಂಟಾಗುವ ಬಹು ಸಾಮಾನ್ಯವಾದ ಅಂಟುರೋಗ. ಇದಕ್ಕೆ ಕಾರಣ ಸೂಕ್ಷ್ಮವಾದ ಪರೋಪಜೀವಿ ಅಥವಾ ಮಿನಿ ಕೀಟ (ಮೈಟ್ಸ್). ಇದು ಚರ್ಮದ ಪೊರೆಯನ್ನು ಕೊರೆದು ಮನೆ ಮಾಡಿಕೊಂಡು, ಮರಿಗಳನ್ನು ಉತ್ಪತ್ತಿ ಮಾಡುತ್ತದೆ. ಈ ಪರೋಪಜೀವಿಗಳು ಮುಖ್ಯವಾಗಿ ಬೆರಳುಗಳಲ್ಲಿ, ಜನನೇಂದ್ರಿಯಗಳ ಸುತ್ತಮುತ್ತ (ಎಳೆಯರಲ್ಲಿ) ಉಪದ್ರವವನ್ನುಂಟುಮಾಡುತ್ತದೆ. ಕಜ್ಜಿಯ ಉಣ್ಣೆಗಳು ಕಚ್ಚುವುದರಿಂದ ದದ್ದು ಗುಳ್ಳೆಗಳು, ಕೀವು ಗುಳ್ಳೆಗಳು ಉದ್ಭವಿಸುತ್ತವೆ. ಈ ಉಣ್ಣೆಗಳು ರಾತ್ರಿ ಚಲಿಸುವುದರಿಂದ ತುರಿಕೆ ಉಂಟಾಗುತ್ತದೆ. ಕೆರೆಯುವುದರಿಂದ ಕೀವುಗುಳ್ಳೆಗಳು ಉಂಟಾಗುತ್ತವೆ.

### ಕಜ್ಜಿ ಹೇಗೆ ಹರಡುತ್ತದೆ?

ಕಜ್ಜಿಯ ಉಣ್ಣೆಗಳು ಒಬ್ಬರಿಂದ ಒಬ್ಬರಿಗೆ ಶರೀರದ ಸಾಮೀಪ್ಯ, ಸಂಪರ್ಕದಿಂದ ಹರಡುತ್ತದೆ. ರೋಗಿಯ ಉಡುಪು, ಹೊದಿಕೆಗಳಿಂದ ಹರಡುವ ಸಾಧ್ಯತೆಗಳಿದ್ದರೂ, ರೋಗಿಯ ನೇರ ಸಾಮೀಪ್ಯ ಸಂಪರ್ಕದಿಂದ ಬೇಗನೆ ಹರಡುತ್ತದೆ.

### ರೋಗಲಕ್ಷಣಗಳು :

1. ತುರಿಕೆ ಅಥವಾ ನವೆ ರಾತ್ರಿಯ ವೇಳೆ ಹೆಚ್ಚಾಗಿರುತ್ತದೆ.
2. ಬೆರಳುಗಳ ಸಂದಿಗಳಲ್ಲಿ, ಕಂಕುಳು, ಮೊಲೆಗಳ ಸುತ್ತ, ಜನನೇಂದ್ರಿಯಗಳ ಸುತ್ತ ದದ್ದುಗಳು ಕಾಣಿಸುತ್ತವೆ.

### ಚಿಕಿತ್ಸೆ

1. ಕುಟುಂಬದ ಎಲ್ಲ ಸದಸ್ಯರೂ ಏಕಕಾಲದಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆಯಬೇಕು.
2. ಉತ್ತಮವಾದ ಮೈಸೋಪನ್ನು ಉಪಯೋಗಿಸಿ, ಬಿಸಿನೀರಿನಿಂದ ಚೆನ್ನಾಗಿ ತೊಳೆದುಕೊಳ್ಳಬೇಕು.
3. ಇಡೀ ಶರೀರಕ್ಕೆ (ಕಣ್ಣುಗಳನ್ನು ಬಿಟ್ಟು) ಬೆನ್‌ಜೈಲ್ ಬೆನ್‌ಜೋಯೇಟ್ (Benzyl benzoate) ದ್ರಾವಣವನ್ನು ಹಚ್ಚಿ, ಚೆನ್ನಾಗಿ ಉಜ್ಜಿಕೊಳ್ಳಬೇಕು. ಮಾರನೇ ದಿನ ಬೆಳಿಗ್ಗೆ ಸ್ನಾನ ಮಾಡಬಹುದು.

4. ಒಂದು ವಾರದ ನಂತರ ಪುನಃ ಚಿಕಿತ್ಸೆಯನ್ನು ಪುನರಾವರ್ತನೆ ಮಾಡಬೇಕು.

5. ಧರಿಸುವ ಮುನ್ನ ಎಲ್ಲ ಉಡುಪುಗಳನ್ನು, ಹೊದಿಕೆಗಳನ್ನು ಬಿಸಿನೀರಿನಿಂದ ಒಗೆದು, ಸಬಿಸಿಲಿನಲ್ಲಿ ಒಣಗಿಸಬೇಕು.

**ತಡೆಗಟ್ಟುವಿಕೆ**

1. ಪ್ರತಿದಿನ ಸ್ನಾನ ಮಾಡಿ, ಶರೀರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು.
2. ಪ್ರತಿನಿತ್ಯ ಶುಭ್ರವಾದ ಉಡುಪನ್ನು ಧರಿಸಬೇಕು.
3. ಆಗಿಂದಾಗ್ಯೆ ಹಾಸಿಗೆಯ ಹೊದಿಕೆಗಳನ್ನು ಬದಲಾಯಿಸಬೇಕು.
4. ಉಗುರುಗಳನ್ನು ನೈಲ್ ಕಟರಿನಿಂದ ಕತ್ತರಿಸಿ ನೀಟಾಗಿ ಇಟ್ಟುಕೊಳ್ಳಬೇಕು.

(ಈ) ಲೈಂಗಿಕ ರೋಗಗಳು

1. ಗೊನೋರಿಯಾ

ಇದೊಂದು ಲೈಂಗಿಕ ಸಂಪರ್ಕದಿಂದ ಹರಡುವ ರೋಗ. ಇದು ಬರಲು ಕಾರಣ ನೈಸಿರಿಯಾ ಗೊನೋರಿಯಾ ಎಂಬ ರೋಗಾಣು.


**ಹರಡುವ ವಿಧಾನ:**

ಈ ರೋಗ ಸೋಂಕಿರುವವರಿಂದ ಆರೋಗ್ಯ ಸಂಗಾತಿಗೆ, ಮುಖ್ಯವಾಗಿ ಲೈಂಗಿಕ ಸಂಭೋಗದಿಂದ ಹರಡುತ್ತದೆ. ತಾಯಿಗೇನಾದರೂ ಗೊನೋರಿಯಾ ರೋಗವಿದ್ದರೆ, ಹೆರಿಗೆಯ ಸಮಯದಲ್ಲಿ ಮಗು ಜನನ ದ್ವಾರದ ಮೂಲಕ ಬರುವಾಗ, ಆ ಮಗುವಿನ ಕಣ್ಣುಗಳು ಗೊನೋರಿಯಾ ರೋಗದಿಂದ ಕೂಡಿರಬಲ್ಲದು.

**ರೋಗ ಪರಿಪಕ್ವ ಆಗುವ ಅವಧಿ (ಇಂಕ್ಯುಬೇಷನ್ ಪೀರಿಯಡ್):**

ರೋಗ ಪರಿಪಕ್ವ ಆಗುವ ಅವಧಿ 9ರಿಂದ 10 ದಿನಗಳು.

**ರೋಗಲಕ್ಷಣಗಳು:**



ಪುರುಷರಲ್ಲಿ, ಸೋಂಕು ಉಂಟಾದ 10 ದಿನಗಳಲ್ಲಿ ರೋಗಿ ಸಹಿಸಲಾರದ ಉರಿ ಮೂತ್ರದ ನೋವು ಮತ್ತು ಮೂತ್ರವಿಸರ್ಜಿಸಲು ಕಷ್ಟವಾಗುತ್ತದೆಂದು ತಿಳಿಸುತ್ತಾನೆ. ಅಲ್ಲದೆ, ಇದರ ಜೊತೆಗೆ ಮೂತ್ರದ್ವಾರದ ಮೂಲಕ ಹಳದಿ ಬಣ್ಣದ ದ್ರವ ಹೊರ ಬರುತ್ತದೆ. ಸಂಪೂರ್ಣವಾದ ಚಿಕಿತ್ಸೆಯನ್ನು ಪಡೆಯದಿದ್ದರೆ, ಸೋಂಕಿನಿಂದಾಗಿ ಬಂಜೆತನ ಮೊದಲಾದ ಸಮಸ್ಯೆಗಳು ಉಂಟಾಗುತ್ತವೆ.



ಮೂತ್ರದ್ವಾರದ ಮೂಲಕ ಕೀವು ಸುರಿತ

ಸ್ತ್ರೀಯರಲ್ಲಿ ಹಳದಿ ಅಥವಾ ಹಳದಿ ಮಿಶ್ರಿತ ಹಸಿರು ಬಣ್ಣದ ದ್ರವ ಯೋನಿಯಿಂದ ಬರುವುದು. ಅಲ್ಲದೆ, ಜೊತೆಗೆ, ಉರಿಮೂತ್ರ, ಊತ, ಜ್ವರ ಇರುವ ಸಾಧ್ಯತೆಯೂ ಇದೆ. ಇಂತಹ ರೋಗಲಕ್ಷಣಗಳು ಗೊನೋರಿಯಾ ಇರುವ ಪುರುಷ/ಸ್ತ್ರೀಯೊಡನೆ ಲೈಂಗಿಕ ಸಂಭೋಗ ಮಾಡಿದ 9ರಿಂದ 10 ದಿನಗಳೊಳಗೆ ಕಂಡು ಬರುತ್ತದೆ.

ಸ್ತ್ರೀಯರಲ್ಲಿ, ಗೊನೋರಿಯಾ ರೋಗಾಣು ಅಡಗಿ ಕುಳಿತು ಕೆಲವೊಮ್ಮೆ ರೋಗಲಕ್ಷಣ ಕಂಡುಬರದೇ ಇರಬಹುದು. ಈ ರೋಗದ ಸೋಂಕು ಉಂಟಾದವರು ಸಕಾಲದಲ್ಲಿ ಚಿಕಿತ್ಸೆಯನ್ನು ಪಡೆಯದಿದ್ದರೆ ಕೆಳಕಂಡ ಸಮಸ್ಯೆಗಳು ಉಂಟಾಗಬಹುದು.

1) ಬಂಜೆತನ ಮತ್ತು ಸಂಧಿವಾತ ಉಂಟಾಗಬಹುದು.

2) ಶಿಶುಗಳಲ್ಲಿ, ಗೊನೋರಿಯಲ್ ಕಂಜೆಕ್ಟಿವಿಟಿಸ್‌ನಿಂದಾಗಿ ಕುರುಡತನ ಉಂಟಾಗಬಹುದು.

3) ಗೊನೋರಿಯಾ ಗರ್ಭನಾಳದ ಸೋಂಕಾಗಿ ಪರಿಣಮಿಸಿ, ಕೆಳಹೊಟ್ಟೆ ನೋವು ಉಂಟಾಗಬಹುದು.

4) ಯೋನಿಯ ಕೆಳಭಾಗದಲ್ಲಿ ಆಗಾಗ ನೋವು, ಊತ ಉಂಟಾಗಬಹುದು.

5) ಉರಿ ಮೂತ್ರ ಇರಬಹುದು. ಆಗಾಗ ಮೂತ್ರ ಮಾಡಬೇಕೆಂದೆನಿಸುವುದು.

**2. ಏಡ್ಸ್ ರೋಗ**

ಎಚ್.ಐ.ವಿ. ಎಂದರೆ, ಮನುಷ್ಯನ ರೋಗನಿರೋಧಕ ಶಕ್ತಿಯನ್ನು ಕುಗ್ಗಿಸುವ ವೈರಸ್ (ಹ್ಯೂಮನ್ ಇಮ್ಯೂನೋ ಡಿಫಿಶಿಯನ್ಸಿ ವೈರಸ್). ಈ ವೈರಸ್‌ನಿಂದಲೇ ಜನರಿಗೆ ಏಡ್ಸ್ ರೋಗ ಉಂಟಾಗುತ್ತದೆ.

ಏಡ್ಸ್ ಎಂದರೆ ಆರ್ಜಿತ ರೋಗನಿರೋಧಕ ಶಕ್ತಿ ಕುಗ್ಗುವಿಕೆಯಿಂದ ಉಂಟಾಗುವ ರೋಗಲಕ್ಷಣಾವಳಿ (ಅಕ್ವೈರ್ಡ್ ಇಮ್ಯನೋ ಡಿಫಿಶಿಯನ್ಸಿ ಸಿಂಡ್ರೋಮ್).

**ಲೈಂಗಿಕ ಸಂಭೋಗ:**

ಎಚ್.ಐ.ವಿ. ಇರುವ ವ್ಯಕ್ತಿಯೊಂದಿಗೆ, ಸುರಕ್ಷತೆ ಇಲ್ಲದೆ ಲೈಂಗಿಕ ಸಂಭೋಗವನ್ನು ನಡೆಸುವುದರಿಂದ, ಹೆಚ್ಚಿನ ಜನರು ಎಚ್‌ಐವಿ ಸೋಂಕಿಗೆ ಒಳಗಾಗುತ್ತಾರೆ. ಪುರುಷರಿಗೆ ಹೋಲಿಸಿದರೆ, ಹೆಂಗಸರು ಲೈಂಗಿಕ ಸಂಭೋಗದಿಂದ ಎಚ್‌ಐವಿ ಸೋಂಕಿಗೆ ಒಳಪಡುವ ಸಂಭವ ಹೆಚ್ಚು.

**ಸೋಂಕು ಇರುವ ರಕ್ತ:**

ಎಚ್‌ಐವಿ ಸೋಂಕು ಇರುವ ರಕ್ತವನ್ನು, ಆರೋಗ್ಯವಂತ ಮನುಷ್ಯ ಪಡೆದರೆ, ಎಚ್‌ಐವಿ ಸೋಂಕು ಉಂಟಾಗುತ್ತದೆ.

ಎಚ್‌ಐವಿ ಸೋಂಕಿರುವ ಒಬ್ಬರು ಮನುಷ್ಯ ಉಪಯೋಗಿಸಿದ ಸೂಜಿ ಅಥವಾ ಬ್ಲೇಡಿಗೆ ಆತನ ರಕ್ತ ಅಂಟಿಕೊಂಡಿದ್ದು, ಅದನ್ನು ಕ್ರಿಮಿಶುದ್ಧಿ ಮಾಡದೇ ಹಾಗೆ ಉಪಯೋಗಿಸಿದರೆ ಸೋಂಕು ಹರಡುತ್ತದೆ.

**ಏಡ್ಸ್ ರೋಗದ ರೋಗಲಕ್ಷಣಗಳು– 'ಎ' ಪಟ್ಟಿ:**

* ದೇಹದ ತೂಕದಲ್ಲಿ ಶೇಕಡಾ ಹತ್ತಕ್ಕಿಂತ ಹೆಚ್ಚು ಇಳಿತ.
* ವಿನಾಕಾರಣವಿಲ್ಲದೆ, ತಿಂಗಳುಗಟ್ಟಲೆ ಜ್ವರವಿರುವುದು.
* ಶುರುವಾದ ಭೇದಿ, ತಿಂಗಳುಗಟ್ಟಲೆ ನಿಲ್ಲದಿರುವುದು.
* ದೇಹದಲ್ಲಿ ವ್ಯಾಪಕವಾಗಿ ನೆಲೆಗೊಂಡ ಕ್ಷಯರೋಗ.
* ಕತ್ತು, ಕಂಕುಳ, ತೊಡೆಸಂದಿಗಳಲ್ಲಿ ಹಾಲ್ರಸ ಗ್ರಂಥಿಗಳು ದೊಡ್ಡದಾಗಿ ಊದಿಕೊಳ್ಳುವುದು.

**ಇತರೆ ಲಕ್ಷಗಳು– 'ಬಿ' ಪಟ್ಟಿ**

* ಹಾಲ್ರಸ (ಲಿಂಪ್‌ಗ್ಲಾಂಡ್ಸ್) ಗ್ರಂಥಿಗಳ ಊತ
* ಪದೇ ಪದೇ ಉಂಟಾಗುವ ಸರ್ಪಹುಣ್ಣು (ಹರ್ಪಿಸ್)
* ಬಾಯಲ್ಲಿ ಕಂಡು ಬರುವ ಬ್ರೂಸ್ಟ್ ರೋಗ
* ತಿಂಗಳುಗಟ್ಟಲೆ ಕಾಡುವ ಕೆಮ್ಮು
* ಮೈಯಲ್ಲಿ ಗಂದೆ, ಉರಿ

ವಿಶ್ವ ಆರೋಗ್ಯ ಸಂಸ್ಥೆ ಶಿಫಾರಸು ಮಾಡಿರುವಂತೆ ಯಾರಿಗೇ ಆಗಲಿ, ಮೊದಲ ಪಟ್ಟಿಯ ಯಾವುದೇ ಎರಡು ಲಕ್ಷಣಗಳು ಮತ್ತು 'ಬಿ' ಪಟ್ಟಿಯ ಯಾವುದೇ ಒಂದು ಲಕ್ಷಣ ಕಂಡು ಬಂದರೆ ಅವರಿಗೆ ಏಡ್ಸ್ ಇರಬಹುದೆಂದು ಸಂದೇಹ ಪಟ್ಟು, ಆ ಕುರಿತು ಖಚಿತಪಡಿಸಿಕೊಳ್ಳಲು ಅವರನ್ನು ರಕ್ತ ಪರೀಕ್ಷೆಗೆ ಒಳಪಡಿಸಬೇಕು.

**ಏಡ್ಸ್ ರೋಗವನ್ನು ತಡೆಗಟ್ಟಿಕೊಳ್ಳುವುದು ಹೇಗೆ?**

* ಸಲಿಂಗರತಿ, ಲೈಂಗಿಕ ಸ್ವೇಚ್ಛಾರದಿಂದ ದೂರವಿರಬೇಕು.
* ಅಸಹಜ ಲೈಂಗಿಕ ಕ್ರಿಯೆ (ಉದಾ.: ಗುದಸಂಭೋಗ, ಓರಲ್ ಸೆಕ್ಸ್)ಗಳಲ್ಲಿ ತೊಡಗಬಾರದು.

* ಏಡ್ಸ್ ರೋಗಗಗಳು ಗರ್ಭದಲ್ಲಿ ಬೆಳೆಯುತ್ತಿರುವ ಭ್ರೂಣಕ್ಕೆ ಹೆರಿಗೆಯ ನಂತರ ಹಾಲಿನ ಮೂಲಕ ಮಗುವಿಗೆ ರವಾನೆ ಆಗುವ ಸಂಭವವಿರುವುದರಿಂದ, ಏಡ್ಸ್ ರೋಗ ಇರುವ ಹೆಂಗಸರು ಗರ್ಭಧಾರಣೆಯನ್ನು ಹೊಂದಬಾರದು.
* ಬ್ಲಡ್ ಬ್ಯಾಂಕ್‌ಗಳಲ್ಲಿ ಉಪಯೋಗಿಸುವ ಸೂಜಿಗಳನ್ನು ಚೆನ್ನಾಗಿ ಶುದ್ಧೀಕರಿಸಬೇಕು ಅಥವಾ ಅವನ್ನು ಒಂದು ಸಾರಿ ಮಾತ್ರ ಉಪಯೋಗಿಸಿ, ಅನಂತರ ಅವುಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು.
* ಜವಾಬ್ದಾರಿಯುತವಾಗಿ ಆರೋಗ್ಯ ಜೀವನವನ್ನು ಮಾಡುವುದು.
* ಮದ್ಯ-ಮಾದಕ ಪದಾರ್ಥಗಳನ್ನು ಉಪಯೋಗಿಸದೆ ಇರುವುದು.
* ಸೋಂಕು ಇರುವ ರಕ್ತವನ್ನು ಪಡೆಯದೆ ಇರುವುದರಿಂದ.
* ಶುದ್ಧೀಕರಿಸಲ್ಪಟ್ಟ (ಸ್ಟರ್‌ಲೇಜ್) ಸಿರೆಂಜ್ ಮತ್ತು ಸೂಜಿಗಳನ್ನು ಉಪಯೋಗಿಸುವುದರಿಂದ.
* ಏಕಪತ್ನಿ / ಏಕಪತಿ ವ್ರತಸ್ಥರಾಗುವುದರಿಂದ.
* ಕೆಂಪು ದೀಪದ ಪ್ರದೇಶಕ್ಕೆ ತೆರಳದೆ ಇರುವುದು.
* ನಿರೋಧ್ ಅಥವಾ ಕಾಂಡೋಮ್ ಉಪಯೋಗಿಸುವುದರಿಂದ.

**ಯಾವ ರೀತಿ ಹರಡುವುದಿಲ್ಲ?**

- ಹಸ್ತಲಾಘ (ಶೇಕ್‌ಹ್ಯಾಂಡ್) ನೀಡಿದಾಗ
- ಒಟ್ಟಿಗೆ ಇದ್ದಾಗ
- ಒಟ್ಟಿಗೆ ಆಟವನ್ನು ಆಡಿದಾಗ
- ಒಟ್ಟಿಗೆ ಊಟವನ್ನು ಮಾಡಿದಾಗ

ಏಡ್ಸ್ ವೈರಸ್ ಹರಡುವುದಿಲ್ಲ

ಅಲ್ಲದೆ, ಆಹಾರ, ನೀರು, ಹುಳುಹುಪ್ಪಟೆ, ಟಾಯ್ಲೆಟ್ ಸೀಟುಗಳಿಂದಲೂ ಹರಡುವುದಿಲ್ಲ

## ೬. ವಿವಿಧ ಅಂಗಾಂಗ ವ್ಯೂಹಗಳಲ್ಲಿ ಸೋಂಕುಗಳು

ಶರೀರದ ವಿವಿಧ ಅಂಗಾಂಗ ವ್ಯೂಹಗಳು ಸೋಂಕಿಗೊಳಗಾಗಬಲ್ಲವು ಮತ್ತು ಅಂಗವ್ಯೂಹ ಬಾಧಿಸಲ್ಪಟ್ಟಾಗ ಲಕ್ಷಣಗಳು ಸಹ ಭಿನ್ನವಾಗಿರುತ್ತವೆ. ಸೋಂಕಿನ ಅವಧಿಯಲ್ಲಿ ನಿರ್ದಿಷ್ಟ ಲಕ್ಷಣಗಳು ಕಂಡು ಬರುತ್ತವೆ. ಸಾಮಾನ್ಯವಾಗಿ ಇದು ಶರೀರದ ಅಂಗವ್ಯೂಹ ಜೈವಿಕಕಾರಕ (ಬಯಾಲಾಜಿಕ್ ಏಜೆಂಟ್)ದಿಂದ ಬಾಧಿಸಲ್ಪಟ್ಟಿದೆ ಎಂಬುದನ್ನು ಸೂಚಿಸುತ್ತದೆ. ಮುಖ್ಯವಾದ ಅಂಗವ್ಯೂಹಗಳು ಹೇಗೆ ಬಾಧಿಸಲ್ಪಡುತ್ತದೆ ಎಂಬುದನ್ನು ಕೆಳಕಂಡ ಅಂಶಗಳಿಂದ ತಿಳಿಯಬಹುದು.

**1. ಶ್ವಾಸಾಂಗವ್ಯೂಹದಲ್ಲಿ ಸೋಂಕು** (Infection in the Respiratory System):

ಇದರಲ್ಲಿ ಸೋಂಕಿನ ಲಕ್ಷಣಗಳು ಹೀಗಿರುತ್ತವೆ:

1) ಓಕರಿಕೆ, ಗಂಟಲ ನೋವು

2) ಸೀನುವಿಕೆ, ಮೂಗಿನಲ್ಲಿ ಸುರಿತ, ಧ್ವನಿಯಲ್ಲಿ ಬದಲಾವಣೆ

3) ಕೆಮ್ಮು, ಇದು ಒಣ ಕೆಮ್ಮು ಆಗಿರಬಹುದು ಅಥವಾ ಕಫವನ್ನೊಳಗೊಂಡ ಕೆಮ್ಮು ಆಗಿರಬಹುದು. ಕಫ, ಬಿಳಿಯ ಬಣ್ಣದಿಂದ, ಕ್ರೀಮ್ ಬಣ್ಣದಿಂದ, ಹಳದಿ ಬಣ್ಣದಿಂದ ಅಥವಾ ರಕ್ತದಿಂದ ಕೂಡಿರಬಹುದು.

4) ಎದೆಯಲ್ಲಿ ನೋವು

5) ಉಸಿರಾಡಲು ಕಷ್ಟವಾಗುವುದು

**2. ಜೀರ್ಣಾಂಗವ್ಯೂಹದಲ್ಲಿ ಸೋಂಕು** (Infection in the Gastro Intestinal System):

ಈ ಅಂಗವ್ಯೂಹದಲ್ಲಿ ಸೋಂಕು ಉಂಟಾದಾಗ ಈ ಕೆಳಕಂಡ ಲಕ್ಷಣಗಳು ಕಾಣಿಸಿಕೊಳ್ಳಬಹುದು.

1) ಆಹಾರ ಸೇವನೆಯಲ್ಲಿ ರುಚಿ ಇಲ್ಲದಿರುವುದು

2) ಒಕರಿಕೆ / ವಾಂತಿ

3) ಅತಿಸಾರ ಭೇದಿ (ದಿನದಲ್ಲಿ 3ರಿಂದ 4 ಸಾರಿಗೂ ಹೆಚ್ಚಾಗಿ ಭೇದಿ. ಮಲ, ನೀರು ನೀರಾಗಿರುವುದು)

4) ಆಮಶಂಕೆ (ಡೀಸೆಂಟ್ರಿ) (ಅತಿಸಾರ ಭೇದಿ ಅದರ ಜೊತೆಗೆ ರಕ್ತ, ಕೀವು ಅಥವಾ ಲೋಳೆಪರೆ)

5) **ಹೊಟ್ಟೆಯ ನೋವು:** ಹೊಕ್ಕಳು ಸುತ್ತ ಸೌಮ್ಯ ರೂಪದ ನೋವಿರಬಹುದು ಅಥವಾ ಕೆಳಹೊಟ್ಟೆಯ ಭಾಗದಲ್ಲಿ ಹಿಡಿದಂತಾಗುವುದು ಅಥವಾ ಸೆಳೆತವಿರುವುದು. ನೋವು, ಹೊಕ್ಕಳು ಸುತ್ತ ಇರುವುದು, ಹೊಟ್ಟೆಯ ಬಲಭಾಗಕ್ಕೆ ವರ್ಗಾವಣೆಗೊಳ್ಳಬಹುದು. ಅಲ್ಲದೇ ವಾಂತಿಯನ್ನೊಳಗೊಂಡಿರಬಹುದು. ಇದು, ಅಪೆಂಡಿಕ್ಸ್‌ನ ಉರಿಯೂತವಿರಬಹುದು. ತಡಮಾಡದೆ, ಮೆಡಿಕಲ್ ಡಾಕ್ಟರ್‌ಗೆ ತೋರಿಸಬೇಕು.

6) ಕಣ್ಣಿನ ಕಂಜೆಕ್ಟಿವ್ ಬಣ್ಣ (ಕೂಡ್ಪರೆ)ದಲ್ಲಿ ಬದಲಾವಣೆ ಮತ್ತು ಮೂತ್ರ ನಿಂಬೆಹಣ್ಣಿನ ಬಣ್ಣಕ್ಕೆ ತಿರುಗಿರುವುದು. ಬಾಯಿ ರುಚಿ ಇಲ್ಲ, ಹೊಟ್ಟೆಯ ಬಲಭಾಗದ ಮೇಲ್ಭಾಗದಲ್ಲಿ ನೋವು. ಯಕೃತ್ ಅಥವಾ ಲಿವರ್‌ನ ಸೋಂಕನ್ನು (ವೈರಲ್ ಹೆಪಟೈಟಿಸ್) ಸೂಚಿಸುತ್ತದೆ.

7) ಹಸಿವು ಆಗದಿರುವುದು.

8) ಸೋಂಕು ದೀರ್ಘಕಾಲದವರೆಗೂ ಇರುವುದು.

9) ಮಲಪರೀಕ್ಷೆಯನ್ನು ಪ್ರಯೋಗ ಶಾಲೆಯಲ್ಲಿ ಪರೀಕ್ಷೆ ಮಾಡುವುದರಿಂದ, ಸಣ್ಣ ಕರುಳು ಅಥವಾ ದೊಡ್ಡ ಕರುಳಿನಲ್ಲಿ ಸೋಂಕು ಉಂಟಾಗಿರುವ ಕಾರಣ ತಿಳಿಯುವುದು.

**3. ಗುಂಡಿಗೆ (ಹೃದಯ) ರಕ್ತನಾಳಗಳ ಸೋಂಕು** (Infection if the Cardio Vascular System):

**ರುಮ್ಯಾಟಿಕ್ ಜ್ವರ:** ಈ ಕಾಯಿಲೆ ಬಾಲ್ಯದಲ್ಲಿ ಮತ್ತು ಹದಿಹರೆಯದಲ್ಲಿ ಕಾಣಿಸಿಕೊಳ್ಳುತ್ತದೆ. ಅಂದರೆ, 5ರಿಂದ 15 ವರ್ಷದೊಳಗಡೆ ಇದು ಕಂಡು ಬರುತ್ತದೆ.

ಈ ಕೆಳಕಂಡ ಮಾರ್ಗಗಳಿಂದ ಕಾಯಿಲೆ ಕಾಣಿಸಿಕೊಳ್ಳಬಹುದು.

1) ಇದ್ದಕ್ಕಿದ್ದಂತೆ ನೋವು, ಊತ ಕಾಣಿಸಿಕೊಳ್ಳುತ್ತದೆ ಮತ್ತು ಒಂದುಅಂಗಾಲಿನಲ್ಲಿ, ಕೈಬೆರಳುಗಳಲ್ಲಿ ವಿರಳವಾಗಿ ಮೊಣಕೈಯಲ್ಲಿ ಕಾಣಿಸುತ್ತದೆ. ಸಣ್ಣ ಕೀಲುಗಳು ನೋವಿನಿಂದ ಮುಕ್ತವಾಗಿರುತ್ತವೆ. ಸಂಧಿವಾತ ಅಥವಾ ಆರ್ಥ್ರೈಟಿಸ್ (ಕೀಲುಗಳಲ್ಲಿ ಊತ ಮತ್ತು ನೋವು) ಸಹ ಸೇರ್ಪಡೆಯಾಗಿರುತ್ತದೆ. ಉದಾಹರಣೆಗೆ: ಒಂದು ಕೀಲು ಅಭಿವೃದ್ಧಿಗೊಂಡಿರುತ್ತದೆ. ಆದರೆ, ಮತ್ತೊಂದು ಕೀಲುಬಾಧೆಗೊಳಗಾಗಿರುತ್ತದೆ. ಅಟ್ಯಾಕ್ ಮುಗಿದ ನಂತರ ಕೀಲುಗಳು ನಾರ್ಮಲ್ ಸ್ಥಿತಿಗೆ ಬಂದಿರುತ್ತವೆ. ಜ್ವರದ ಜೊತೆಗೆ ಕೀಲು ನೋವು ಇರುತ್ತದೆ. ನಾಡಿಬಡಿತದಲ್ಲಿ ಹೆಚ್ಚಳವಾಗಿರುತ್ತದೆ.

2) ಕ್ರಮವಾಗಿ ಆಯಾಸ, ತೂಕ ಕಡಿಮೆಯಾಗುವುದು ಮತ್ತು ದೊಡ್ಡ ಕೀಲುಗಳಲ್ಲಿ ನೋವು ಇರುತ್ತದೆ.

3) ಇದ್ದಕ್ಕಿದ್ದಂತೆ, ಶರೀರದ ಕೈಕಾಲುಗಳು, ಮಾಂಸಖಂಡಗಳು ಜಗ್ಗಿ (Jerkey)ದಂತಾಗುತ್ತದೆ. ಮಗು, ಮಂಕಾಗುತ್ತದೆ, ನೀರಿನ ಲೋಟವೊಂದನ್ನು ಸಹ ಕೈಯಿಂದ ಹಿಡಿಯಲು ಅಶಕ್ತವಾಗಿರುತ್ತದೆ.

4) ಎದೆಯ ಭಾಗದಲ್ಲಿ ಪಿಂಕ್ ಪ್ಯಾಚ್‌ಗಳು ಕಾಣಿಸಿಕೊಳ್ಳುತ್ತವೆ.

ಈ ಮೇಲ್ಕಂಡ ಲಕ್ಷಣಗಳಿದ್ದರೆ, ರೋಗಿ ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯಲು ತಿಳಿಸಬೇಕು ಮತ್ತು ಡಾಕ್ಟರ್‌ರವರಲ್ಲಿ ತೋರಿಸಬೇಕು.

**4. ಮೂತ್ರಾಂಗ ದ್ವಾರದ ಸೋಂಕುಗಳು** (Urinary Tract Infections):

**ಲಕ್ಷಣಗಳು:**

1) ಮೂತ್ರವಿಸರ್ಜಿಸುವಾಗ ಕಷ್ಟ ಅಥವಾ ನೋವು ಉಂಟಾಗುವುದು.

2) ಮೂತ್ರಕೋಶ ಬರಿದಾಗಿದ್ದರೂ, ಮೂತ್ರವಿಸರ್ಜಿಸಲು ನೋವಿನ ಭಾವನೆ.

3) ಪದೇ ಪದೇ ಸಣ್ಣ ಪ್ರಮಾಣದಲ್ಲಿ ಮೂತ್ರವಿಸರ್ಜಿಸುವುದು. ಈ ಮೂತ್ರ ಸ್ಪಷ್ಟವಾಗಿರಬಹುದು ಅಥವಾ ಹೊಗೇಬಣ್ಣದಿಂದ ಕೂಡಿರಬಹುದು.

4) ಒಂದು ಅಥವಾ ಎರಡು ಪಕ್ಕೆಗಳಲ್ಲಿ ಇದ್ದಕ್ಕಿದ್ದಂತೆ ನೋವು

ಕಾಣಿಸಿಕೊಳ್ಳುವುದು. ಈ ನೋವು ತೊಡೆಸಂದುಗಳವರೆಗೂ ಪಸರಿಸಿರಬಹುದು.

ಮೂತ್ರ ಪರೀಕ್ಷೆಯಿಂದ ಸೋಂಕು ಇರುವುದು ತಿಳಿಯುತ್ತದೆ. ಅಂದರೆ, ಮೈಕೋಸ್ಕೋಪಿನಲ್ಲಿ ಮೂತ್ರವನ್ನು ಪರೀಕ್ಷೆ ಮಾಡಿದರೆ, ಕೀವು ಕೋಶಗಳು (ಪಸ್‌ಸೆಲ್ಸ್), ಬ್ಯಾಕ್ಟಿರಿಯಾ ಮತ್ತು ಕೆಂಪು ರಕ್ತಕಣಗಳು ಕಾಣಿಸುತ್ತವೆ.

**5. ಕೇಂದ್ರ ನರವ್ಯೂಹದ ಸೋಂಕುಗಳು** (Infections in the Central Nervous System):

ಕೇಂದ್ರ ನರವ್ಯೂಹದಲ್ಲಿ ಸೋಂಕುಗಳು, ಮೆದುಳಿನಲ್ಲಿ ಮೆನಿನ್‌ಜೆಸ್ ಅಥವಾ ಮೆದುಳ್ಪರೆಗಳಲ್ಲಿ ಉಂಟಾಗುತ್ತದೆ.

1) ಮೆದುಳಿನ ಸೋಂಕನ್ನು ಎನ್‌ಸೆಪಾಲೈಟಿಸ್ ಎಂದು ಕರೆಯಲಾಗುತ್ತದೆ.

2) ಮೆದುಳ್ಪರೆಗಳಲ್ಲಿ ಕಾಣಿಸಿಕೊಳ್ಳುವ ಸೋಂಕನ್ನು ಮೆನಿನ್‌ಜೈಟಿಸ್ ಎಂದು ಕರೆಯಲಾಗುತ್ತದೆ.

**ಜ್ವರದ ರೋಗಲಕ್ಷಣದ ಜೊತೆಗೆ, ಕೆಳಕಂಡ ಲಕ್ಷಣಗಳು ಕಂಡು ಬರುತ್ತವೆ.**

ಅ) ತೀವ್ರವಾದ ತಲೆನೋವು. ಈ ನೋವು ತಲೆಯ ಹಿಂಭಾಗದಲ್ಲಿ ಹೆಚ್ಚಾಗಿರುತ್ತದೆ. ರೋಗಿಗೆ ಬೆಳಕನ್ನು ನೋಡಲಾಗುವುದಿಲ್ಲ.

ಆ) ಓಕರಿಕೆ ಮತ್ತು ವಾಂತಿ.

ಇ) ಕತ್ತಿನಲ್ಲಿ ಬಿಗಿತವಿರುತ್ತದೆ ಅಥವಾ ಕತ್ತನ್ನು ಚಲಿಸಲು ಕಷ್ಟವಾಗುತ್ತದೆ.

ಈ) ರೋಗಿ ಮಂಪರನ್ನು ಹೊಂದಿರುತ್ತಾನೆ. ಆರಂಭದಲ್ಲೇ ಚಿಕಿತ್ಸೆಯನ್ನು ಕೊಡಿಸದಿದ್ದರೆ, ರೋಗಿ ಪ್ರಜ್ಞಾಹೀನ (ಕೋಮಾ)ನಾಗುತ್ತಾನೆ. ಇಂತಹ ರೋಗಿಯನ್ನು ತಡಮಾಡದೆ, ಡಾಕ್ಟರ್ ಅವರಿಗೆ ತೋರಿಸಬೇಕು.

3) ಬೆನ್ನುಹುರಿಯ ಸೋಂಕನ್ನು ಮೈಲೈಟಿಸ್ ಎಂದು ಕರೆಯುತ್ತಾರೆ. (ಸಾಮಾನ್ಯವಾದದ್ದು ಪೋಲಿಯೋ ಮೈಲೈಟಿಸ್) ಮೈಲೈಟಿಸ್ ಕ್ಷಯರೋಗ, ಸಿಫಿಲಿಸ್ ಮತ್ತು ಫಂಗೈಯಿಂದ ಉಂಟಾಗಬಹುದು.

ಲಕ್ಷಣಗಳು, ನಿಶ್ಯಕ್ತಿಯ ರೂಪದಲ್ಲಿ ಕಾಲುಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಮಲ-ಮೂತ್ರಗಳನ್ನು ವಿಸರ್ಜಿಸಲು ಅಡಚಣೆ ಉಂಟಾಗುತ್ತದೆ. ಇಂತಹ

ರೋಗಿಗಳನ್ನು ಸಮರ್ಪಕ ತಪಾಸಣೆಗಾಗಿ ಚಿಕಿತ್ಸೆಗಾಗಿ ಮೆಡಿಕಲ್ ಡಾಕ್ಟರ್ ಅವರಲ್ಲಿ ತೋರಿಸಬೇಕು.

## ಸೋಂಕಿನಿಂದ ಕೂಡಿದ ರೋಗಿಯನ್ನು ನಿರ್ವಹಿಸುವುದು ಹೇಗೆ? (Management of a Patient with an Infection):

### ವಿಶ್ರಾಂತಿ:

ಯಾವುದೇ ತೀವ್ರ ತರಹದ ಸೋಂಕಿದ್ದಾಗ, ರೋಗಿ ಹಾಸಿಗೆಯಲ್ಲಿ ವಿಶ್ರಾಂತಿ ಪಡೆಯುವುದು ಅಗತ್ಯ. ವಿಶ್ರಾಂತಿಯ ಕೊಠಡಿ ಬೆಚ್ಚಗಿರಬೇಕು, ಗಾಳಿ–ಬೆಳಕು ಚೆನ್ನಾಗಿರಬೇಕು. ರೋಗಿಯನ್ನು ಕಿಟಕಿಯ ಹತ್ತಿರವೇ ಮಲಗಿಸಬಾರದು. ಅದರಿಂದ, ಥಂಡಿ–ಗಾಳಿಯಿಂದ, ಬಿಸಿಲು, ಧೂಳಿನಿಂದ ರೋಗಿಗೆ ತೊಂದರೆ ಉಂಟಾಗುತ್ತದೆ.

### ದೀರ್ಘಕಾಲ ವಿಶ್ರಾಂತಿಯನ್ನು ಪಡೆದರೆ ಆಗುವ ಅನಾನುಕೂಲಗಳು:

1. ಉಸಿರಾಟ ಕಡಿಮೆಯಾಗುತ್ತದೆ.
2. ರಕ್ತ ಪರಿಚಲನೆ ಕಡಿಮೆಯಾಗುತ್ತದೆ.
3. ಮಾಂಸಖಂಡಗಳು ನಿಶ್ಶಕ್ತಗೊಳ್ಳುತ್ತವೆ.
4. ದೇಹದ ಕ್ಯಾಲ್ಸಿಯಂ ಸಾಕಷ್ಟು ಕರಗದೆ ಇರುವುದರಿಂದ, ಮೂತ್ರಪಿಂಡದಲ್ಲಿ ಕಲ್ಲುಗಳು ರೂಪುಗೊಳ್ಳುತ್ತವೆ.
5. ಹಾಸಿಗೆಯಲ್ಲಿಯೇ ಮಲಗಿರುವುದರಿಂದ, ಒತ್ತಡದ ಹುಣ್ಣುಗಳುಂಟಾಗುತ್ತವೆ.
6. ಕೀಲುಗಳಲ್ಲಿ ಬಿಗಿತ ಉಂಟಾಗುತ್ತದೆ.
7. ಮಲಬದ್ಧತೆ– ಮೊದಲಾದ ತೊಂದರೆಗಳುಂಟಾಗುತ್ತವೆ.

ಸೋಂಕು, ಕಡಿಮೆಯಾದ ಕೂಡಲೇ ರೋಗಿ ಹಾಸಿಗೆಯಿಂದ ಎದ್ದು ಓಡಾಡಲು ಪ್ರೋತ್ಸಾಹಿಸಬೇಕು. ಕ್ರಮವಾಗಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು.

### ಆಹಾರ ಪಥ್ಯ:

ಜ್ವರ, ಜೀವಸ್ತುಕರಣ (ಮೆಟಾಬಲಿಕ್‌ರೇಟ್)ವನ್ನು ಹೆಚ್ಚಿಸುತ್ತದೆ. ದೀರ್ಘಕಾಲದ ಸೋಂಕಾದ ಕ್ಷಯರೋಗದಲ್ಲಿ, ರೋಗಿಗೆ ಸಸಾರಜನಕ (ಪ್ರೋಟೀನ್ಸ್)ವನ್ನು ಹೆಚ್ಚಾಗಿ ಕೊಡಬೇಕು. ಆದರೆ, ಯಾವುದೇ ಆಹಾರದಿಂದ ಹೊಟ್ಟೆಗೆ ಅಡಚಣೆ

ಉಂಟಾಗಬಾರದು. ಅಂದರೆ, ಹುಳಿ, ಖಾರ, ಮಸಾಲೆ ಪದಾರ್ಥಗಳು ಅತಿ ಹೆಚ್ಚಾಗಿರುವುದನ್ನು ಸೋಂಕಿನ ರೋಗಿಗೆ ಕೊಡಬಾರದು. ವಿಟಮಿನ್ ಪೂರಕಗಳನ್ನು ಕೊಡಬೇಕು. ಅಂದರೆ, ವಿಟಮಿನ್-ಬಿ ಗುಂಪಿನ ಆಹಾರವನ್ನು ಕೊಡುವುದರಿಂದ, ನ್ಯೂನ ಪೋಷಣೆಯನ್ನು ತಡೆಗಟ್ಟಬಹುದು. ಪ್ರತಿ ಸಾರಿ, ಆಹಾರವನ್ನು ಸೇವಿಸಿದ ನಂತರವು ರೋಗಿ, ಶುದ್ಧವಾದ ನೀರಿನಿಂದ ಬಾಯಿ ಮುಕ್ಕಳಿಸಬೇಕು. ಬೆಳಿಗ್ಗೆ ಮತ್ತು ರಾತ್ರಿ ಮಲಗುವ ಮೊದಲು ಹಲ್ಲುಗಳನ್ನು ಬ್ರಷ್ ಮಾಡುವುದನ್ನು ಮರೆಯಬಾರದು.

**ದ್ರವ ಪದಾರ್ಥಗಳು:**

ಬೆವರುವುದರಿಂದ, ವೇಗದ ಉಸಿರಾಟದಿಂದ ವಾಂತಿ ಅಥವಾ ಅತಿಸಾರ ಭೇದಿಯಿಂದ, ದೇಹದಲ್ಲಿ ದ್ರವ ಪದಾರ್ಥ ಕಡಿಮೆಯಾಗುತ್ತದೆ. ಆದುದರಿಂದ, ಪ್ರತಿದಿನ 1.5 ಲೀಟರ್‌ನಿಂದ 2 ಲೀಟರ್ ದ್ರವ ರೂಪದ ಪದಾರ್ಥಗಳನ್ನು ರೋಗಿ ಸೇವಿಸಬೇಕು. ದೇಹದ ಉಷ್ಣತೆ 40 ಡಿಗ್ರಿ ಸೆಂಟಿಗ್ರೇಡ್ (104 ಡಿಗ್ರಿ ಎಫ್) ಅಥವಾ ಅದಕ್ಕಿಂತಲೂ ಹೆಚ್ಚಾಗಿದ್ದರೆ, ರೋಗಿಗೆ ಕನಿಷ್ಠ 3 ಲೀಟರ್ ದ್ರವ ಪದಾರ್ಥಗಳ ಅಗತ್ಯವಿರುತ್ತದೆ. ಐಸ್ ನೀರನ್ನು ಕುಡಿಯಲು ಕೊಡಬಾರದು. ತಾಜಾಹಣ್ಣುಗಳ ಜ್ಯೂಸ್‌ನ್ನು ಕೊಡಬಹುದು. ಉದಾಹರಣೆಗೆ: ಮೂಸಂಬಿ ರಸ ಅಥವಾ ಕಿತ್ತಳೆಹಣ್ಣಿನ ರಸ.

**ಎಲೆಕ್ಟ್ರೋಲೈಟ್ ಅಗತ್ಯತೆ:**

ಅಲ್ಪಾವಧಿಯ ಸೋಂಕು ರೋಗಗಳಿದ್ದಾಗ ಎಲೆಕ್ಟ್ರೋಲೈಟ್ ಬೇಕಾಗಿಲ್ಲ. ಆದರೆ, ವಾಂತಿ ಅಥವಾ ಅತಿಸಾರ ಭೇದಿ ಆಗುತ್ತಿದ್ದಾಗ ಅತಿ ಹೆಚ್ಚಾಗಿ ಸೋಡಿಯಂ ಮತ್ತು ಪೊಟಾಸಿಯಂ ನಷ್ಟವಾಗುತ್ತದೆ. ಅತಿಸಾರ ಭೇದಿ ಮತ್ತು ವಾಂತಿಯ ಪ್ರಕರಣಗಳಲ್ಲಿ ದೇಹದಲ್ಲಿ ನೀರಿನಂಶ ಕಡಿಮೆಯಾಗಿ ನಿರ್ಜಲತೆ ಉಂಟಾಗುತ್ತದೆ. ಆದುದರಿಂದ, ಓ.ಆರ್.ಎಸ್. (ಓರಲ್ ರೀಹೈಡ್ರೇಷನ್ ಸಲ್ಯೂಷನ್- ಬಾಯಿಯ ಮೂಲಕ ನೀಡುವ ದ್ರವ)ನ್ನು ಕೂಡಲೇ ಆರಂಭಿಸಬೇಕು. ಅತಿಯಾದ ಬೆವರಿನಿಂದಲೂ ಸೋಡಿಯಂ ನಷ್ಟವಾಗುತ್ತದೆ.

ಡಿಹೈಡ್ರೇಷನ್ ಅಥವಾ ನಿರ್ಜಲತೆಯಿಂದಾಗಿ, ಮೂತ್ರಪಿಂಡಗಳ ಕೆಲಸ ಕಡಿಮೆಯಾಗುತ್ತದೆ ಮತ್ತು ದೀರ್ಘಕಾಲದ ಜ್ವರವಿದ್ದಾಗ, ಬ್ಲಡ್ ಯೂರಿಯಾ, ಕ್ರಿಯಾಟಿನಿನ್ ಮತ್ತು ಸೀರಮ್ ಎಲೆಕ್ಟ್ರೋಲೈಟ್ ಪ್ರಮಾಣದ ಅಂದಾಜು ಮಾಡಿಸಿ, ಮೂತ್ರಪಿಂಡಗಳ ಕಾರ್ಯವನ್ನು ಪರೀಕ್ಷಿಸಿಕೊಳ್ಳುವುದರಿಂದ ಇವುಗಳನ್ನು

ಸರಿಪಡಿಸಿಕೊಳ್ಳಲು ಸಹಾಯಕವಾಗುತ್ತದೆ. ಇದನ್ನು ವೈದ್ಯಕೀಯ ಮೇಲ್ವಿಚಾರಣೆಯಲ್ಲಿ ಮಾತ್ರ ನಡೆಸಲು ಸಾಧ್ಯ.

**ಜ್ವರ:**

ಜ್ವರವಿದ್ದಾಗ, ವೈದ್ಯರ ಸಲಹೆ ಮೇರೆಗೆ ಸಮಯಕ್ಕೆ ಸರಿಯಾಗಿ, ಸರಿಯಾದ ಪ್ರಮಾಣದಲ್ಲಿ ರೋಗಿಗೆ, ಔಷಧಿಯನ್ನು ಕೊಡಬೇಕು. ಹಣೆ ಮತ್ತು ಎದೆಯ ಮೇಲೆ ತಣ್ಣೀರು ಬಟ್ಟೆಯನ್ನು ಹಾಕುತ್ತಿರಬೇಕು.

**ನಿದ್ರೆ:**

ಸೋಂಕಿನ ರೋಗಿ, ಪ್ರಶಾಂತವಾದ ರೂಮಿನಲ್ಲಿ ವಿಶ್ರಾಂತಿ ಪಡೆದು, ಸರಿಯಾಗಿ ನಿದ್ರೆ ಮಾಡುವಂತೆ ಪ್ರೋತ್ಸಾಹಿಸಬೇಕು.

**ಸೋಂಕು ಹರಡುವುದನ್ನು ತಡೆಗಟ್ಟುವುದು:**

ಸೋಂಕು ಇರುವ ರೋಗಿಯನ್ನು ಆರೈಕೆ ಮಾಡುವಾಗ ಸೋಂಕು ಇತರರಿಗೆ ಹರಡದಂತೆ ತಡೆಗಟ್ಟುವುದು ಬಹಳ ಮುಖ್ಯ.

ಅ) ಪ್ರತ್ಯೇಕವಾದ ರೂಮಿನಲ್ಲಿ ರೋಗಿ ವಿಶ್ರಾಂತಿ ಪಡೆದುಕೊಳ್ಳುವಂತೆ ವ್ಯವಸ್ಥೆಯನ್ನು ಮಾಡಬೇಕು.

ಆ) ಸಾಮಾನ್ಯವಾದ ಸ್ವಚ್ಛತೆಯ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕು.

ಇ) ರೋಗಿಯನ್ನು ಆರೈಕೆ ಮಾಡುವವರು ಕೈಗಳನ್ನು ಮೈ ಸೋಪಿನಿಂದ, ಶುದ್ಧವಾದ ನೀರಿನಲ್ಲಿ ತೊಳೆದುಕೊಳ್ಳುವುದು ಅತ್ಯಗತ್ಯ.

ಈ) ರೋಗಿಯ ಮಲಮೂತ್ರ, ಕಫವನ್ನು ಸೋಂಕು ನಿವಾರಣೆ ಮಾಡಿದ ನಂತರ ಸೂಕ್ತ ರೀತಿಯಲ್ಲಿ ಸುರಕ್ಷಿತವಾಗಿ ವಿಲೇವಾರಿ ಮಾಡಬೇಕು.

ಉ) ಸೋಂಕು ರೋಗಿ ಉಪಯೋಗಿಸಿದ ವಸ್ತುಗಳನ್ನು ಸರಿಯಾಗಿ ಸ್ವಚ್ಛಗೊಳಿಸಬೇಕು.

**ರೋಗಿಯ ಮಾನಸಿಕ ಆರೈಕೆ:**

ರೋಗಿಯನ್ನು, ಪ್ರತ್ಯೇಕವಾದ ರೂಮಿನಲ್ಲಿರಿಸಿ, ಉಪಚರಿಸುತ್ತಿರುವುದರಿಂದ, ಭಾವನಾತ್ಮಕವಾಗಿ ರೋಗಿಗೆ ಬೇಸರ ಉಂಟಾಗುತ್ತದೆ. ಮನೆಯ ಹಿರಿಯರು ಅಥವಾ ತಾಯಿ ಅಥವಾ ತಂದೆ, ವೈದ್ಯರು ತಿಳಿಸಿರುವ ಮುನ್ನೆಚ್ಚರಿಕೆ ಕ್ರಮಗಳ

ಬಗ್ಗೆ ರೋಗಿಗೆ ವಿವರಿಸಬೇಕು. ಅಲ್ಲದೆ, ಆರೈಕೆಯ ವಿಷಯದಲ್ಲಿ ರೋಗಿಯ ಸಹಕಾರ ಎಷ್ಟು ಅಗತ್ಯ ಎಂಬುದನ್ನು ತಿಳಿಸಬೇಕು.

ನಿಗದಿತ ಸಮಯದವರೆಗೂ, ವೈದ್ಯರ ಸಲಹೆಯಂತೆ ಚಿಕಿತ್ಸೆಯನ್ನು ಪಡೆಯುವುದರಿಂದ, ಸಮುದಾಯದಲ್ಲಿ ಸೋಂಕು ಹರಡುವುದನ್ನು ತಡೆಗಟ್ಟಬಹುದೆಂಬುದನ್ನು ತಿಳಿಸಬೇಕು. ವಯಸ್ಕರಿಗಿಂತಲೂ, ಮಕ್ಕಳಿಗೆ ಈ ಬಗ್ಗೆ ಭರವಸೆಯನ್ನು ಕೊಡಬೇಕು. ಮಕ್ಕಳಿಗೆ ಆಟದ ಸಾಮಾನು ಕೊಡುವುದರಿಂದ ಅವರಿಗೆ ಬೇಸರ ಉಂಟಾಗುವುದಿಲ್ಲ.

**ಚರ್ಮದ ಸೋಂಕು**

**ಸೋಂಕಿನ ಬಗ್ಗೆ (ಇನ್‌ಫೆಕ್ಷನ್) ನೀವು ಏನನ್ನು ತಿಳಿದಿರಬೇಕು?**

**ಕುರು ಮತ್ತು ಕೀದುಣ್ಣು ಸೋಂಕು ಉಂಟಾಗಲು ಕಾರಣವೇನು?**

ಇದಕ್ಕೆ ಮುಖ್ಯ ಕಾರಣ ಬ್ಯಾಕ್ಟೀರಿಯಾ (ಏಕಾಣು ಜೀವಿಗಳು). ಬಹಳ ಮುಖ್ಯವಾದವು; ಸ್ಟೆಫಿಲೋಕಾಕಸ್ ಮತ್ತು ಸ್ಟ್ರೆಪ್ಟೋಕಾಕಸ್ ಕ್ರಿಮಿಗಳು; ಇವೇ ಅಲ್ಲದೆ, ಇತರೆ ಬ್ಯಾಕ್ಟೀರಿಯಾಗಳಿಂದ ಚಿಕ್ಕ ಕುರು ಅಥವಾ ಕೀದುಣ್ಣು ಉಂಟಾಗಬಹುದು.

ವೈರಸ್ (ವಿಷಾಣು)ಗಳಿಂದ ಕೀವು ತುಂಬಿದ ಸೋಂಕು ಉಂಟಾಗುವುದೇ? ಇಲ್ಲ.

**ಜನರು ಸೋಂಕಿಗೆ ಯಾವಾಗ ಈಡಾಗುತ್ತಾರೆ?**

1. ಸಾಮಾನ್ಯ ಆರೋಗ್ಯ ಚೆನ್ನಾಗಿಲ್ಲದಾಗ.
2. ಅತಿಯಾದ ಆಯಾಸವಿದ್ದಾಗ.
3. ಬಹಳ ವಯಸ್ಸಾದ ನಂತರ.
4. ಇತ್ತೀಚೆಗೆ ಹೆರಿಗೆಯಾಗಿದ್ದರೆ.
5. ಪೌಷ್ಟಿಕ ಆಹಾರವನ್ನು ಸೇವಿಸದಿದ್ದರೆ.
6. ವಿಟಮಿನ್‌ಗಳ ಕೊರತೆಯಿಂದ.
7. ಸಕ್ಕರೆ ಕಾಯಿಲೆಯನ್ನು ನಿಯಂತ್ರಿಸಿಕೊಳ್ಳದಿದ್ದಾಗ.
8. ಬೇರೂರಿದ (ಕ್ರಾನಿಕ್) ಕಾಯಿಲೆಗಳಿಂದ ನರಳುತ್ತಿರುವಾಗ.

9. ಜನಸಾಂದ್ರತೆ ಹೆಚ್ಚಿರುವ ಮತ್ತು ಕೊಳಕು ಪರಿಸರದಲ್ಲಿ ವಾಸಿಸುವುದರಿಂದ.

10. ವೈಯಕ್ತಿಕ ಆರೋಗ್ಯದ ಬಗ್ಗೆ ಗಮನ ಕೊಡದೆ ಇರುವುದರಿಂದ.

**ಸೋಂಕನ್ನು ತಡೆಗಟ್ಟುವ ಉತ್ತಮ ವಿಧಾನ ಯಾವುದು?**

ಮೇಲ್ಕಂಡ ಪರಿಸ್ಥಿತಿಯನ್ನು ತಿಳಿದು ಸಮಸ್ಯೆಯನ್ನು ಪರಿಹರಿಸಿ ಕೊಳ್ಳುವುದರಿಂದ.

ಶುಚಿತ್ವದ ಕೊರತೆಯಿಂದ ಚಿಕ್ಕ ಕುರು ಮತ್ತು ಕೀದುಣ್ಣುಗಳಾವುದೇ?

ಹೌದು.

ರಕ್ತದಲ್ಲಿ ದೋಷದಿಂದ ಆಗಿಂದಾಗ್ಗೆ ಚಿಕ್ಕ ಕುರುಗಳು ಉಂಟಾಗುವುದೇ?

ಸಾಮಾನ್ಯವಾಗಿ ಉಂಟಾಗುವುದಿಲ್ಲ.

**ಮೊಡವೆ ಉಂಟಾಗಲು ಕಾರಣವೇನು?**

ಸ್ಪಷ್ಟವಾದ ಕಾರಣ ಗೊತ್ತಿಲ್ಲ. ಆದರೆ ಹದಿಹರೆಯದಲ್ಲಿ ಹಾರ್ಮೋನ್‌ಗಳಲ್ಲಿ ಉಂಟಾಗುವ ಬದಲಾವಣೆಯಿಂದ ಮೊಡವೆಗಳು ಕಾಣಿಸಿಕೊಳ್ಳುತ್ತವೆ.

ಮೇಲುತುಟಿ ಮತ್ತು ಮೂಗು ಮತ್ತು ಮುಖದಲ್ಲಿ ಸೋಂಕು ಅಪಾಯಕಾರಿಯೇ?

ಹೌದು. ಅವುಗಳನ್ನು ಹಿಸುಕಬಾರದು. ಹಾಗೇನಾದರೂ ಹಿಸುಕಿದರೆ ಸೋಂಕು ತಲೆಬುರುಡೆಯಲ್ಲಿ ಶಿರೆ (ವೇಯ್ನ್)ಗಳಿಗೆ ಹರಡುತ್ತದೆ.

**ಸೋಂಕು ಹರಡದಂತೆ ತಡೆಗಟ್ಟಲು ಏನು ಮಾಡಬೇಕು?**

1) ನೀವಿರುವ ಜಾಗವನ್ನು ಶುಭ್ರವಾಗಿಡಬೇಕು.

2) ಸೋಂಕು ಉಂಟಾಗಿರುವ ಭಾಗವನ್ನು ಹಿಸುಕಬಾರದು.

3) ಬಿಸಿ ನೀರಿನಲ್ಲಿ ಅದ್ದಿ ಹಿಂಡಿದ ಬಟ್ಟೆಯನ್ನು ಸುತ್ತಬೇಕು.

4) ವೈದ್ಯರ ಸಲಹೆಯಂತೆ ಆಂಟಿಬಯೋಟಿಕ್ಸ್‌ನ್ನು ತೆಗೆದುಕೊಳ್ಳಬೇಕು.

5) ಸೋಂಕಿನಲ್ಲಿರುವ ಕೀವನ್ನು ವೈದ್ಯರಿಂದ ತೆಗೆಸಿಬಿಡಬೇಕು.

ಸೋಂಕಿನ ಜೊತೆ ಜ್ವರವು ಇದ್ದರೆ ಕೆಲಸ-ಕಾರ್ಯಗಳಲ್ಲಿ ತೊಡಗಬಾರದು.

**ಕೆಲವರು ಅನೇಕ ರೀತಿಯ ಸೋಂಕಿಗೆ ತುತ್ತಾಗುತ್ತಾರೆ. ಮತ್ತೆ ಕೆಲವರು ಸೋಂಕಿನಿಂದ ಮುಕ್ತರಾಗಿರಲು ಕಾರಣವೇನು ?**

ಬ್ಯಾಕ್ಟೀರಿಯಾಗಳಿಗೆ ನಿರೋಧಶಕ್ತಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಕೆಲವರಲ್ಲಿ, ಕೆಲವು ಬ್ಯಾಕ್ಟೀರಿಯಾಗಳಿಗೆ ನಿರೋಧಕ ಶಕ್ತಿಯ ಕೊರತೆ ಇರುತ್ತದೆ. ಇದರಿಂದ ಸೋಂಕು ಪುನರಾವರ್ತನೆಯಾಗುತ್ತಿರುತ್ತದೆ. ಉದಾ.: ಚಿಕ್ಕ ಕುರುಗಳು.

ಸಕ್ಕರೆ ಕಾಯಿಲೆಯಿಂದ ನರಳುತ್ತಿರುವವರು ಬೇಗನೆ ಸೋಂಕಿಗೆ ತುತ್ತಾಗುವರೇ?

ಹೌದು. ಆದರೆ ಸಕ್ಕರೆ ಕಾಯಿಲೆಯನ್ನು ನಿಯಂತ್ರಿಸಿಕೊಳ್ಳುವುದರಿಂದ ಸೋಂಕು ಉಂಟಾಗುವುದನ್ನು ತಡೆಗಟ್ಟಿಕೊಳ್ಳಬಹುದು.

ರಕ್ತದಲ್ಲಿ ಸೋಂಕು ಇರುವುದನ್ನು ತಿಳಿಯುವುದು ಹೇಗೆ?

ಪ್ರಯೋಗ ಶಾಲೆಯಲ್ಲಿ ರಕ್ತವನ್ನು ಪರೀಕ್ಷಿಸಿಕೊಳ್ಳುವುದರಿಂದ.

ಬ್ಯಾಕ್ಟೀರಿಯಾ ಸೋಂಕಿನ ವಿರುದ್ಧ ಚುಚ್ಚುಮದ್ದು ಹಾಕಿಸಿಕೊಳ್ಳಬಹುದೇ?

ಕೆಲವಕ್ಕೆ ಚುಚ್ಚುಮದ್ದು ಹಾಕಿಕೊಳ್ಳಬಹುದು. ಮತ್ತೇ ಕೆಲವಕ್ಕೆ ಇನ್ನು ಚುಚ್ಚುಮದ್ದು ಬಂದಿಲ್ಲ. ಟಿಟನಸ್, ಟೈಫಾಯ್ಡ್ ಸೋಂಕಿಗೆ ಚುಚ್ಚುಮದ್ದು ಹಾಕಿಸಿಕೊಂಡು ತಡೆಗಟ್ಟಿಕೊಳ್ಳಬಹುದು.